# ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 7 ಮಂಗಳವಾರ 2025

ಸಂಪುಟ: 45 | ಸಂಚಿಕೆ: 261 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



### ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿ ಮಾಡಿದ ಸಂಸದ ಯದುವೀರ್

# ಮೈಸೂರು ವಿಮಾನ ನಿಲ್ದಾಣ ವಿಸ್ತರಣೆಗೆ ಭೂಮಿ ಹಸ್ತಾಂತರಕ್ಕೆ ಮನವಿ

ಬೆಂಗಳೂರು, ಜ.6(ಬಿಎಲ್‌ಯು)- ಸಾಂಸ್ಕೃತಿಕ ನಗರಿ ಮೈಸೂರು ವಿಮಾನ ನಿಲ್ದಾಣದ ಮೊದಲ ಹಂತದ ವಿಸ್ತರಣೆಗೆ ಅಗತ್ಯ ಭೂಮಿಯನ್ನು ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಹಸ್ತಾಂತರ ಮಾಡುವಂತೆ ಮೈಸೂರು-ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿ ಸಿದ್ದರಾಮಯ್ಯ ಅವರನ್ನು ಯದುವೀರ್ ಭೇಟಿ ಮಾಡಿ, ಮನವಿ ಸಲ್ಲಿಸಿದರು.

ಮೈಸೂರು ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿದೆ. ಮೈಸೂರು ಪ್ರವಾಸಿ ತಾಣವೂ ಆಗಿರುವ ಹಿನ್ನೆಲೆಯಲ್ಲಿ ದೇಶ-ವಿದೇಶದ ಪ್ರವಾಸಿಗರು ಹೆಚ್ಚಾಗಿ ಆಗಮಿಸುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಯಾಣಿಕರು ಹಾಗೂ ಉದ್ಯಮಿಗಳಿಗೆ ಅನುಕೂಲವಾಗಲು ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ ತುರ್ತು ಅಗತ್ಯ. ಈ ಹಿನ್ನೆಲೆ 46 ಎಕರೆ ಭೂಮಿಯನ್ನು ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಹಸ್ತಾಂತರ ಅವಶ್ಯವಿದೆ. ಈ ನಿಟ್ಟಿನಲ್ಲಿ ನೀವು ಕಾರ್ಯೋನ್ಮುಖರಾಗಬೇಕು ಎಂದು ಯದುವೀರ್ ಕೋರಿದರು.

ಭೂ ಸ್ವಾಧೀನಕ್ಕೆ ವಿಶೇಷ ಜಿಲ್ಲಾಧಿಕಾರಿಗಳ ಒಪ್ಪಿಗೆ ದೊರೆತಿದೆ. ಆದರೆ ಭೂ ಮಾಲೀಕರಿಗೆ ಪರಿಹಾರ ಪಾವತಿ ಮಾಡದ ಕಾರಣ ಹಸ್ತಾಂತರ ಪ್ರಕ್ರಿಯೆ ನಿಂತಂತಿದೆ. ಈ ನಿಟ್ಟಿನಲ್ಲಿ ಸರ್ಕಾರ ಕೂಡಲೇ ರೈತರಿಗೆ ಪರಿಹಾರ ನೀಡಿ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದರು. ರಾಜ್ಯ ಸರ್ಕಾರ ಭೂಮಿ ಹಸ್ತಾಂತರ ಮಾಡಲು ವಿಳಂಬ ಧೋರಣೆ ತಳೆದಿರುವ ಕಾರಣ ವಿಮಾನ ನಿಲ್ದಾಣ ವಿಸ್ತರಣೆ ಕಾರ್ಯಕ್ಕೆ ಅಡ್ಡಿಯಾಗಿದೆ. ಈ ಹಿನ್ನೆಲೆಯಲ್ಲಿ ನೀವು ಮಧ್ಯ ಪ್ರವೇಶಿಸಿ ತ್ವರಿತಗತಿಯಲ್ಲಿ ಹಸ್ತಾಂತರ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದರು.

ವಿಮಾನ ನಿಲ್ದಾಣದ ಬಳಿ ಕಾಲುವೆ, ವಿದ್ಯುತ್ ತಂತಿ ಮಾರ್ಗವಿದ್ದು, ರಾಜ್ಯ ಸರ್ಕಾರ ಕೂಡಲೇ ಇದನ್ನು ತೆರವು ಮಾಡಬೇಕು ಎಂದು ಯದುವೀರ್ ಒತ್ತಾಯಿಸಿದರು. ಈ ವೇಳೆ ಯದುವೀರ್ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಿದ್ದರಾಮಯ್ಯ, ಮೈಸೂರು ವಿಮಾನ ನಿಲ್ದಾಣ ಹಾಗೂ ಕ್ರಿಕೆಟ್ ಮೈದಾನಕ್ಕೆ ಸಂಬಂಧಿಸಿದ ಭೂಮಿ ಹಸ್ತಾಂತರ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಈ ಸಂದರ್ಭದಲ್ಲಿ ಹಾಜರಿದ್ದರು.

**ಸಿದ್ದರಾಮಯ್ಯ ಭೇಟಿಯ ಕುತೂಹಲ:** ಮೈಸೂರಿನ ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರು ನಾಮಕರಣ ■6ನೇ ಪುಟಕ್ಕೆ

### ಅಂತಾರಾಷ್ಟ್ರೀಯ ಸ್ಟೇಡಿಯಂಗೂ ಭೂಮಿ ಹಸ್ತಾಂತರ ಮಾಡಿ

ಮೈಸೂರಿನಲ್ಲಿ ನಿರ್ಮಾಣ ಮಾಡಲುದ್ದೇಶಿಸಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಅಗತ್ಯ ಭೂಮಿಯನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ ಹಸ್ತಾಂತರ ಮಾಡಬೇಕು ಎಂದು ಇದೇ ವೇಳೆ ಯದುವೀರ್ ಮನವಿ ಮಾಡಿದರು. ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾದರೆ ಮೈಸೂರಿನಲ್ಲಿ ಉದ್ಯೋಗವಕಾಶಗಳು ಹೆಚ್ಚಾಗುತ್ತವೆ. ಈ ಹಿನ್ನೆಲೆಯಲ್ಲಿ ಭೂಮಿ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಕೋರಿದರು.



ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಸಂಸದ ಯದುವೀರ್ ಸೋಮವಾರ ಮನವಿ ಸಲ್ಲಿಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಇದ್ದಾರೆ.

### ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನೆಲಸಮ ಮಾಡಬೇಡಿ

ಮೈಸೂರಿನ ಪಾರಂಪರಿಕ ಶೈಲಿಯ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳನ್ನು ನೆಲಸಮ ಮಾಡದೆ ಸಂರಕ್ಷಿಸಬೇಕು ಎಂದು ಇದೇ ವೇಳೆ ಯದುವೀರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಮನವಿ ಮಾಡಿದರು. ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳು ಪಾರಂಪರಿಕ ಶೈಲಿಯಲ್ಲಿದ್ದು, ಮೈಸೂರಿಗೆ ಕಳಸಪ್ರಾಯವಾಗಿವೆ. ಈ ಹಿನ್ನೆಲೆಯಲ್ಲಿ ಇವುಗಳನ್ನು ನೆಲಸಮಗೊಳಿಸದೆ ಸಂರಕ್ಷಿಸಬೇಕು ಎಂದು ಒತ್ತಾಯಿಸಿದರು.

## ಬೆಂಗಳೂರಿನ ಇಬ್ಬರು ಮಕ್ಕಳಲ್ಲಿ

# ಚೀನಾ ವೈರಸ್ ಪತ್ತೆ

### ಬೆಚ್ಚಿ ಬಿದ್ದ ಜನತೆ; ಇದರ ಬಗ್ಗೆ ಏನೂ ಆತಂಕ ಬೇಡ: ಸರ್ಕಾರ




**ಬೆಂಗಳೂರು, ಜ.6(ಕೆಎಂಶಿ)- ಮಹಾಮಾರಿ ಕೋವಿಡ್-19 ಕೊನೆಗೊಂಡಿತೆಂದು ನೆಮ್ಮದಿಯ ನಿಟ್ಟುಸಿರು ಬಿಡುವ ಬೆನ್ನಲ್ಲೇ ರಾಜ್ಯದಲ್ಲಿ ಚೀನಾದ ಹ್ಯೂಮನ್ ಮೆಟಾಪ್ನ್ಯೂಮೋ ವೈರಸ್ (ಎಚ್‌ಎಂಪಿವಿ) ಪತ್ತೆಯಾಗಿ ಜನತೆಯನ್ನು ಬೆಚ್ಚಿ ಬೀಳಿಸಿದೆ.**

ಎಚ್‌ಎಂಪಿ ವೈರಸ್ ರಾಜ್ಯದಲ್ಲಿ ಎರಡು ಮಕ್ಕಳಲ್ಲಿ ದೃಢಪಟ್ಟಿದೆ. ಆದರೆ, ಸರ್ಕಾರ ಈ ವೈರಸ್ ಬಗ್ಗೆ ಆತಂಕಪಡುವ ಅಗತ್ಯವಿಲ್ಲ ಎಂದು ತಿಳಿಸಿದೆ. ರಾಜ್ಯದಲ್ಲಿ ಕಂಡು ಬಂದಿರುವ ಈ ವೈರಸ್‌ಗೂ ಚೀನಾದಲ್ಲಿ ಕಾಣಿಸಿಕೊಂಡಿರುವ ವೈರಸ್‌ಗೂ ಹೋಲಿಕೆ ಇದೆಯೇ ಎಂಬ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಲಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತ ಹೇಳಿದ್ದಾರೆ. ಎರಡು ವರ್ಷದೊಳಗಿನ ಶಿಶುಗಳಲ್ಲಿ ಶೀಘ್ರವಾಗಿ ಹರಡುವ ಈ ವೈರಸ್ ನಗರದಲ್ಲಿ 8 ಹಾಗೂ 3 ತಿಂಗಳ ಮಗುವಿನಲ್ಲಿ ಪತ್ತೆಯಾಗಿದೆ.

ಹ್ಯೂಮನ್ ಮೆಟಾಪ್ನ್ಯೂಮೋ ವೈರಸ್ (ಎಚ್‌ಎಂಪಿವಿ) ಎಂದು ಗುರುತಿಸಲಾದ ಈ ವೈರಸ್ ರೋಗ ಲಕ್ಷಣಗಳು ಕೋವಿಡ್-19ರಂತೆಯೇ ಇವೆ.

ನಗರದಲ್ಲಿ ಕಾಣಿಸಿಕೊಂಡ ಮೊದಲ ಪ್ರಕರಣದ ಪ್ರಕಾರ, 8 ತಿಂಗಳ ಮಗುವಿಗೆ ಕೆಲವು ದಿನಗಳ ಹಿಂದೆ ಜ್ವರ ಬಂದ ಹಿನ್ನೆಲೆಯಲ್ಲಿ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ, ರಕ್ತ ಪರೀಕ್ಷೆ ಮಾಡಿದಾಗ ಶಿಶುವಿನಲ್ಲಿ ಎಚ್‌ಎಂಪಿ ವೈರಸ್ ■6ನೇ ಪುಟಕ್ಕೆ

## ದೇಶದಲ್ಲಿ ಸೋಂಕಿತರ ಸಂಖ್ಯೆ 5ಕ್ಕೆ ಏರಿಕೆ

### ಮುನ್ನೆಚ್ಚರಿಕೆ ವಹಿಸಲು ಕೇಂದ್ರ ಆರೋಗ್ಯ ಸಚಿವಾಲಯ ಸೂಚನೆ



ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ

ನವದೆಹಲಿ: ಚೀನಾದಲ್ಲಿ ಹರಡುತ್ತಿರುವ ಹೊಸ ಹ್ಯೂಮನ್ ಮೆಟಾಪ್ನ್ಯೂಮೋ ವೈರಸ್ ಭಾರತಕ್ಕೂ ಕಾಲಿಟ್ಟಿದೆ. ಕರ್ನಾಟಕದಲ್ಲಿ ಇಬ್ಬರು ಸೋಂಕಿತರು ಸೇರಿದಂತೆ ದೇಶಾದ್ಯಂತ ಸೋಂಕಿತರ ಸಂಖ್ಯೆ 5ಕ್ಕೇರಿದೆ. ಹೀಗಾಗಿ ಕೇಂದ್ರ ಆರೋಗ್ಯ ಸಚಿವಾಲಯ ಮಾರ್ಗಸೂಚಿ ಪ್ರಕಟಿಸಿದೆ.

ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರು, ಕೇಂದ್ರದ ಸಿದ್ಧತೆಗಳು ಮತ್ತು ಹೊಸ ವೈರಸ್ ಬಗ್ಗೆ ಹಲವು ವಿಷಯಗಳನ್ನು ಹಂಚಿಕೊಂಡಿದ್ದಾರೆ. ನಾವು ಪರಿಸ್ಥಿತಿಯನ್ನು ಗಮನಿಸುತ್ತಿದ್ದೇವೆ ಮತ್ತು ನೆರೆಯ ದೇಶಗಳಲ್ಲಿ ವೈರಸ್‌ನ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ಆರೋಗ್ಯ ಸಚಿವ ಜೆ.ಪಿ.ನಡ್ಡಾ ಹೇಳಿದ್ದಾರೆ. ನಾವು ಸಿದ್ಧರಿದ್ದೇವೆ, ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ನಾವು ಎಲ್ಲಾ ಅಂಶಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದೇವೆ ಎಂದು ಹೇಳಿದರು. ಇದು ಹೊಸ ವೈರಸ್ ಅಲ್ಲ, 2001ರಲ್ಲಿಯೇ ವೈರಸ್ ಅನ್ನು ಗುರುತಿಸಲಾಗಿದೆ ಎಂದು ಜೆಪಿ ನಡ್ಡಾ ಹೇಳಿದರು. ಈ ಹೊಸ ವೈರಸ್ ■6ನೇ ಪುಟಕ್ಕೆ

## ಕೇಂದ್ರ ಮಾರ್ಗಸೂಚಿ ಅನ್ವಯ ಮುಂಜಾಗ್ರತಾ ಕ್ರಮ ಕೈಗೊಳ್ತೇವೆ

ಬೆಂಗಳೂರು, ಜ.6(ಕೆಎಂಶಿ)- ಹೆಚ್‌ಎಂಪಿ ವೈರಾಣು ಆತಂಕಕಾರಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಇಂದಿಲ್ಲಿ ಸ್ಪಷ್ಟಪಡಿಸಿದೆ. ನಗರದಲ್ಲಿ ಎರಡು ಹೆಚ್‌ಎಂಪಿ ವೈರಸ್ ಪ್ರಕರಣಗಳ ಪತ್ತೆ ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ನಡೆಸಿದ ಉನ್ನತ ಮಟ್ಟದ ಸಭೆ ಬಳಿಕ ಈ ಸ್ಪಷ್ಟನೆ ನೀಡಲಾಗಿದೆ.

ರಾಜ್ಯದಲ್ಲಿ ಜ್ವರ ಮತ್ತು ಉಸಿರಾಟದ ತೊಂದರೆಯಂತಹ ತೀವ್ರತರ ಪ್ರಕರಣಗಳು ವರದಿಯಾಗಿಲ್ಲ. ಇಷ್ಟಾದರೂ ನಾವು ಕೇಂದ್ರದ ಮಾರ್ಗಸೂಚಿ ಅನ್ವಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುವುದಾಗಿ ತಿಳಿಸಿದೆ. ಬಾಧಿತ ರೋಗಿಗಳಲ್ಲಿ ಯಾರೊಬ್ಬರೂ ಅಂತರರಾಷ್ಟ್ರೀಯ ■6ನೇ ಪುಟಕ್ಕೆ




ದಿನೇಶ್ ಗುಂಡೂರಾವ್

### ಡಾ.ಅಂಬೇಡ್ಕರ್ ಕುರಿತ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ

# ವಿವಿಧ ಸಂಘಟನೆಗಳಿಂದ ಇಂದು 'ಮೈಸೂರು ಬಂದ್'

- ದಲಿತಪರ ಸಂಘಟನೆಗಳು, ರೈತ ಸಂಘ ಬೆಂಬಲ
- ಪೌರಕಾರ್ಮಿಕರ ನೈತಿಕ ಬೆಂಬಲ
- ಪರಿಸ್ಥಿತಿ ಆಧರಿಸಿ ಬಸ್ ಸಂಚಾರ
- ಶಾಲೆಗಳಿಗೆ ಅಧಿಕೃತ ರಜೆ ಘೋಷಿಸಿಲ್ಲ
- ಲಾರಿ ಮಾಲೀಕರ ನೈತಿಕ ಬೆಂಬಲ
- ಕಚೇರಿಗಳು ಎಂದಿನಂತೆ ತೆರೆದಿರುತ್ತವೆ
- ವ್ಯಾಪಕ ಪೊಲೀಸ್ ಬಂದೋಬಸ್ತ್



ಮೈಸೂರು, ಜ.6(ಆರ್‌ಕೆ)- ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಕುರಿತಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ಡಾ.ಬಿ.ಆರ್. ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳು ನಾಳೆ (ಜ.7) 'ಮೈಸೂರು ಬಂದ್'ಗೆ ಕರೆ ನೀಡಿವೆ. ಪ್ರಗತಿಪರ ಸಂಘಟನೆಗಳು, ಡಾ.ಬಿ.ಆರ್.ಅಂಬೇಡ್ಕರ್ ಸಂಘ, ಪೌರ ಕಾರ್ಮಿಕರ ಸಂಘಗಳು, ಕರ್ನಾಟಕ ರಾಜ್ಯ ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಬಂದ್‌ಗೆ ಬೆಂಬಲ ಸೂಚಿಸಿವೆ.

ಮಂಗಳವಾರ ಬಂದ್ ಹಿನ್ನೆಲೆಯಲ್ಲಿ ಕರ್ತವ್ಯಕ್ಕೆ ಹಾಜರಾಗದಿರಲು ಪೌರ ಕಾರ್ಮಿಕರು ನಿರ್ಧರಿಸಿದ್ದಾರೆ. ಬೆಳಗ್ಗೆ 10 ಗಂಟೆಗೆ ಪುರಭವನದ ಆವರಣದಿಂದ ಭಾರಿ ಮೆರವಣಿಗೆ ಆರಂಭವಾಗಿ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿವರೆಗೆ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಿದ್ದಾರೆ.

**ನೈತಿಕ ಬೆಂಬಲ:** ಮೈಸೂರು ಹೋಟೆಲ್ ಮಾಲೀಕರ ಸಂಘವು ಬಂದ್‌ಗೆ ನೈತಿಕ ಬೆಂಬಲ ನೀಡಲಿದ್ದು, ಕೊರಳಿಗೆ ಕಪ್ಪು ಪಟ್ಟಿ ಧರಿಸಿ ಕೆಲಸ ಮಾಡುವುದಾಗಿ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತು ಕೇಂದ್ರ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಬಗ್ಗೆ ನಮಗೂ ಬೇಸರವಿದೆ ಎಂದಿದ್ದಾರೆ. ನಾವು ಬಂದ್‌ಗೆ ನೈತಿಕ ಬೆಂಬಲ ನೀಡುತ್ತೇವೆ. ಆದರೆ, ಆಟೋ ಚಾಲನೆಯನ್ನು ಸ್ಥಗಿತಗೊಳಿಸುವುದಿಲ್ಲ ಎಂದು ಮೈಸೂರು ಜಿಲ್ಲಾ ಆಟೋ ಮಾಲೀಕರ ಸಂಘದ ಅಧ್ಯಕ್ಷ ಮಹದೇವಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

**ಪರಿಸ್ಥಿತಿ ಆಧರಿಸಿ ಬಸ್ ಸಂಚಾರ:** ಬಂದ್ ಹಿನ್ನೆಲೆಯಲ್ಲಿ ಸರ್ಕಾರ ತಮಗೆ ಯಾವುದೇ ಸೂಚನೆ ನೀಡದಿರುವುದರಿಂದ ನಾವು ಎಂದಿನಂತೆ ಬಸ್‌ಗಳನ್ನು ಓಡಿಸುತ್ತೇವೆ. ■6ನೇ ಪುಟಕ್ಕೆ

## ಹೃದಯಾಘಾತ: ಮೂರನೇ ತರಗತಿ ಬಾಲಕಿ ಸಾವು

ಚಾಮರಾಜನಗರ, ಜ. 6- ಬೆಳಗ್ಗೆ ಮನೆಯಲ್ಲೇ ಹೆತ್ತವರಿಗೆ ಟಾಟಾ ಹೇಳಿ ಖುಷಿಯಾಗಿ ಶಾಲೆಗೆ ತೆರಳಿದ 8 ವರ್ಷದ ಬಾಲಕಿ ಶಾಲೆಯಲ್ಲೇ ಹೃದಯಾಘಾತದಿಂದ ಮೃತಪಟ್ಟ ಧಾರುಣ ಘಟನೆ ಚಾಮರಾಜನಗರದಲ್ಲಿ ನಡೆದಿದೆ. ಬದನಗುಪ್ಪೆ ಗ್ರಾಮದ ನಿಂಗರಾಜು ಮತ್ತು ಶೃತಿ ದಂಪತಿ ಪುತ್ರಿ 8 ವರ್ಷದ ತೇಜಸ್ವಿನಿ ಸಾವನ್ನಪ್ಪಿದ ಬಾಲಕಿಯಾಗಿದ್ದು, ಈಕೆ ಚಾಮರಾಜನಗರದ ವರ್ತಕರ ಭವನ ಸಮೀಪವಿರುವ ಸೇಂಟ್ ಫ್ರಾನ್ಸಿಸ್ ಶಾಲೆಯಲ್ಲಿ 3ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಆರೋಗ್ಯವಂತಳಾಗಿದ್ದ ■6ನೇ ಪುಟಕ್ಕೆ



ತೇಜಸ್ವಿನಿ

## ಆನ್‌ಲೈನ್ ಮೂಲಕ ಸಂಚಾರ ದಂಡ ಪಾವತಿಸುವ ವೆಬ್‌ಸೈಟ್ ಕಾರ್ಯ ಸ್ಥಗಿತ

### ಠಾಣೆಗಳಲ್ಲೇ ದಂಡ ಪಾವತಿಸಬೇಕಾದ ಅನಿವಾರ್ಯತೆ

ಮೈಸೂರು, ಜ.6(ಆರ್‌ಕೆ)- ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಸಂಚಾರ ಉಲ್ಲಂಘನೆ ದಂಡ ಪಾವತಿ ವೆಬ್‌ಸೈಟ್ (https:||payfine, mchallan.com:7271) ಕಾರ್ಯ ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರು ದಂಡ ಪಾವತಿಸಲು ಸಂಚಾರ ಠಾಣೆಗಳಿಗೇ ಖುದ್ದು ಭೇಟಿ ನೀಡಿ ಟ್ರಾಫಿಕ್ ಫೈನ್ ಕಟ್ಟಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಸಂಚಾರ ನಿಯಮ ಉಲ್ಲಂಘಿಸುವವರು ದಂಡದ ಮೊತ್ತ ಪಾವತಿಸುವ ಪ್ರಮಾಣ ಮಂದಗತಿಯಲ್ಲಿರುವಾಗ ಆನ್‌ಲೈನ್ ಸೌಲಭ್ಯವೂ ಇಲ್ಲವಾದರೆ ಪರಿಣಾಮಕಾರಿಯಾಗಿ ದಂಡ ವಸೂಲಿಗೆ ಹಿನ್ನಡೆಯಾಗಲಿದೆ. ಮೈಸೂರು ನಗರವೊಂದರಲ್ಲೇ 2024ರ ಡಿಸೆಂಬರ್ ಮಾಹೆಯಂತೆ 240 ಕೋಟಿ ರೂ. ದಂಡ ಬಾಕಿ ಇದೆ. ಈ ಹಿಂದೆ ವೆಬ್‌ಸೈಟ್‌ನಲ್ಲಿ ದಂಡ ಪಾವತಿ, ತಮ್ಮ ವಾಹನಗಳ ಮೇಲೆ ಬಾಕಿ ದಂಡವಿರುವುದನ್ನು ಪರೀಕ್ಷಿಸಿಕೊಳ್ಳಲು ಅವಕಾಶವಿದ್ದರಿಂದ ವಾಹನಗಳ ಮಾಲೀಕರು ಆನ್‌ಲೈನ್‌ನಲ್ಲೇ ದಂಡ ಪಾವತಿಸುತ್ತಿದ್ದರು. ಈಗ ಆ ವ್ಯವಸ್ಥೆ ಇಲ್ಲದಿರುವುದರಿಂದ ■6ನೇ ಪುಟಕ್ಕೆ









### ಮುಡಾದಿಂದ ಬಿಡುಗಡೆಯಾಗದ, ಪಾರ್ಕ್ ಜಾಗದಲ್ಲಿ ನಿವೇಶನ ರಚಿಸಿ ಮಾರಾಟ ಮಾಡಿದ ಪ್ರಕರಣ

# ಭವ್ಯಭಾರತ ಬಡಾವಣೆಯ 30 ನಿವೇಶನಗಳ ನೋಂದಣಿ, ಖಾತಾ ರದ್ದುಪಡಿಸಲು ಸೂಚನೆ

ಮೈಸೂರು, ಜ.6(ಆರ್‌ಕೆ)-ಶೇ.50:50ರ ಅನುಪಾತದಡಿ ಸಾವಿರಾರು ಮುಡಾ ನಿವೇಶನಗಳನ್ನು ಕಾನೂನು ಉಲ್ಲಂಘಿಸಿ ಪರಭಾರೆ ಮಾಡಿರುವ ಹಗರಣದ ತನಿಖೆ ನಡೆಯುತ್ತಿರುವ ಬೆನ್ನಲ್ಲೇ ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘವೊಂದು ಅನುಮೋದಿತ ನಕ್ಷೆಯಲ್ಲಿ ಪಾರ್ಕ್ ಎಂದು ತೋರಿಸಿರುವ ಜಾಗದಲ್ಲಿ ನಿವೇಶನಗಳನ್ನು ಮಾಡಿ ಮಾರಾಟ ಮಾಡಿರುವುದಲ್ಲದೆ, ಮುಡಾದಿಂದ ಬಿಡುಗಡೆಯಾಗದಿದ್ದರೂ (ಸಿಡಿ ಪಟ್ಟಿ) ಅಂತಹ ನಿವೇಶನಗಳನ್ನು ಹಂಚಿಕೆ ಮಾಡಿರುವ ಪ್ರಕರಣ ಇದೀಗ ತಡವಾಗಿ ಬೆಳಕಿಗೆ ಬಂದಿದೆ.

ಈ ಕುರಿತಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧೀಕ್ಷಕ ಅಭಿಯಂತರರು ಮೈಸೂರಿನ ಉಪನೋಂದಣಾಧಿಕಾರಿ (ಉತ್ತರ) ಗಳಿಗೆ ಸದರಿ ನಿವೇಶನಗಳ ಸೇಲ್ ಡೀಡ್ ನೋಂದಣಿಯನ್ನು ರದ್ದುಪಡಿಸುವಂತೆ ಹಾಗೂ ಸಿಡಿ ಪಟ್ಟಿ ಬಿಡುಗಡೆಯಾಗದೆ ನೋಂದಣಿಯಾಗಿರುವ ನಿವೇಶನಗಳ ಖಾತಾ ರದ್ದುಪಡಿಸುವಂತೆ ಮೈಸೂರು ಮಹಾನಗರಪಾಲಿಕೆ ವಲಯ ಕಚೇರಿ 2ರ ವಲಯಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಅಲ್ಲದೆ, ಮುಡಾ ಕಾರ್ಯದರ್ಶಿಗಳಿಗೆ ಆಂತರಿಕ ಪತ್ರ ಬರೆದಿರುವ ಅವರು ಮೈಸೂರು ತಾಲೂಕು ಕಸಬಾ ಹೋಬಳಿ ಶ್ರೀರಾಂಪುರ ಸರ್ವೆ ನಂ. 18/1, 2, 19/2 ಹಾಗೂ 52/1,2ರಲ್ಲಿ ಭವ್ಯ ಭಾರತ ಗೃಹ ನಿರ್ಮಾಣ ಸಹಕಾರ ಸಂಘದವರು ಬಡಾವಣೆ ರಚಿಸಿದ್ದು, ಅನುಮೋದಿತ ನಕ್ಷೆಯಲ್ಲಿ ಉದ್ಯಾನವನ ಎಂದು ಗುರುತಿಸಿರುವ ಜಾಗದಲ್ಲಿ ಕಾನೂನುಬಾಹಿರವಾಗಿ 58/ಎ, 58/ಬಿ, 58/ಸಿ, 58/ಡಿ, 58/ಇ, 58/ಎಫ್, 58/ಜಿ ಮತ್ತು 58/ಹೆಚ್ ಎಂಬ ಸಂಖ್ಯೆಯ ನಿವೇಶನಗಳನ್ನು ಸೃಷ್ಟಿಸಿ, ಮಾರಾಟ ಮಾಡಿರುವುದು ಭೂ ಪರಿವರ್ತನೆ ಕಾನೂನುಗಳನ್ನು ಉಲ್ಲಂಘನೆ ಮಾಡಲಾಗಿದೆ. ಜೊತೆಗೆ ಉತ್ತರ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ 2007ರಿಂದ 2008ರ ಸಾಲಿನಲ್ಲಿ ಸದರಿ ನಿವೇಶನಗಳನ್ನು ಶುದ್ಧ ಕ್ರಯ ಮಾಡಲಾಗಿದೆ ಎಂದು ಆರ್‌ಟಿಐ ಕಾರ್ಯಕರ್ತ ಎನ್.ಗಂಗರಾಜು ದೂರು ನೀಡಿದ್ದಾರೆ ಎಂಬುದನ್ನು ಅವರು ಆಂತರಿಕ ಪತ್ರದಲ್ಲಿ ನಮೂದಿಸಿದ್ದಾರೆ. ಈ ಸಂಬಂಧ ಮುಡಾ ಆಯುಕ್ತರ ಟಿಪ್ಪಣಿಯಲ್ಲಿ ಸದರಿ ಬಡಾವಣೆಯ ನಿವೇಶನಗಳನ್ನು ಮುಡಾದಿಂದ ಬಿಡುಗಡೆಯಾಗದೆ ಇದ್ದರೂ ಸೇಲ್ ಡೀಡ್ ಮತ್ತು ಖಾತೆ ಮಾಡಿರುವುದನ್ನು ರದ್ದು ಮಾಡಲು ಕ್ರಮವಹಿಸುವಂತೆ ತಿಳಿಸಿರುವುದರಿಂದ ಸದರಿ ಅನುಮೋದಿತ ಬಡಾವಣೆಯಲ್ಲಿನ ಉದ್ಯಾನವನದ ಜಾಗದಲ್ಲಿ ರಚಿಸಿರುವ 8 ಹಾಗೂ ಮುಡಾದಿಂದ ಬಿಡುಗಡೆಯಾಗದೆ ಮಾರಾಟ ಮಾಡಿರುವ 22 ಸೇರಿ ಒಟ್ಟು 30 ನಿವೇಶನಗಳ ಕ್ರಯಪತ್ರ ಹಾಗೂ ಖಾತಾ ಕಂದಾಯ ಪತ್ರಗಳನ್ನು ನೀಡಿದ್ದರೆ ಅವುಗಳನ್ನು ತುರ್ತಾಗಿ ರದ್ದುಪಡಿಸುವಂತೆ ಅಧೀಕ್ಷಕ ಅಭಿಯಂತರರು ಕಾರ್ಯದರ್ಶಿಗಳಿಗೆ ಆಂತರಿಕ ಪತ್ರದಲ್ಲಿ ತಿಳಿಸಿದ್ದಾರೆ.

ಈ ನಡುವೆ ಮುಡಾ ವಲಯ ಕಚೇರಿ 1ರ ವಲಯಾಧಿಕಾರಿಗಳು ಉಪನೋಂದಣಾಧಿಕಾರಿ (ಉತ್ತರ) ಗಳಿಗೆ ಪತ್ರ ಬರೆದಿದ್ದು, ಶ್ರೀರಾಂಪುರ ಗ್ರಾಮ ಸರ್ವೆ ನಂ. 18/2, 19/2, 52/1,2ರಲ್ಲಿ ರಚಿಸಿರುವ ಖಾಸಗಿ ವಸತಿ ಬಡಾವಣೆಗೆ ಮುಡಾದಿಂದ ನಕ್ಷೆ ಅನುಮೋದನೆ ಪಡೆದು ಒಟ್ಟು 79 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಆ ಪೈಕಿ 57 ನಿವೇಶನಗಳನ್ನು ಪ್ರಾಧಿಕಾರ ಬಿಡುಗಡೆ ಮಾಡಿದ್ದು, ಉಳಿಕೆ 22 ನಿವೇಶನಗಳನ್ನು ಸಿಡಿ ಪಟ್ಟಿ ಬಿಡುಗಡೆ ಮಾಡಿರುವುದಿಲ್ಲ. ಅಲ್ಲದೆ, ಬಡಾವಣೆ ನಕ್ಷೆಯಲ್ಲಿ ಅನುಮೋದನೆಯಾಗದೆ ಇರುವ ಜಾಗದಲ್ಲಿ ಕಾನೂನುಬಾಹಿರವಾಗಿ ನಿವೇಶನಗಳನ್ನು ಸೃಷ್ಟಿಸಿ ಉತ್ತರ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ 58/ಎ, 58/ಬಿ, 58/ಸಿ, 58/ಡಿ, 58/ಇ, 58/ಎಫ್, 58/ಜಿ ಮತ್ತು 58/ಹೆಚ್‌ರ ಒಟ್ಟು 8 ನಿವೇಶನಗಳನ್ನು ■6ನೇ ಪುಟಕ್ಕೆ



ಮುಡಾ ಕಚೇರಿ

> ಭವ್ಯ ಭಾರತ ಬಡಾವಣೆ ನಿರ್ಮಾಣವಾಗಿ ಸುಮಾರು 25 ವರ್ಷ ಕಳೆದಿದೆ. ಹಾಲಿ ಈ ಬಡಾವಣೆಯ ಸಹಕಾರ ಸಂಘ ಅಸ್ತಿತ್ವದಲ್ಲಿ ಇಲ್ಲ. 10-15 ವರ್ಷದ ಹಿಂದೆಯೇ ಸೂಪರ್‌ಸೀಡ್ ಆಗಿದೆ. ಕಾನೂನು ಬಾಹಿರವಾಗಿ ಬಡಾವಣೆ ನಿರ್ಮಾಣವಾಗಿಲ್ಲ. ಒಂದು ವೇಳೆ ಸೇಲ್ ಡೀಡ್ ಮತ್ತು ಖಾತಾ ರದ್ದುಪಡಿಸಿದ್ದೇ ಆದಲ್ಲಿ ಕಾನೂನು ಹೋರಾಟ ನಡೆಸುತ್ತೇವೆ.-ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಸದಸ್ಯ ಹಾಗೂ ಭವ್ಯ ಭಾರತ ಬಡಾವಣೆಯ ಅಧ್ಯಕ್ಷರಾಗಿದ್ದವರು

ಮೈಸೂರು ಮಿತ್ರ ಮಂಗಳವಾರ 7 ಜನವರಿ 2025

# ನಾಳೆ ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ

ಮೈಸೂರು, ಜ.6(ಜಿಎ)–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಮೈಸೂರು ನಗರ ಘಟಕದ ವತಿಯಿಂದ ಜ.8ರಂದು ಬೆಳಗ್ಗೆ 10.30ಕ್ಕೆ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಈ ವಿಷಯ ತಿಳಿಸಿ, ಅಂದು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ಹಾಗೂ ಪ್ರಶಸ್ತಿ ಪ್ರದಾನವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನೆರವೇರಿಸುವರು. ಲೇಖಕಿ ಡಾ.ಎಂ.ಎಸ್.ವೇದಾ ಹಾಗೂ ಸಮಾಜ ಸೇವಕ ಎಸ್.ಮಹದೇವಯ್ಯ ಅವರು ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಸಾಹಿತಿ ಪ್ರೊ.ಕೃಷ್ಣಮೂರ್ತಿ ಮೈಸೂರು ಅಭಿನಂದನಾ ನುಡಿ ನುಡಿಯಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಸಿ.ಸೋಮಶೇಖರ ವಹಿಸಲಿದ್ದು, ದತ್ತಿ ದಾಸೋಹಿಗಳಾದ ಡಾ.ಶಕುಂತಲ ಜಯದೇವ ಅವರು ಉಪಸ್ಥಿತರಿರಲಿದ್ದಾರೆ ಎಂದರು.

ಜ.18, 19ರಂದು ಚಿತ್ರದುರ್ಗದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಶ್ರೀ ಸಿದ್ದರಾಮ ಬೆಲದಾಳ ಶರಣರು ಈ ಸಮ್ಮೇಳನದಲ್ಲಿ ಸರ್ವಾಧ್ಯಕ್ಷರಾಗಿದ್ದು, ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ದಿವ್ಯ ಸಾನ್ನಿಧ್ಯವನ್ನು ಪರಮಪೂಜ್ಯ ಸುತ್ತೂರು ಶ್ರೀಗಳು ವಹಿಸಲಿದ್ದಾರೆ. ಈ ಸಮ್ಮೇಳನದಲ್ಲಿ ವಿದ್ವಾಂಸರು, ಹರಗುರು ಚರಮೂರ್ತಿಗಳು ಭಾಗವಹಿಸಲಿದ್ದಾರೆ. ಸಮ್ಮೇಳನದಲ್ಲಿ ಭಾಗವಹಿಸಲು ಬಯಸುವವರು 9535500538, 9986540575 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಟಿ.ಎಸ್. ಕುಮಾರಸ್ವಾಮಿ, ಡಾ.ಹೆಚ್.ಮುದ್ದುಮಲ್ಲೇಶ್, ಉಮಾಪತಿ ಉಪಸ್ಥಿತರಿದ್ದರು.

## 'ನಾವೇಕೆ ಸಾಯುತ್ತೇವೆ' ಪುಸ್ತಕ ಕುರಿತು ನಾಳೆ ಚರ್ಚೆ

ಮೈಸೂರು,ಜ.6–ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ –2015ರ ಸಂಯುಕ್ತ ಆಶ್ರಯದಲ್ಲಿ ಜ.8ರಂದು ಸಂಜೆ 6 ಗಂಟೆಗೆ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮರಣದ ಕಡೆಗೆ ಒಂದು ಪ್ರಯಾಣ, 'ನಾವೇಕೆ ಸಾಯುತ್ತೇವೆ' ಪುಸ್ತಕ ಕುರಿತು ಚರ್ಚೆ ಏರ್ಪಡಿಸಲಾಗಿದೆ. ವಯಸ್ಸಾದ ಮತ್ತು ದೀರ್ಘಾಯುಷ್ಯದ ಹೊಸ ವಿಜ್ಞಾನ ನೊಬೆಲ್ ಪ್ರಶಸ್ತಿ ವಿಜೇತ ಮಾಲಿಕ್ಯೂಲರ್ ಜೀವಶಾಸ್ತ್ರಜ್ಞ ಮತ್ತು ಲೇಖಕ ವೆಂಕಿ ರಾಮಕೃಷ್ಣ ಅವರು ಪ್ರೊ.ಸಿ.ನಾಗಣ್ಣ ಅವರೊಂದಿಗೆ ಸಂವಾದ ನಡೆಸಲಿದ್ದಾರೆ.



## ಔಷಧಿ ಹಸ್ತಾಂತರ

**ಬೋಗಾದಿ ಪಟ್ಟಣ ಪಂಚಾಯಿತಿಯ ನಮ್ಮ ಕ್ಲಿನಿಕ್‌ಗೆ 15ನೇ ಹಣಕಾಸಿನ ಯೋಜನೆ ವತಿಯಿಂದ 1,02,000 ರೂ.ಗಳ ಔಷಧಿಗಳನ್ನು ಹಸ್ತಾಂತರಿಸಲಾಯಿತು. ಮುಖ್ಯ ಅಧಿಕಾರಿ ಎಂ.ಬಸವರಾಜು, ಕಿರಿಯ ಆರೋಗ್ಯ ನಿರೀಕ್ಷಕ ಪುನೀತ್‌ಕುಮಾರ್, ವೈದ್ಯಾಧಿಕಾರಿ ಡಾ.ಲೋಕೇಶ್ವರಿ, ಗ್ರೂಪ್ ಡಿ ಕಾಂತರಾಜು ಹಾಜರಿದ್ದರು.**

# ನಾಳೆಯಿಂದ ಹೈ ಲೈಫ್ ಬ್ರೈಡ್ಸ್ ವಸ್ತ್ರಾಭರಣ ಪ್ರದರ್ಶನ, ಮಾರಾಟ

ಮೈಸೂರು, ಜ.6(ಜಿಎ)–ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಜ.8, 9ರಂದು ಹೈ ಲೈಫ್ ವತಿಯಿಂದ ಹೊಸ ವರ್ಷದ ಬ್ರೈಡ್ಸ್ ವಸ್ತ್ರಾಭರಣ ಮಾರಾಟ ಮತ್ತು ಪ್ರದರ್ಶನವನ್ನು ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹೈ ಲೈಫ್ ಬ್ರೈಡ್ಸ್ ಸಹ ಸಂಯೋಜಕಿ ಶೋಮಿಕಾ ಎಸ್.ರಾವ್ ಈ ವಿಷಯ ತಿಳಿಸಿ, ಹೈ ಲೈಫ್ ಬ್ರೈಡ್ ವಧು ಫ್ಯಾಷನ್‌ನ ಅತ್ಯುತ್ತಮತೆ ಯನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಯಾಗಿದ್ದು, ಪ್ರದರ್ಶನದಲ್ಲಿರುವ ಸಂಗ್ರಹವು ವಧುಗಳ ಪರಂಪರೆಯ ಸೊಗಡನ್ನು ಮತ್ತು ಆಧುನಿಕತೆಯನ್ನು ಒಗ್ಗೂಡಿಸುತ್ತದೆ. ಈ ಪ್ರದರ್ಶನದಲ್ಲಿ ಪ್ರಖ್ಯಾತ ಡಿಸೈನರ್ ವಸ್ತ್ರಗಳು, ಲೆಹೆಂಗಾಗಳು, ಸೀರೆಗಳು ಮತ್ತು ಆಧುನಿಕ ಗೌನ್‌ಗಳ ವಿಶಿಷ್ಟ ಆಭರಣಗಳು ಲಭ್ಯವಿದ್ದು, ವಿವಾಹಕ್ಕೆ ಸಿದ್ಧರಾಗಿರುವ ವಧುಗಳು ತಮ್ಮ ಶೈಲಿ ಮತ್ತು ಇಚ್ಛೆಗಳಿಗೆ ತಕ್ಕಂತೆ ಉನ್ನತ ಮಟ್ಟದ ವಿನ್ಯಾಸ ಉಡುಪುಗಳನ್ನು ಆಯ್ಕೆ ಮಾಡಬಹುದು ಎಂದರು.




# ವಿಶ್ವಪ್ರಜ್ಞ ಶಾಲೆಯ ವಾರ್ಷಿಕೋತ್ಸವ



**ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ಶಾಲೆಯ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಪಿ.ಕೆ.ವಿ ಆಚಾರ್ಯ ಸಭಾಭವನದಲ್ಲಿ ಆಯೋಜಿಸಲಾಗಿತ್ತು.**

ಮೈಸೂರು,ಜ.6–ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ಶಾಲೆಯ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಇತ್ತೀಚೆಗೆ ಪಿ.ಕೆ.ವಿ ಆಚಾರ್ಯ ಸಭಾ ಭವನದಲ್ಲಿ ಆಯೋಜಿಸಲಾಗಿತ್ತು.

ಮುಖ್ಯಅತಿಥಿಗಳಾಗಿ ಅಪರ ಜಿಲ್ಲಾಧಿಕಾರಿ ಡಾ॥ಪಿ.ಶಿವರಾಜು ಆಗಮಿಸಿ ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ವಿಶ್ವಪ್ರಜ್ಞ ವಿದ್ಯಾಸಂಸ್ಥೆ ಉಪಾಧ್ಯಕ್ಷ ವೈ.ಎನ್.ಶಂಕರೇಗೌಡ ವಹಿಸಿದ್ದರು.

ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಬಿ.ಕೆ.ಸುರೇಶ್‌ಬಾಬು, ಕಾರ್ಯದರ್ಶಿ ಎಂ.ಎನ್.ಮಹೇಂದ್ರ, ಜಂಟಿ ಕಾರ್ಯದರ್ಶಿ ಎಸ್.ವೈ.ಹೊಂಬಾಳ್, ಆಡಳಿತ ಮಂಡಳಿ ಸದಸ್ಯರಾದ ಆರ್.ಕೆ. ರಾಜು, ಎಸ್.ಸತ್ಯಾನಂದ, ಪರಮೇಶಗೌಡ, ಶಾಲೆಯ ಕಾರ್ಯಾಧ್ಯಕ್ಷ ಎಂ.ಎನ್. ಕೃಷ್ಣಸ್ವಾಮಿ, ಮುಖ್ಯೋಪಾಧ್ಯಾಯಿನಿ ಜಿ.ಎನ್.ಸುಧಾ, ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು 'ಉತ್ಸವ' ಶೀರ್ಷಿಕೆಯೊಂದಿಗೆ ನಮ್ಮ ರಾಜ್ಯದ ಹಬ್ಬಗಳನ್ನು ಬಿಂಬಿಸುವಂತಹ ಗೀತೆಗಳಿಗೆ ನೃತ್ಯ ಮಾಡುವುದರ ಮೂಲಕ ಮನರಂಜನೆಯನ್ನು ನೀಡಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

## ಬತೂಲ್ ಬೇಗಂ ನಿಧನ




ಮೈಸೂರು, ಜ. 6– ಮೈಸೂರಿನ ಸಂತ್ಯಾಜಿರಾವ್ ರಸ್ತೆಯಲ್ಲಿರುವ ಅಲಿ ಬ್ರದರ್ಸ್ ಮಾಲೀಕ ಮಿರ್ ಸಾದಿಕ್ ಅಲಿ ಅವರ ಪತ್ನಿ ಬತೂಲ್ ಬೇಗಂ(88) ಅವರು ಇಂದು ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ವರ್ಗವನ್ನು ಅಗಲಿದ್ದು, ಲಷ್ಕರ್ ಮೊಹಲ್ಲಾದಲ್ಲಿರುವ ಜಫಾರಿಯ ಮಸೀದಿಯಲ್ಲಿ ನಮಾಜ್–ಇ–ಜನಾಜ ನಂತರ ಸಂಜೆ 5 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಎಂ.ಎನ್. ಶಾರದಮ್ಮ



ಮೈಸೂರು, ಜ. 6– ಮೈಸೂರಿನ ರಾಮಕೃಷ್ಣನಗರ ನಿವಾಸಿ ದಿವಂಗತ ಶ್ರೀನಿವಾಸ್ ಅಯ್ಯಂಗಾರ ಪತ್ನಿ ಎಂ.ಎನ್. ಶಾರದಮ್ಮ ಅವರು ನಿನ್ನೆ (ಜ. 5) ಮುಂಜಾನೆ ನಿಧನರಾದರು. ಮೃತರು ಪುತ್ರ ವಿಜಯಕುಮಾರ್ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಎನ್. ಚಿರಂಜೀವಿಗೌಡ



ಮೈಸೂರು, ಜ. 6– ಮೈಸೂರಿನ ಎನ್.ಆರ್. ಮೊಹಲ್ಲಾದ ಯಜಮಾನ್ ದಿವಂಗತ ರಾಮಣ್ಣ ಅವರ ಮೊಮ್ಮಗ ಎನ್. ಚಿರಂಜೀವಿಗೌಡ(23) ಅವರು ಇಂದು ನಿಧನರಾದರು.

ಮೃತರು ತಾಯಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಜ. 7) ಮಧ್ಯಾಹ್ನ 12 ಗಂಟೆಗೆ ಎನ್.ಆರ್. ಮೊಹಲ್ಲಾ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಸರ್ಕಾರಿ ಜಾಗದಲ್ಲಿ ನಿರ್ಮಿಸಿದ್ದ ಅಂಗಡಿ ಮಳಿಗೆಗಳ ನೆಲಸಮ



**ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಪಶ್ಚಿಮ ಗೇಟ್ ಎದುರು ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಅಂಗಡಿ ಮಳಿಗೆಗಳನ್ನು ತಾಲೂಕು ಆಡಳಿತದ ಅಧಿಕಾರಿಗಳು ಸೋಮವಾರ ನೆಲಸಮಗೊಳಿಸಿದರು.**

ಮೈಸೂರು,ಜ.6(ಆರ್‌ಕೆ)– ಮೈಸೂರಿನ ಹೆಬ್ಬಾಳು ಬಡಾವಣೆಯ ವಾಟರ್ ಟ್ಯಾಂಕ್ ಬಳಿ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಪಶ್ಚಿಮ ಗೇಟ್ ಎದುರು ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಅಂಗಡಿ ಮಳಿಗೆಗಳನ್ನು ತಾಲೂಕು ಆಡಳಿತದ ಅಧಿಕಾರಿಗಳು ಇಂದು ನೆಲಸಮಗೊಳಿಸಿದರು.

ಹೆಬ್ಬಾಳು ಗ್ರಾಮದ ಸರ್ವೆ ನಂ.221ರ 1.25 ಎಕರೆ ಸರ್ಕಾರಿ ಜಾಗ ಒತ್ತುವರಿ ಮಾಡಿ ಕೆಲವರು ಐದು ಅಂಗಡಿ ಮಳಿಗೆಗಳನ್ನು ಇತ್ತೀಚೆಗೆ ನಿರ್ಮಿಸಿದ್ದರು. ಕಳೆದ ಶುಕ್ರವಾರವಷ್ಟೇ ಮೈಸೂರು ತಹಸೀಲ್ದಾರ್ ಮಹೇಶ್‌ಕುಮಾರ್ ನೇತೃತ್ವದಲ್ಲಿ ಸ್ಥಳಕ್ಕೆ ತೆರಳಿ ಅನಧಿಕೃತವಾಗಿ ಮಳಿಗೆ ನಿರ್ಮಿಸಿದ್ದವರಿಗೆ ಎಚ್ಚರಿಕೆ ನೀಡಿ ಇದು ಸರ್ಕಾರಿ ಜಾಗ ಎಂದು ಸೂಚನಾ ಫಲಕ ಅಳವಡಿಸಿದ್ದರು. ಅದೇ ವೇಳೆ ನಿರ್ಮಾಣವನ್ನು ತೆರವುಗೊಳಿಸುವಂತೆ ಸೂಚನೆ ನೀಡಲಾಗಿತ್ತಾದರೂ ಕ್ರಮ ವಹಿಸದ ಕಾರಣ ಇಂದು ವಿಜಯನಗರ ಉಪವಿಭಾಗದ ಎಸಿಪಿ ಎಸ್.ಜಿ.ಗಜೇಂದ್ರಪ್ರಸಾದ್, ವಿಜಯನಗರ ಠಾಣೆ ಇನ್‌ಸ್ಪೆಕ್ಟರ್ ಸುರೇಶ್ ಕುಮಾರ್ ಮತ್ತು ಹೆಬ್ಬಾಳು ಠಾಣೆ ಇನ್‌ಸ್ಪೆಕ್ಟರ್ ಎ.ಮಲ್ಲೇಶ್ ನೇತೃತ್ವದಲ್ಲಿ ಪೊಲೀಸ್ ಭದ್ರತೆಯಲ್ಲಿ ತಹಸೀಲ್ದಾರ್ ಅವರು ಅನಧಿಕೃತ ನಿರ್ಮಾಣಗಳನ್ನು ಜೆಸಿಬಿ ಮೂಲಕ ನೆಲಸಮಗೊಳಿಸಿ, ಜಾಗವನ್ನು ಸರ್ಕಾರದ ವಶಕ್ಕೆ ಪಡೆದರು.

ಈ ಸಂದರ್ಭ ಕಟ್ಟಡ ನಿರ್ಮಿಸುತ್ತಿದ್ದ ಕೆಲವರು ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರಾದರೂ, ಆರ್‌ಟಿಸಿ ಸೇರಿದಂತೆ ಮೂಲ ದಾಖಲಾತಿಗಳಲ್ಲಿ ಸದರಿ ಹೆಬ್ಬಾಳು ಸರ್ವೆ ನಂ. 221ರ 1.25 ಎಕರೆ ಜಾಗ ಸರ್ಕಾರದ್ದು ಎಂದು ಇರುವುದರಿಂದ ಅಲ್ಲಿ ಖಾಸಗಿ ವ್ಯಕ್ತಿಗಳು ಕಟ್ಟಡ ನಿರ್ಮಿಸಿದರೆ ಅನಧಿಕೃತ ಹಾಗೂ ಅತಿಕ್ರಮ ಪ್ರವೇಶವಾಗುತ್ತದೆ ಎಂದು ತಾಲೂಕು ಆಡಳಿತಾಧಿಕಾರಿಗಳು ತಿಳಿಸಿ ಪೊಲೀಸ್ ಭದ್ರತೆಯಲ್ಲಿ ಕಟ್ಟಡಗಳನ್ನು ನೆಲಸಮಗೊಳಿಸಿದರು. ಮೈಸೂರು ತಾಲೂಕು ಕಸಬಾ ಗ್ರಾಮ ಅಭಿವೃದ್ಧಿ ಅಧಿಕಾರಿಗಳಾದ ಡಿ.ಮಲ್ಲೇಶ್, ಅಜೀಂ ಖಾನ್, ರೆವಿನ್ಯೂ ಇನ್‌ಸ್ಪೆಕ್ಟರ್ ಹೇಮಂತ್ ಕುಮಾರ್ ಸೇರಿದಂತೆ ಹಲವರು ನೆಲಸಮ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಈ ಕುರಿತಂತೆ ಆರ್‌ಟಿಐ ಕಾರ್ಯಕರ್ತ ಬಿ.ಎನ್.ನಾಗೇಂದ್ರ ಈಗಾಗಲೇ ಹೆಬ್ಬಾಳು ಗ್ರಾಮದ ಸರ್ವೆ ನಂ.ನಲ್ಲಿ ಅನಧಿಕೃತವಾಗಿ ತಲೆಎತ್ತಿದ ಕಟ್ಟಡವನ್ನು ನೆಲ ಸಮಗೊಳಿಸಿರುವ ಅಧಿಕಾರಿಗಳು ಹಿನಕಲ್, ದಟ್ಟಗಳ್ಳಿ, ಮೇಟಗಳ್ಳಿ, ಆಲನಹಳ್ಳಿ, ಯರಗನಹಳ್ಳಿ ಸೇರಿದಂತೆ ಹಲವು ಬಡಾವಣೆಗಳಲ್ಲಿ ಸರ್ಕಾರಕ್ಕೆ ಸೇರಿದ ಯುಎಲ್‌ಸಿ ಭೂಮಿಯನ್ನು ಭೂಗಳ್ಳರು ಒತ್ತುವರಿ ಮಾಡಿಕೊಂಡಿದ್ದು, ಅದನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು. ಜೊತೆಗೆ ಈ ಒತ್ತುವರಿಯಲ್ಲಿ ಕಂದಾಯ ಇಲಾಖೆ, ಸರ್ವೆ, ಮುಡಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಶಾಮೀಲಾಗಿ ಬೇನಾಮಿ ಹೆಸರಲ್ಲಿ ಸರ್ಕಾರಿ ಭೂಮಿ ಕಬಳಿಸಿರುವ ಬಗ್ಗೆಯೂ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಜ.19, ಮಹಾಯೋಗಿ ವೇಮನ ಜಯಂತಿ ಆಚರಣೆ



**'ಮಹಾಯೋಗಿ ವೇಮನ ಜಯಂತಿ' ಸಂಬಂಧ ಎಡಿಸಿ ಡಾ.ಪಿ.ಶಿವರಾಜು ಸಭೆ ನಡೆಸಿದರು.**

ಮೈಸೂರು,ಜ.6–ಜ.19ರಂದು ಬೆಳಗ್ಗೆ 11.30 ಗಂಟೆಗೆ ಕಿರುರಂಗಮಂದಿರದಲ್ಲಿ 'ಮಹಾಯೋಗಿ ವೇಮನ ಜಯಂತಿ' ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಮಹಾಯೋಗಿ ವೇಮನ ಜಯಂತಿಯ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಈ ಸಂಬಂಧ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಿ, ಜಯಂತಿ ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಮಾತನಾಡಿ, ಕಾರ್ಯಕ್ರಮದಲ್ಲಿ ಕಲಾತಂಡಗಳಿಂದ ಗೀತ ಗಾಯನವನ್ನು ಏರ್ಪಡಿಸಲಾಗುವುದು. ಆಹ್ವಾನ ಪತ್ರಿಕೆಯ ಮುದ್ರಣ ಮಾಡಿ ಸರ್ಕಾರದ ಶಿಷ್ಟಾಚಾರದಂತೆ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಈ ಸಂಬಂಧ ಸಮಿತಿಯವರು ಸಹಕರಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಕರ್ನಾಟಕ ಕಾವಲು ಪಡೆಯ ಅಧ್ಯಕ್ಷ ಮೋಹನ್‌ಕುಮಾರ್, ಮೈಸೂರಿನ ಚಳುವಳಿದಾರ ಅರವಿಂದ್ ಶರ್ಮ ಸೇರಿದಂತೆ ಮಹಾಯೋಗಿ ವೇಮನ ಸಮಿತಿ ಮುಖಂಡರು ಉಪಸ್ಥಿತರಿದ್ದರು.

## ನಾಮಪತ್ರ ಸಲ್ಲಿಕೆ



**ಮೈಸೂರಿನ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್‌ನ 2025–2030ನೇ ಸಾಲಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ ರಾಘು ಸಾಮಾನ್ಯವರ್ಗದಿಂದ ನಾಮಪತ್ರ ಸಲ್ಲಿಸಿದರು. ಮುಖಂಡರಾದ ಪರಮೇಶಣ್ಣ, ಸು.ಮುರಳಿ, ಜವರಪ್ಪ, ನಾಣಿ ಗೌಡ, ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಮೋಹನ್, ಮಂಜು, ದೇವರಾಜು, ಜಗದೀಶ್, ರಾಜೇಂದ್ರ, ಮಂಜುನಾಥ, ಮಧು, ಪ್ರಕಾಶ ಚಂದ್ರು, ಶಿವುಶಂಕರ್ ಉಪಸ್ಥಿತರಿದ್ದರು.**

# ಮೇಟಗಳ್ಳಿ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆ ವಾರ್ಷಿಕೋತ್ಸವ



**ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ವಿಷಯ ಪರಿವೀಕ್ಷಕ ಚನ್ನಬಸಪ್ಪ ಉದ್ಘಾಟಿಸಿದರು.**

ಮೈಸೂರು, ಜ.6– ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಆಯೋಜಿಸಲಾಗಿತ್ತು.


ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ವಿಷಯ ಪರಿವೀಕ್ಷಕ ಚನ್ನಬಸಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ಮೇಟಗಳ್ಳಿ ಜೆಎಸ್‌ಎಸ್ ಶಾಲೆಯು ಮಹಾವಿದ್ಯಾಪೀಠದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ಮೊದಲ ಸ್ಥಾನದಲ್ಲಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶವನ್ನು ನೀಡುವುದರ ಜೊತೆಗೆ ಈ ಶಾಲೆಯ ವಿದ್ಯಾರ್ಥಿಗಳು ಮಹಾವಿದ್ಯಾಪೀಠದ ವ್ಯಾಪ್ತಿಯ ಶಾಲೆಗಳಲ್ಲಿ ಅತೀ ಹೆಚ್ಚು ಅಂಕವನ್ನು ಗಳಿಸುವುದರ ಮೂಲಕ ಮೊದಲ ಸ್ಥಾನದಲ್ಲಿರುತ್ತಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪತ್ರಕರ್ತ ಕೆ.ನರಸಿಂಹಮೂರ್ತಿ ಮಾತನಾಡಿ, ಈ ಶಾಲೆಯು ಮೈಸೂರಿನ ಉತ್ತಮ ಶಾಲೆಗಳಲ್ಲಿ ಒಂದಾಗಿದ್ದು, ಸ್ವಾಮೀಜಿಯವರು ಶಿಕ್ಷಣ ಪಡೆಯುವುದು ಕಷ್ಟವಾಗಿದ್ದ ಕಾಲದಲ್ಲಿ ಊರು ಊರು ಸುತ್ತಿ ದಾನ ಪಡೆದು, ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದರ ಮೂಲಕ ಸಮಾಜದ ಕಡು ಬಡತನದ ವಿದ್ಯಾರ್ಥಿಗಳಿಗೆ ಕೈಗೆಟುಕುವ ದರದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಪಡೆಯಲು ನೆರವಾಗುವುದರ ಮೂಲಕ ಶಿಕ್ಷಣ ಕ್ರಾಂತಿಯನ್ನು ಮಾಡಿದರು. ಜೆಎಸ್‌ಎಸ್ ಸಂಸ್ಥೆ ಶಾಲೆಗಳು ಇಂದು ದೇಶದಲ್ಲಿ ಮಾತ್ರವಲ್ಲದೆ, ವಿದೇಶದಲ್ಲೂ ಕೀರ್ತಿಯನ್ನು ಹೊಂದಿದ್ದು ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿವೆ, ಪೋಷಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಮೈಸೂರು ಜೆಎಸ್‌ಎಸ್‌ಎಸ್ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಟಿಎಸ್ ಡಾ. ರಾಕೇಶ್ ಮಾತನಾಡಿ, ನಾನು ಇದೇ ಶಾಲೆಯ ಹಿರಿಯ ವಿದ್ಯಾರ್ಥಿಯಾಗಿದ್ದು 2003–04ನೇ ಸಾಲಿನಲ್ಲಿ 10ನೇ ತರಗತಿಯಲ್ಲಿ ಉತ್ತೀರ್ಣನಾಗಿರುತ್ತೇನೆ. ನಾನು ಓದಿದ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಿರುವುದು ನನ್ನ ಸೌಭಾಗ್ಯ. ಈ ಅದೃಷ್ಟ ಎಲ್ಲರಿಗೂ ಲಭಿಸುವುದಿಲ್ಲ. ಇಂದಿನ ವಿದ್ಯಾರ್ಥಿಗಳು ಮೊಬೈಲ್ ಚಟಕ್ಕೆ ದಾಸರಾಗದೆ, ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ತಲುಪಬೇಕು ಎಂದರು.

2024–25ನೇ ಸಾಲಿನ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮತ್ತು ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿಷಯವಾರು ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಶಿಕ್ಷಕರು ನಗದು ಬಹುಮಾನಗಳನ್ನು ನೀಡಿದರು. ಕಾರ್ಯಕ್ರಮದ ನಿಮಿತ್ತ ಮಕ್ಕಳು ಮತ್ತು ಶಿಕ್ಷಕರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಸಂಗೀತ ಶಿಕ್ಷಕಿ ಸುಮಂಗಲ ಜಂಗಮಶೆಟ್ಟಿ ಮತ್ತು ತಂಡದವರು ಪ್ರಾರ್ಥನೆ ನಡೆಸಿಕೊಟ್ಟರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**07.01.2025 ಮಂಗಳವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025**
**ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,**
**ತಿಥಿ: ಅಷ್ಟಮಿ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ**

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ನೆಗಡಿ, ಕೆಮ್ಮು ಮತ್ತು ಅಸ್ತಮಾಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿ ನೋವು, ಕೀಲು ನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಥಿಯೇಟರ್ :** ರಂಗಭೂಮಿ ಶಿಕ್ಷಣದ ಮಹತ್ವ ಕುರಿತು ಚರ್ಚೆ, ಉಪಸ್ಥಿತರು : ಧೀನಬಂಧು ಟ್ರಸ್ಟ್ ಸಂಸ್ಥಾಪಕ ಪ್ರೊ. ಜಯದೇವ, ಅರಿವು ವಿದ್ಯಾಸಂಸ್ಥೆ ಕಾರ್ಯದರ್ಶಿ ಜನಾರ್ಧನ್, ರಂಗಭೂಮಿ ನಿರ್ದೇಶಕರಾದ ರಜನೀಶ್ ಬಿಸ್ತ, ಪ್ರಸನ್ನ, ಸ್ಥಳ: ಹಾರ್ಡ್ವಿಕ್ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಸಂವಹನ : ಪ್ರಕಾಶಕರು, ಕನ್ನಡ ಸಾಹಿತ್ಯ ಕಲಾಕೂಟ :** ಡಾ. ಸಿಪಿಕೆ ಅವರ ಚಿಂತನ ಚಿಂತಾಮಣಿ ಪುಸ್ತಕ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃತಿ ಲೋಕಾರ್ಪಣೆ : ವಿಶ್ರಾಂತ ಪ್ರಾಧ್ಯಾಪಕ ಡಾ. ಡಿ.ಎ. ಶಂಕರ್, ಕೃತಿ ಕುರಿತು : ಹಿರಿಯ ವಿದ್ವಾಂಸ ವಿದ್ವಾನ್ ಹೆಚ್.ವಿ. ನಾಗರಾಜರಾವ್, ಮುಖ್ಯ ಅತಿಥಿಗಳು : ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಉಪಸ್ಥಿತರು : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಪ್ರಕಾಶಕ ಡಿ.ಎನ್. ಲೋಕಪ್ಪ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5.30ಕ್ಕೆ.

■ **ನೃತ್ಯ ವಿದ್ಯಾಪೀಠ, ಅಕಾಡೆಮಿ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್:** ನರ್ತನ ಲಹರಿ ಹಾಗೂ ಶಿವಶಕ್ತಿ, ಧರ್ಮಬೋಧನೆ ಮಾಲಿಕೆ–9, ಪ್ರವಚನಕಾರರು : ಎಂ.ಮಹದೇವಸ್ವಾಮಿ, ವಿಷಯ: ಪ್ರಕೃತಿ ಮತ್ತು ಧರ್ಮ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಶೇಷ ಆಹ್ವಾನ: ನೃತ್ಯ ಗಂಗೋತ್ರಿ ಸ್ಕೂಲ್ ಆಫ್ ಡ್ಯಾನ್ಸ್ ನಿರ್ದೇಶಕರಾದ ವಿದುಷಿ ಪ್ರೀತಿ ವೆಂಕಟರಾಮು, ಉಪಸ್ಥಿತರು: ಶ್ರೀಮತಿ ಶೋಭಾ ಬಾಲಕೃಷ್ಣ, ಶ್ರೀಮತಿ ಜಿ.ಕೆ.ಕಮಲ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 5.45ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಶ್ರೇಯಾ, ಡಾ. ಎಂ. ಎ. ಜ್ಯೋತಿ, ಎನ್. ಹೇಮಾ, ವ್ಯಾಖ್ಯಾನ–ಡಾ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ. ಆರ್.ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೊಡಿಯಾಲ. ಕೆ.ಎನ್. ಕೃಷ್ಣಮೂರ್ತಿ ಮತ್ತು ಕೆ. ಎನ್. ಸುರೇಂದ್ರ– ನಾಗಸ್ವರ ವಾದನ, 11.00ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್, ಚೈತ್ರಿಕಾ. ಎಸ್ ಹಾಗೂ ಕಾರ್ತಿಕ್. ಎಂ. ಎಸ್.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ವೀಣಾ. ಎನ್. ಮೂರ್ತಿ, 12.45 ಕನ್ನಡದಲ್ಲಿ ಭಾಷಣ–ಮೌನವೆಂಬ ಮಹಾ ಬೆಳಕು, ಮಾತನಾಡುತ್ತಾರೆ–ದೀಪಾ ಫಡ್ಕೆ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು – ಸಿ. ವಿಶ್ವನಾಥ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕೆ. ಎಸ್. ಗೋಪಾಲಕೃಷ್ಣನ್–ಕೊಳಲು ವಾದನ, 4.00 ಕಥಾ ಕಾಲಕ್ಷೇಪ–ಸಂಪೂರ್ಣ ರಾಮಾಯಣ – ಬಾಲಕಾಂಡ, ಪ್ರಸ್ತುತಿ: ವಿದ್ವಾನ್. ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ರೇಷ್ಮೆ ರೀಲಿಂಗ್‌ನಿಂದ ಆದಾಯ ಉತ್ಪಾದನೆ. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಎಂ. ಎನ್. ಚಂದ್ರಶೇಖರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ನಾಟಕ 'ಭೀಮ ವಿಜಯ', ರಚನೆ–ಡಾ. ಡಿ.ಶೀಲಾಕುಮಾರಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ :ಎಸ್. ಪಿ. ರಾಮ್ಹ್ – ಹಾಡುಗಾರಿಕೆ, 10.00 ಚೈತ್ರವನ– ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ ಪ್ರಸ್ತುತಿ: ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

### ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರಿಡುವ ಪ್ರಕರಣಕ್ಕೆ ಟ್ವಿಸ್ಟ್

# ದಾಸಪ್ಪ ವೃತ್ತದಿಂದ ಒಂಟಿಕೊಪ್ಪಲು ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದವರೆಗಷ್ಟೇ 'ಪ್ರಿನ್ಸೆಸ್ ರಸ್ತೆ'!

**●ನಕ್ಷೆ, ದಾಖಲಾತಿ ಸಮೇತ ಶಾಸಕ ಕೆ.ಹರೀಶ್‌ಗೌಡ ಸ್ಪಷ್ಟನೆ ●ಇಡೀ ಕೆಆರ್‌ಎಸ್ ಮಾರ್ಗ ಪ್ರಿನ್ಸೆಸ್ ರಸ್ತೆಯಲ್ಲ; ಉಳಿದ ರಸ್ತೆಗೆ ಸಿದ್ದರಾಮಯ್ಯ ಹೆಸರಿಡುತ್ತೇವೆ ●ಸಂಧಾನದ ಮೂಲಕ ಸಮಸ್ಯೆ ಪರಿಹಾರಕ್ಕೆ ನಾವು ಸಿದ್ಧ; ಇದರಲ್ಲಿ ರಾಜಕೀಯ ಸಲ್ಲದು**

ಮೈಸೂರು, ಜ.6(ಬಿಎಲ್‌ಯು)– ಮೈಸೂರಿನ ದಾಸಪ್ಪ ವೃತ್ತದಿಂದ ಒಂಟಿ ಕೊಪ್ಪಲ್ ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನದವರೆಗೆ ಪ್ರಿನ್ಸೆಸ್ ರಸ್ತೆ ಎಂದು ಸರ್ಕಾರದ ದಾಖಲಾತಿಯಲ್ಲಿದೆ. ಆದರೆ ವೆಂಕಟರಮಣಸ್ವಾಮಿ ದೇವಸ್ಥಾನ ದಿಂದ ರಾಯಲ್ ಇನ್ ಹೋಟೆಲ್ ಜಂಕ್ಷನ್ ವರೆಗೆ ಕೆಆರ್‌ಎಸ್ ರಸ್ತೆ ಹೆಸರಿ ನಿಂದ ಕರೆಯುತ್ತಿದ್ದು, ಇದಕ್ಕೆ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ಹೆಸರಿಡು ತ್ತಿದ್ದೇವೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಸ್ಪಷ್ಟಪಡಿಸಿದ್ದಾರೆ.

ಪ್ರಿನ್ಸೆಸ್ ರಸ್ತೆ ಇದೆ ಎಂದು ಶಾಸಕ ಹರೀಶ್‌ಗೌಡ ಒಪ್ಪಿಕೊಳ್ಳುವುದರ ಮೂಲಕ ರಸ್ತೆ ನಾಮಕರಣ ವಿವಾದಕ್ಕೆ ಟ್ವಿಸ್ಟ್ ನೀಡಿದ್ದಾರೆ. ಕಾಂಗ್ರೆಸ್ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾ ಡಿದ ಹರೀಶ್‌ಗೌಡ, ಪ್ರಿನ್ಸೆಸ್ ರಸ್ತೆ ಎಲ್ಲಿಂದ ಆರಂಭವಾಗಿ ಎಲ್ಲಿ ತನಕ ಕೊನೆಗೊಳ್ಳ ಲಿದೆ ಎಂದು ನಕ್ಷೆ ಹಾಗೂ ಇತರೆ ದಾಖಲಾತಿ ಸಮೇತ ವಿವರ ನೀಡಿದರು.

ಜಯದೇವ ಹೃದ್ರೋಗ ಆಸ್ಪತ್ರೆ, ಜಿಲ್ಲಾ ಸ್ಪತ್ರೆ ಸೇರಿದಂತೆ ಹಲವು ಆಸ್ಪತ್ರೆಯ ನಿರ್ಮಾಣಕ್ಕೆ ಸಿದ್ದರಾಮಯ್ಯ ಕಾರಣೀ ಭೂತರಾಗಿದ್ದಾರೆ. ಈ ಹಿನ್ನೆಲೆ ಈ ರಸ್ತೆಗೆ ಸಿದ್ದರಾಮಯ್ಯ ಹೆಸರಿಡುವಂತೆ ನಾನು ನವೆಂಬರ್ 12, 2024ರಂದು ನಗರಪಾಲಿಕೆ ಆಯುಕ್ತರಿಗೆ ಲಿಖಿತ ಪತ್ರದ ಮೂಲಕ ಮನವಿ ಮಾಡಿದ್ದೆ ಎಂದು ತಿಳಿಸಿದರು.

ಪ್ರಸ್ತುತ ಜನಪ್ರತಿನಿಧಿಗಳು ಇಲ್ಲದ ಕಾರಣ ಅಧಿಕಾರಿಗಳು ಮಾತ್ರ ಇರುವ ನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಇದಕ್ಕೆ ಅನು ಮೋದನೆ ನೀಡಲಾಯಿತು. ತರುವಾಯ ಆಕ್ಷೇಪಣೆಗಳಿದ್ದರೆ ಸಲ್ಲಿಸುವಂತೆ ದಿನ ಪತ್ರಿಕೆಗಳಲ್ಲಿ ಜಾಹೀರಾತು ಮೂಲಕ ಪ್ರಕ ಟಣೆ ನೀಡಲಾಗಿತ್ತು. ಈ ವೇಳೆ ಮೈಸೂರು ರಾಜವಂಶಸ್ಥರೂ ಆದ ಸಂಸದ ಯದು ವೀರ್ ಸೇರಿದಂತೆ ಕೆಲವರು ಆಕ್ಷೇಪಣೆ ಸಲ್ಲಿಸಿದ್ದಾರೆ ಎಂದು ಹರೀಶ್‌ಗೌಡ ಹೇಳಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸೋಮವಾರ ಶಾಸಕ ಕೆ.ಹರೀಶ್‌ಗೌಡ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಈ ವೇಳೆ ಪ್ರಿನ್ಸೆಸ್ ರಸ್ತೆ ಎಲ್ಲಿಂದ ಆರಂಭವಾಗಿ ಎಲ್ಲಿಂದ ಕೊನೆಗೊಳ್ಳುತ್ತದೆ ಎಂಬ ವಿವರವನ್ನು ನಕ್ಷೆ ಸಮೇತ ವಿವರಿಸಿದರು.

ಮೈಸೂರು ನಗರದಲ್ಲಿ ಪ್ರಿನ್ಸೆಸ್ ರಸ್ತೆ ಎಂಬ ಹೆಸರೇ ಇಲ್ಲ ಎಂದು ನಾವು ಎಂದೂ ಹೇಳುವುದಿಲ್ಲ. ನಗರದ ರೈಲ್ವೆ ನಿಲ್ದಾಣದ ಬಳಿಯ ದಾಸಪ್ಪ ವೃತ್ತದಿಂದ ವೆಂಕಟರಮಣಸ್ವಾಮಿ ದೇವಸ್ಥಾನ (ಬಿ.ಸಿ.ಲಿಂಗಯ್ಯ–ಚಿಕ್ಕಣ್ಣದಾಸ್ ವೃತ್ತ) ವರೆಗೆ ಪ್ರಿನ್ಸೆಸ್ ರಸ್ತೆ ಎಂಬ ಉಲ್ಲೇಖವಿದೆ ಎಂದು ತಿಳಿಸಿದ ಹರೀಶ್‌ಗೌಡ, ಈ ಸಂಬಂಧ 1930ರ ನಗರಪಾಲಿಕೆ ಯಲ್ಲಿರುವ ನಕ್ಷೆ ಹಾಗೂ ದಾಖಲಾತಿ ಯಲ್ಲಿ ಪ್ರಿನ್ಸೆಸ್ ರಸ್ತೆ ಉಲ್ಲೇಖವನ್ನು ಸಾಕ್ಷಿ ಸಮೇತ ವಿವರಣೆ ನೀಡಿದರು.

ಹಾಗೆಯೇ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಿಂದ ರಾಯಲ್ ಇನ್ ಹೋಟೆಲ್ ಜಂಕ್ಷನ್ ತನಕ ಇರುವ ಮಾರ್ಗವನ್ನು ಕೆಆರ್‌ಎಸ್ ರಸ್ತೆ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

### ಶಾಸಕರು ಒಟ್ಟಿಗೆ ಸೇರಿ ಕಾಫಿ ಕುಡಿಯುವುದೇ ತಪ್ಪಾಗಿದೆ

ನಾಲ್ಕೈದು ಶಾಸಕರು ಒಟ್ಟಿಗೆ ಸೇರಿ ಕಾಫಿ ಕುಡಿದರೆ ಕಾಂಗ್ರೆಸ್‌ನಲ್ಲಿ ಒಡಕಿದೆ ಎಂದು ಅರ್ಥೈಸಲಾಗುತ್ತಿದೆ. ಇದರಿಂದ ನಾವು ಒಟ್ಟಿಗೆ ಸೇರಿ ಕಾಫಿ ಕುಡಿಯುವುದೇ ತಪ್ಪಾಗಿದೆ ಎಂದು ಶಾಸಕ ಹರೀಶ್‌ಗೌಡ ಬೇಸರ ವ್ಯಕ್ತಪಡಿಸಿದರು. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾವಣೆ ಮಾಡುವ ಯಾವ ಬೆಳವಣಿಗೆಯೂ ನಡೆಯುತ್ತಿಲ್ಲ. ಕೆಲವು ಶಾಸಕರು ಒಟ್ಟಿಗೆ ಸೇರಿದರೆ ಅದಕ್ಕೆ ಬೇರೆ ಅರ್ಥ ಕಲ್ಪಿಸುವುದು ಬೇಡ ಎಂದು ಮನವಿ ಮಾಡಿದರು. ಕಾಂಗ್ರೆಸ್ ಪಕ್ಷದ ಎಲ್ಲಾ ಶಾಸಕರು ಒಗ್ಗಟ್ಟಾಗಿದ್ದೇವೆ. ಸರ್ಕಾರ ಸುಭದ್ರವಾಗಿದೆ. ಆದರೂ ಸರ್ಕಾರ ಪತನವಾಗುತ್ತದೆ ಎಂದು ಬಿಜೆಪಿ ನಾಯಕರು ಕಳೆದ ಒಂದೂವರೆ ವರ್ಷದಿಂದ ಹೇಳುತ್ತಿದ್ದಾರೆ. ಅವರು ಹೇಳಿ ದಂತೆಲ್ಲಾ ನಾವು ಮತ್ತಷ್ಟು ಒಗ್ಗಟ್ಟಾಗುತ್ತಿದ್ದೇವೆ ಎಂದು ಶಾಸಕ ಹರೀಶ್‌ಗೌಡ ತಿಳಿಸಿದರು.

ಕೆಆರ್‌ಎಸ್ ರಸ್ತೆ ಎಂಬ ಹೆಸರನ್ನು ಸರ್ಕಾರ ಅಧಿಕೃತವಾಗಿ ನಾಮಕರಣ ಮಾಡಿಲ್ಲ. ಇದು ಕೆಆರ್‌ಎಸ್‌ಗೆ ಹೋಗುವ ಮಾರ್ಗವಾದ ಕಾರಣ ಕೆಆರ್‌ಎಸ್ ರಸ್ತೆ ಎಂಬ ಹೆಸರಿನಿಂದ ಜನರು ಕರೆಯು ತ್ತಿದ್ದಾರೆ. ಈ ರಸ್ತೆಗೆ ಈಗ ಅಧಿಕೃತವಾಗಿ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಹೆಸರು ನಾಮಕರಣ ಮಾಡುವಂತೆ ಕೋರು ತ್ತಿದ್ದೇವೆ ಎಂದು ತಿಳಿಸಿದರು.

ವೆಂಕಟರಮಣ ಸ್ವಾಮಿ ದೇವಸ್ಥಾನ ದಿಂದ ರಾಯಲ್ ಇನ್ ಹೋಟೆಲ್ ಜಂಕ್ಷನ್‌ವರೆಗೆ ಪ್ರಿನ್ಸೆಸ್ ರಸ್ತೆ ಎಂಬ ನಮೂದು ಇಲ್ಲ. ಆದರೆ ಕೆಆರ್‌ಎಸ್ ರಸ್ತೆ ಎಂದು ಉಲ್ಲೇಖಿಸಲಾಗಿದೆ. ಇದನ್ನು 1997 ಮತ್ತು 2016 ರಲ್ಲಿರುವ ಸಿಡಿಪಿ ಸಾಕ್ಷೀಕರಿಸುತ್ತದೆ. ಇದರ ಆಧಾರದ ಮೇಲೆ ಅಧಿಕೃತವಾಗಿ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಹೆಸರು ನಾಮಕರಣ ಮಾಡಿ ಎಂದು ಮನವಿ ಮಾಡುತ್ತಿದ್ದೇವೆ ಎಂದರು.

**ಸಾಧಕನ ಹೆಸರಿಗೆ ಸಹಕರಿಸಿ:** ಮುಖ್ಯ ಮಂತ್ರಿ ಸಿದ್ದರಾಮಯ್ಯ ತಮ್ಮ ಅಧಿ ಕಾರವಧಿಯಲ್ಲಿ ಮೈಸೂರಿಗೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ಕೆಆರ್‌ಎಸ್ ರಸ್ತೆಯಲ್ಲಿ ಬಹಳಷ್ಟು ಆಸ್ಪತ್ರೆ ನಿರ್ಮಾಣ ಮಾಡಿದ್ದಾರೆ. ಕಣ್ಮುಂದೆ ಕಾಣುವ ಇಂತಹ ಸಾಧಕನ ಹೆಸರು ರಸ್ತೆಗಿಡುವ ಬಗ್ಗೆ ಯಾರೂ ಆಕ್ಷೇಪಣೆ ವ್ಯಕ್ತಪಡಿಸ ಬಾರದು ಎಂದು ಮನವಿ ಮಾಡಿದರು.

ರಸ್ತೆಗೆ ಹೆಸರಿಡುವ ವಿಚಾರವನ್ನು ರಾಜ ಕೀಯ ಲಾಭಕ್ಕೆ ಬಳಸಿಕೊಳ್ಳಬಾರದು.

### ಪ್ರಿನ್ಸೆಸ್ ರಸ್ತೆ ನಾಮಫಲಕ ಹಾಕುತ್ತೇವೆ, ಕೃಷ್ಣಾಜಮ್ಮಣ್ಣಿ ಪ್ರತಿಮೆಯನ್ನೂ ಸ್ಥಾಪಿಸುತ್ತೇವೆ

ಮೈಸೂರಿನ ದಾಸಪ್ಪ ವೃತ್ತದ ಬಳಿ ಪ್ರಿನ್ಸೆಸ್ ರಸ್ತೆ ನಾಮಫಲಕ ಅಳವಡಿಸುತ್ತೇವೆ. ಜೊತೆಗೆ ವೆಂಕಟರಮಣ ಸ್ವಾಮಿ ವೃತ್ತದಲ್ಲಿ ಕೃಷ್ಣಾಜಮ್ಮಣ್ಣಿ ಅವರ ಪ್ರತಿಮೆ ಕೂಡ ಸ್ಥಾಪಿಸಲಾಗುವುದು ಎಂದು ಶಾಸಕ ಕೆ.ಹರೀಶ್ ಗೌಡ ಭರವಸೆ ನೀಡಿದರು.

ನಗರದ ದಾಸಪ್ಪ ವೃತ್ತದಿಂದ ವೆಂಕಟರಮಣ ಸ್ವಾಮಿ ದೇವಸ್ಥಾನದ ತನಕ ಪ್ರಿನ್ಸೆಸ್ ರಸ್ತೆ ಎಂಬ ದಾಖಲಾತಿ ಇದೆ. ಆದರೆ ಈ ತನಕ ಪ್ರಿನ್ಸೆಸ್ ರಸ್ತೆ ಎಂಬ ಫಲಕವನ್ನು ಯಾರೂ ಅಳವಡಿಸಿಲ್ಲ. ಈ ಕಾರ್ಯವನ್ನು ನಾವು ಮಾಡುತ್ತೇವೆ ಎಂದರು.

ಅಷ್ಟೇ ಅಲ್ಲದೆ ಪಿಕೆಟಿಬಿ ಆಸ್ಪತ್ರೆ ನಿರ್ಮಾಣಕ್ಕೆ ಕಾರಣರಾದ ಕೃಷ್ಣಾಜಮ್ಮಣ್ಣಿ ಪ್ರತಿಮೆಯನ್ನು ವೆಂಕಟರಮಣ ಸ್ವಾಮಿ ದೇವಸ್ಥಾನ ವೃತ್ತದಲ್ಲಿ ಪ್ರತಿಷ್ಠಾಪನೆ ಮಾಡುತ್ತೇವೆ. ಈ ಎರಡು ಕಾರ್ಯ ಮಾಡುವುದರ ಜೊತೆಗೆ ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುತ್ತೇವೆ ಎಂದು ಹೇಳಿದರು.

ಮೈಸೂರು ಮಹಾರಾಜರು ಕೊಟ್ಟ ಕೊಡುಗೆಯನ್ನು ಸೂರ್ಯ ಚಂದ್ರರು ಇರುವ ತನಕ ಯಾರೂ ಅಳಿಸಲು ಸಾಧ್ಯವಿಲ್ಲ. ಮಹಾರಾಜರ ವಂಶಸ್ಥರ ಹೆಸರು ಬದಲಾವಣೆ ಮಾಡಲು ಕೂಡ ನಾನು ಬಿಡುವುದಿಲ್ಲ. ಮೈಸೂರು ರಾಜಮನೆತನದ ಬಗ್ಗೆ ನಮಗೆ ಇಷ್ಟೆಲ್ಲಾ ಬದ್ಧತೆ ಇದ್ದರೂ ಬಿಜೆಪಿ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಮೈಸೂರು ರಾಜವಂಶಸ್ಥರ ವಿಚಾರದಲ್ಲಿ ದ್ವೇಷವಿದೆ ಎಂದು ಜನರಲ್ಲಿ ತಪ್ಪು ಭಾವನೆ ಮೂಡಿಸುತ್ತಿದ್ದು, ಇವರ ಮಾತಿಗೆ ಯಾರೂ ಮನ್ನಣೆ ನೀಡಬೇಡಿ ಎಂದು ಹರೀಶ್‌ಗೌಡ ಸಲಹೆ ನೀಡಿದರು.

### 'ಮೈಸೂರು ಬಂದ್'ಗೆ ಕಾಂಗ್ರೆಸ್ ಬೆಂಬಲ

**“ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ನಾಳೆ (ಜನವರಿ 7) ಕರೆ ನೀಡಿರುವ ಮೈಸೂರು ಬಂದ್‌ಗೆ ಕಾಂಗ್ರೆಸ್‌ನ ಸಂಪೂರ್ಣ ಬೆಂಬಲವಿದೆ. ದಲಿತ ಪರ ಸಂಘಟನೆ ಕರೆ ನೀಡಿರುವ ಬಂದ್‌ಗೆ ಶಾಸಕರು, ಮಾಜಿ ಶಾಸಕರು ಸೇರಿದಂತೆ ಎಲ್ಲರೂ ಬೆಂಬಲ ನೀಡಿದ್ದೇವೆ. ಅಷ್ಟೇ ಅಲ್ಲದೆ ಬಂದ್ ಹಿನ್ನೆಲೆ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಕೂಡ ಭಾಗಿಯಾಗುತ್ತೇವೆ**

**–ಡಾ.ವಿಜಯಕುಮಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ**

ಮಾತುಕತೆ ಮೂಲಕ ಸಮಸ್ಯೆ ಪರಿಹಾರ ಮಾಡಿಕೊಳ್ಳಲು ಇಚ್ಛಿಸಿದರೆ ಇದಕ್ಕೆ ನಾವು ಸಿದ್ಧರಿದ್ದೇವೆ. ಯದುವೀರ್ ಸೇರಿದಂತೆ ಬಿಜೆಪಿ ನಾಯಕರು ಎಲ್ಲೇ ಕರೆದರೂ ಅಲ್ಲಿ ಹೋಗಿ ಚರ್ಚೆ ಮಾಡುತ್ತೇನೆ. ಈ ಮೂಲಕ ಪ್ರಿನ್ಸೆಸ್ ರಸ್ತೆ ಹಾಗೂ ಕೆಆರ್‌ಎಸ್ ರಸ್ತೆ ಎಲ್ಲಿಂದ ಎಲ್ಲಿ ತನಕ ಇದೆ. ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವ ಉದ್ದೇಶ ವೇನು ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡುತ್ತೇನೆ ಎಂದು ತಿಳಿಸಿದರು.

ವೆಂಕಟರಮಣ ಸ್ವಾಮಿ ವೃತ್ತದಿಂದ ರಾಯಲ್ ಇನ್ ಹೋಟೆಲ್ ಜಂಕ್ಷನ್ ತನಕ ಪ್ರಿನ್ಸೆಸ್ ರಸ್ತೆ ಎಂಬುದು ಇಲ್ಲ. ಒಂದು ವೇಳೆ ದಾಖಲಾತಿ ಸಮೇತ ಇದನ್ನು ಸಾಬೀತು ಮಾಡಿದರೆ ಅದನ್ನು ಸಹ ನಾವು ಒಪ್ಪುತ್ತೇವೆ. ಇದನ್ನು ಸಾಬೀತು ಮಾಡಲಿಲ್ಲವೆಂದರೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡಲು ಅವರು ಆಕ್ಷೇಪಣೆ ಸಲ್ಲಿಸಬಾರದು ಎಂದು ಹರೀಶ್‌ಗೌಡ ಸ್ಪಷ್ಟಪಡಿಸಿದರು.

ಕೆಆರ್‌ಎಸ್ ಮಾರ್ಗಕ್ಕೆ ಸಿದ್ದ ರಾಮಯ್ಯ ಹೆಸರಿಡುವ ವಿಚಾರವನ್ನು ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತು ವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ತಿಳಿಸಿರಲಿಲ್ಲ. ಇತ್ತೀಚೆಗೆ ಅವ ರಿಗೆ ಈ ವಿಚಾರ ತಿಳಿಸಿದೆ ಎಂದರು.

ರಸ್ತೆಗೆ ಸಿದ್ದರಾಮಯ್ಯ ಹೆಸರಿಡುವ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರ ಸ್ವಾಮಿ ವಿರೋಧ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಹರೀಶ್‌ಗೌಡ, ಮೈಸೂರಿನ ಬನ್ನೂರು ರಸ್ತೆಯರಿಂಗ್ ರೋಡ್ ಜಂಕ್ಷನ್‌ಗೆ ಹೆಚ್.ಡಿ. ದೇವೇ ಗೌಡರ ಹೆಸರು ನಾಮಕರಣ ಮಾಡ ಲಾಗಿದೆ. ಯಾವ ಸಾಧಕರನ್ನು ನಾವು ಮರೆತಿಲ್ಲ ಎಂದು ಸ್ಪಷ್ಟನೆ ನೀಡಿದರು.

# ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಪೋಷಕರ ಜವಾಬ್ದಾರಿಯೂ ಮಹತ್ವದ್ದು

**ನಳಂದ ಕಲರವ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿದ ಎಂ.ಕೆ.ಸೋಮಶೇಖರ್ ಅಭಿಮತ**




ನಳಂದ ಕಲರವ 43ನೇ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಮಾಜಿ ಶಾಸಕ ಎಂ.ಕೆ.ಸೋಮ ಶೇಖರ್, ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು.

ಮೈಸೂರು, ಜ.6– ಮೈಸೂರಿನ ವಿದ್ಯಾ ರಣ್ಯಪುರಂನ ನಳಂದ ಎಜುಕೇಷನ್ ಸೊಸೈಟಿ ವತಿಯಿಂದ ಕಲಾಮಂದಿರದಲ್ಲಿ ನಳಂದ ಕಲರವ 43ನೇ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಹೆಚ್ಚು ಜ್ಞಾಪಕ ಶಕ್ತಿ, ಕಲಿಯುವ ಆಸಕ್ತಿ ಹೆಚ್ಚು ಇರುತ್ತದೆ. ಪ್ರತಿಯೊಂದು ಮಗುವಿನಲ್ಲಿ ಅಗಾಧವಾದ ಶಕ್ತಿ ಅಡಗಿರುತ್ತದೆ. ಅದಕ್ಕೆ ಉತ್ತಮವಾದ ಮಾರ್ಗದರ್ಶನ ಮತ್ತು ಪೂರಕ ವಾತಾವರಣ ನಿರ್ಮಾಣ ಮಾಡಿದ್ದೇ ಆದರೆ ಖಂಡಿತವಾಗಿಯೂ ಮಕ್ಕಳಿಗೆ ಉಜ್ವಲ ಭವಿಷ್ಯ ಕಟ್ಟಿಕೊಡಬಹುದು. ಭಾರತ ದೇಶದಲ್ಲಿ ಶಿಕ್ಷಣ ಪಡೆದಂತಹ ಅದೆಷ್ಟೋ ಪ್ರತಿಭಾನ್ವಿತರು ಇಂದು ವಿಶ್ವದ ಮೂಲೆ ಮೂಲೆಗಳಲ್ಲಿ ದೇಶದ ಕೀರ್ತಿ ಪತಾಕೆ ಮುಗಿಲೆತ್ತರಕ್ಕೆ ಹಾರಿಸುತ್ತಿದ್ದಾರೆ. ಹಾಗಾಗಿ ಪೋಷಕರು ಶಾಲೆಯ ಶಿಕ್ಷಣದ ಜೊತೆ ಜೊತೆಗೆ ಮನೆಯಲ್ಲಿಯೂ ಶಾಲೆಯಲ್ಲಿ ಕಲಿತ ಪಾಠವನ್ನು ಪುನರ್‌ಮನನ ಮಾಡಿಸುವ ಮೂಲಕ ಮಕ್ಕಳನ್ನು ಪ್ರೋತ್ಸಾಹಿಸಬೇಕು. ಶಾಲಾ ಶುಲ್ಕ ಭರಿಸಿ ಸಮವಸ್ತ್ರ ತೊಡಿಸಿ ಶಾಲೆಗೆ ಕಳು ಹಿಸಿದ ಮಾತ್ರಕ್ಕೆ ಜವಾಬ್ದಾರಿ ಮುಗಿಯುವುದಿಲ್ಲ. ಬದಲಾಗಿ ಮಕ್ಕಳ ಜೊತೆ ಹೆಚ್ಚು ಸಮಯ ಕೊಟ್ಟು ಪಠ್ಯ ಮತ್ತು ಸಂಸ್ಕಾರವನ್ನೂ ಕಲಿಸಬೇಕು. ಟಿವಿ ಮತ್ತು ಮೊಬೈಲ್ ಕಡೆ ಹೆಚ್ಚು ಗಮನ ಕೊಡದಂತೆ ಜಾಗೃತಿ ವಹಿಸಿ ಅಂಕ ಗಳಿಕೆಗೆ ಮಾತ್ರ ಪ್ರಾಧಾನ್ಯತೆ ನೀಡದೆ ಮಾನವೀಯ ಮೌಲ್ಯಗಳು, ಉತ್ತಮ ಸಂಸ್ಕಾರ, ನಡೆ ನುಡಿ, ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು ಆಗ ಮಾತ್ರ ಯಶಸ್ವಿ ವ್ಯಕ್ತಿತ್ವ ರೂಪಿಸಲು ಸಾಧ್ಯವಾಗು ತ್ತದೆ ಎಂದರು. ಕಾರ್ಯಕ್ರಮದಲ್ಲಿ ವೈಚಾರಿಕ ಚಿಂತಕರು ಮತ್ತು ಸಂಸ್ಥೆಯ ಉಪಾಧ್ಯಕ್ಷ ಎನ್. ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಶಿಕ್ಷಣಾ ಧಿಕಾರಿ ಸಿ.ಎನ್.ರಾಜು, ಸಂಸ್ಥಾಪಕ ಕಾರ್ಯ ದರ್ಶಿ ಸಾವಿತ್ರಿ, ಆಡಳಿತ ಮಂಡಳಿ ಸದಸ್ಯರಾದ ಸರಸ್ವತಿ, ನಟೇಶ್, ಮುಖ್ಯೋಪಾಧ್ಯಾಯರಾದ ಸುಕನ್ಯಾ ಕುಮಾರಿ, ಸುಮತಿ ಮತ್ತಿತರರಿದ್ದರು.

# 2028ಕ್ಕೆ ನಾನೇ ಮುಖ್ಯಮಂತ್ರಿ ಅಭ್ಯರ್ಥಿ!



**ರಾಯಚೂರು:** 2028ಕ್ಕೆ ನಾನೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ರಾಯಚೂರಿನಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಈ ವೇಳೆ, ಈ ಅವಧಿಗೆ ಸಿಎಂ ಆಗಲು ಬರುವುದಿಲ್ಲ. ಈಗ ಮುಖ್ಯಮಂತ್ರಿ ಗಳು ಇದ್ದಾರೆ. ಹಾಗಾಗಿ ಅಂತಹ ಅವಶ್ಯಕತೆ ಬರಲ್ಲ. ಮುಂದಿನ ಅವಧಿಗೆ ನಾನು ಸಿಎಂ ಆಕಾಂಕ್ಷಿ, ಸಿಎಂ ಸ್ಥಾನದ ವಿಚಾರಗಳು ಈಗ ಇಲ್ಲ ಎಂದಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ಅನುಪಸ್ಥಿತಿಯಲ್ಲಿ ಸಭೆ ವಿಚಾರವಾಗಿ, ರಹಸ್ಯ ಸಭೆ ಏನೂ ಇರಲಿಲ್ಲ. ಎಲ್ಲರೂ ಕೂಡಿಯೇ ಸಭೆ ಮಾಡಿದ್ದೇವೆ. ರಹಸ್ಯ ಸಭೆ ಎನ್ನುವ ಪ್ರಶ್ನೆಯೇ ಇಲ್ಲ. ಅದು ಊಟದ ಸಭೆ ಅಷ್ಟೇ. ಸಭೆಯಲ್ಲಿ ಅಂತಾ ರಾಜಕೀಯ ಚರ್ಚೆ ಯಾವುದು ಆಗಿಲ್ಲ. ಸಂಪುಟ ವಿಸ್ತರಣೆಯೂ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿ 60% ಕಮಿಷನ್ ಸರ್ಕಾರವಿದೆ ಎಂಬ ಕೇಂದ್ರ ಸಚಿವ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿ, ಅವರೆಲ್ಲ ಆರೋಪ ಮಾಡುತ್ತಾರೆ. ಅದನ್ನು ಸಾಬೀತು ಮಾಡಬೇಕು. ಸುಮ್ಮನೇ ಹೇಳುವುದರಿಂದ ಏನೂ ಆಗುವುದಿಲ್ಲ ಎಂದಿದ್ದಾರೆ. ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಬಿಜೆಪಿ ಒತ್ತಾಯ ವಿಚಾರವಾಗಿ, ಅವರ ಆಪ್ತನ ಹೆಸರು ಇದೆ. ಈಶ್ವರಪ್ಪನದ್ದು ನೇರವಾಗಿ ಪತ್ರದಲ್ಲಿ ಹೆಸರು ಇತ್ತು. ಆಪ್ತರು, ಪಿಎಗಳ ಹೆಸರು ಇದ್ದರೆ ಸಚಿವರು ನೇರವಾಗಿ ಹೊಣೆಗಾರರು ಆಗಲ್ಲ. ತನಿಖೆ ನಡೆಯುತ್ತಿದೆ, ನಡೆಯಲಿ ಎಂದು ಹೇಳಿದ್ದಾರೆ.

# ರಾಯಚೂರಿನ ರಿಮ್ಸ್‌ನಲ್ಲಿ ಮತ್ತೋರ್ವ ಬಾಣಂತಿ ಸಾವು

**ಜಿಲ್ಲೆಯಲ್ಲಿ ಮೃತರ ಸಂಖ್ಯೆ 12ಕ್ಕೆ ಏರಿಕೆ**

ರಾಯಚೂರು: ಜಿಲ್ಲೆಯಲ್ಲಿ ಬಾಣಂತಿಯರ ಸಾವು ಮುಂದುವರಿದಿದ್ದು, ನಗರದ ರಿಮ್ಸ್ ಆಸ್ಪತ್ರೆಯಲ್ಲಿ ಮತ್ತೋರ್ವ ಬಾಣಂತಿ ಮೃತಪಟ್ಟಿ ದ್ದಾರೆ. ಈ ಮೂಲಕ ಜಿಲ್ಲೆಯಲ್ಲಿ ಕಳೆದ 3 ತಿಂಗಳಿನಲ್ಲಿ ಮೃತಪಟ್ಟ ಬಾಣಂತಿಯರ ಸಾವಿನ ಸಂಖ್ಯೆ 12ಕ್ಕೆ ಏರಿಕೆಯಾಗಿದೆ. ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದ 24 ವರ್ಷದ ಸರಸ್ವತಿ ಎಂಬುವವರು ಸಾವಿಗೀಡಾಗಿದ್ದಾರೆ. ಜ.2ರಂದು ರಿಮ್ಸ್ ಆಸ್ಪತ್ರೆಯಲ್ಲಿ ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸಲಾಗಿತ್ತು. ಈ ವೇಳೆ ಅವರು ಅಧಿಕ ರಕ್ತದೊತ್ತಡದಿಂದ ಬಳಲುತ್ತಿ ದ್ದರು. ಚಿಕಿತ್ಸೆಗೆ ಸ್ಪಂದಿಸದೆ ಅವರು ಜ.5 ರಂದು ಕೊನೆಯುಸಿರೆಳೆದಿದ್ದಾರೆ. ಸದ್ಯ ಮಗುವನ್ನು ತೀವ್ರ ನಿಗಾ ಘಟಕದಲ್ಲಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಸರಸ್ವತಿ ಅವರು ನಾಲ್ಕನೇ ಮಗುವಿಗೆ ಜನ್ಮ ನೀಡಿ ಸಾವಿಗೀಡಾಗಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಸರಸ್ವತಿ ಅವರಿಗೆ ಹೆರಿಗೆ ಬಳಿಕ ರಕ್ತದೊತ್ತಡ ಹೆಚ್ಚಾಗಿ ದ್ದರಿಂದ ಚಿಕಿತ್ಸೆ ನೀಡಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಅವರು ಭಾನುವಾರ ಮೃತಪಟ್ಟಿದ್ದಾರೆ ಎಂದು ರಿಮ್ಸ್‌ನ ವೈದ್ಯಕೀಯ ಅಧೀಕ್ಷಕ ಡಾ.ಭಾಸ್ಕರ್ ತಿಳಿಸಿದ್ದಾರೆ. ರಿಮ್ಸ್ ಆಸ್ಪತ್ರೆಯಲ್ಲಿ 3 ತಿಂಗಳಲ್ಲಿ ಐವರು ಬಾಣಂತಿಯರು ಮೃತಪಟ್ಟಿದ್ದಾರೆ.

# ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಿಬ್ಬಂದಿ, ಅವರ ಕುಟುಂಬಕ್ಕೆ ಅಗತ್ಯ ವೈದ್ಯಕೀಯ ಚಿಕಿತ್ಸೆ ನೀಡಿ

**ಖಾಸಗಿ ಆಸ್ಪತ್ರೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ**



ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರು ಮತ್ತು ಸಿಬ್ಬಂದಿಗೆ ನಗದು ರಹಿತ ಆರೋಗ್ಯ ಸವಲತ್ತು ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಬೆಂಗಳೂರು, ಜ.6(ಕೆಎಂಶಿ)–ನಮ್ಮ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರು ಮತ್ತು ಅವರ ಕುಟುಂಬದವರಿಗೆ ವೈದ್ಯಕೀಯ ಚಿಕಿತ್ಸೆ ನೀಡುವಲ್ಲಿ ನಿರ್ಲಕ್ಷ್ಯ ಹಾಗೂ ಉದಾಸೀನತೆ ತೋರಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಖಾಸಗಿ ಆಸ್ಪತ್ರೆಗಳಿಗೆ ಇಂದಿಲ್ಲಿ ಎಚ್ಚರಿಕೆ ನೀಡಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರು ಮತ್ತು ಸಿಬ್ಬಂದಿಗೆ ನಗದು ರಹಿತ ಆರೋಗ್ಯ ಸವಲತ್ತು ಯೋಜನೆ ಉದ್ಘಾಟಿಸಿ ಮಾತನಾಡಿದ ಅವರು, ಸಾರಿಗೆ ನೌಕರರು ದುಡಿಮೆ ಮೂಲಕ ಸಂಸ್ಥೆ ಮತ್ತು ನಿಗಮದ ಆದಾಯ ಹೆಚ್ಚಿಸುತ್ತಿದ್ದು, ಇವರ ಆರೋಗ್ಯ ಸರ್ಕಾರ, ಸಂಸ್ಥೆ ಮತ್ತು ನಿಗಮದ ಜವಾಬ್ದಾರಿ ಯಾಗಿದೆ ಎಂದರು. ಸಾರಿಗೆ ನೌಕರರ ವೈದ್ಯ ಕೀಯ ಚಿಕಿತ್ಸೆಗೆ 275 ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ, ಒಪ್ಪಂದ ಆಸ್ಪತ್ರೆಗಳ ಸಂಖ್ಯೆ ಇನ್ನೂ ಹೆಚ್ಚಲಿದೆ, ಸಿಬ್ಬಂದಿ ಕರ್ತವ್ಯ ನಿರ್ವಹಿಸುವ ಊರಿನಲ್ಲೇ ಚಿಕಿತ್ಸೆ ಪಡೆಯ ಬಹುದಾಗಿದೆ. ನೌಕರರ ಕುಟುಂಬದವರು ಸಹಾ ನೆಲೆಸಿರುವ ಊರಿನಲ್ಲೇ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಪಡೆಯಬಹುದಾದಂತಹ ಅತ್ಯಂತ ಸುಲಲಿತ ಯೋಜನೆ ಇದಾಗಿದ್ದು, ನೌಕರರು ಮತ್ತು ಕುಟುಂಬ ವರ್ಗದವರು ಇದರ ಸದುಪ ಯೋಗಪಡಿಸಿಕೊಳ್ಳಬೇಕು. ಸಮಾಜದಲ್ಲಿ ಲಿಂಗ ತಾರತಮ್ಯ ಹೋಗಲಾಡಿಸಲು ಮತ್ತು ಮಹಿಳೆ ಯರ ಆರ್ಥಿಕ ಸಾಮರ್ಥ್ಯ ಹೆಚ್ಚಿಸಲು ಶಕ್ತಿ ಹಾಗೂ ಇತರೆ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಶಕ್ತಿ ಯೋಜನೆಯಿಂದಾಗಿ ಧಾರ್ಮಿಕ ಮತ್ತು ಪ್ರವಾಸೋದ್ಯಮ ಸ್ಥಳಗಳಿಗೆ ಪ್ರವಾಸ ಮಾಡುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ, ಈ ಬಗ್ಗೆ ಧರ್ಮಸ್ಥಳದ ಧರ್ಮಾಧಿಕಾರಿಗಳೂ ತಮಗೆ ಪತ್ರ ಬರೆದಿದ್ದಾರೆ ಎಂದರು.

## ನಕ್ಕರೆ ಅದೇ ಸ್ವರ್ಗ

ಸಂತು : ಮಾಸ್ಕ್ ಹಾಕೊಂಡು ದೇವಸ್ಥಾನಕ್ಕೆ ಹೋಗಿ ಬಂದೆ. ಬಂದಾಗಿನಿಂದ ಒಂದೇ ಚಿಂತೆ!

ಗುಂಡ : ಏನಂತ ಚಿಂತೆ?

ಸಂತು : ದೇವರಿಗೆ ನಾನು ಬಂದಿದ್ದೆ ಅಂತ ಗೊತ್ತಾಯಿತೋ... ಇಲ್ವೋ...?

ಮೈಸೂರು ಮಿತ್ರ

ಮಂಗಳವಾರ, 7 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ.........

ಯಾರನ್ನೇ ಆದರೂ ಪರೀಕ್ಷಿಸದೇ ನಂಬಬಾರದು, ನಂಬಿದ ಮೇಲೆ ಪರೀಕ್ಷಿಸಬಾರದು' – ತಿರುವಳ್ಳುವರ್.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಳಿತಾಗಿ ಮುಗಿದಿದ್ದೆಲ್ಲವೂ ಒಳ್ಳೆಯದೇ.

## ನಿಮ್ಮ ಪತ್ರಗಳು

ಬನ್ನಿಮಂಟಪದಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣ ಪ್ರಸ್ತಾಪ;

# ಇದು ಸಂಚಾರ ಅವ್ಯವಸ್ಥೆ ಜೊತೆಗೆ ಬನ್ನಿಮಂಟಪ ಹಾಳು ಮಾಡುತ್ತದೆ

### ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಗಮನಿಸಿ



**"ಇದೀಗ ಬನ್ನಿಮಂಟಪದ ನೆಲ್ಸನ್ ಮಂಡೇಲಾ ರಸ್ತೆಯಲ್ಲಿ ಬಸ್ ನಿಲ್ದಾಣದ ಪ್ರಸ್ತಾಪದೊಂದಿಗೆ ಕೆಎಸ್‌ಆರ್‌ಟಿಸಿ ಮತ್ತೊಂದು ತಪ್ಪು ಹೆಜ್ಜೆಯಿಡುತ್ತಿದೆ. ಪ್ರಸ್ತುತ ನೆಲ್ಸನ್ ಮಂಡೇಲಾ ರಸ್ತೆಯಲ್ಲಿ (ಬನ್ನಿಮಂಟಪ ಮುಖ್ಯರಸ್ತೆ) ಸಂಚಾರ ವ್ಯವಸ್ಥೆ ಸಮರ್ಪಕವಾಗಿದೆ. ಇದೀಗ ಹೊಸ ಬಸ್ ನಿಲ್ದಾಣ ನಿರ್ಮಾಣವಾದರೆ, ಇಲ್ಲಿ ಸುತ್ತಮುತ್ತಲ ಇಡೀ ವಸತಿ ಮತ್ತು ವಾಣಿಜ್ಯ ಪ್ರದೇಶದಲ್ಲಿ ದೊಡ್ಡ ಮಟ್ಟದಲ್ಲಿ ಸಂಚಾರ ದಟ್ಟಣೆ ಸಮಸ್ಯೆ ತಲೆದೋರಲಿದೆ.**

ಮಾನ್ಯರೇ,

2024ರ ಡಿ.25ರಂದು 'ಮೈಸೂರು ಮಿತ್ರ'ನ ಸಹೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್'ನಲ್ಲಿ ('ಅನದರ್ ಆಸ್ಟ್ರಿಚ್ ಪಾಲಿಸಿ ಆಫ್ ಕೆಎಸ್‌ಆರ್‌ಟಿಸಿ' ಉಪ ಶೀರ್ಷಿಕೆಯಡಿ ಪೂರ್ಣ ಪುಟ) ಲೇಖನ ಪ್ರಕಟವಾಗಿದೆ. ಈ ಸಂಬಂಧ ಮೈಸೂರಿನ ನಾಗರಿಕರ ಗಮನ ಸೆಳೆಯಬಯಸುತ್ತೇನೆ. ಸದರಿ ಲೇಖನವು ಹೊಸ ಬಸ್ ನಿಲ್ದಾಣ ಸ್ಥಾಪನೆಯಿಂದ ಉಂಟಾಗುವ ಅನಾಹುತಗಳ ಮೇಲೆ ಬೆಳಕು ಚೆಲ್ಲುತ್ತದೆ.

ಜೊತೆಗೆ ಇದೇ ಜ.3ರಂದು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳಲ್ಲಿ ಪ್ರಕಟವಾದ ಮುಖಪುಟದ ಸುದ್ದಿಯಲ್ಲಿ ನೂತನ ಬಸ್ ನಿಲ್ದಾಣ ಸಂಬಂಧ ಕೆಎಸ್‌ಆರ್‌ಟಿಸಿ ಕಳುಹಿಸಿದ ಪ್ರಸ್ತಾವನೆಗೆ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಉಲ್ಲೇಖವಾಗಿದೆ. ಹೀಗಾಗಿ ಹೊಸ ಬಸ್ ನಿಲ್ದಾಣ ಖಚಿತವಾಗಿಯೂ ಬರಲಿದೆ ಮತ್ತು ಬಹುಶಃ ಬಹಳ ವೇಗವಾಗಿ ತಲೆ ಎತ್ತಲಿದೆ!

ಕೆಆರ್ ವೃತ್ತದ ಸಮೀಪವಿರುವ ಕೆಎಸ್‌ಆರ್‌ಟಿಸಿ ಸಿಟಿ ಬಸ್ ನಿಲ್ದಾಣವು ವ್ಯಾಪಾರ ಕೇಂದ್ರೀತ ಪ್ರದೇಶದಲ್ಲಿ ಇರುವುದೇ ಇಲ್ಲಿನ ದಟ್ಟಣೆಗೆ ಮುಖ್ಯ ಕಾರಣವೆಂದು ಅನೇಕ ವರದಿಗಳು ಸೂಚಿಸಿವೆ. ಆದರೂ ಈ ಸಿಟಿ ಬಸ್ ನಿಲ್ದಾಣದ ಅಭಿವೃದ್ಧಿಗಾಗಿ ಕೆಎಸ್‌ಆರ್‌ಟಿಸಿ ದೊಡ್ಡ ಪ್ರಮಾಣದ ವೆಚ್ಚ ಮಾಡಿತು. ನಂತರವೂ ಸಂಚಾರ ವ್ಯವಸ್ಥೆ ಮತ್ತಷ್ಟು ಹದಗೆಟ್ಟಿತು.

ರಿಂಗ್ ರಸ್ತೆಯ ಹೊರವಲಯದಲ್ಲಿ ಕೆಲ ಬಸ್ ನಿಲ್ದಾಣಗಳನ್ನು ನಿರ್ಮಿಸುವ ಮೂಲಕ ನಗರದೊಳಗೆ ಬಸ್ ದಟ್ಟಣೆಯ ಒಳ ಮತ್ತು ಹೊರ ಸಂಚಾರ ತಗ್ಗಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಅಂಥದ್ದೇನೂ ಆಗಲಿಲ್ಲ. ವಿಪರ್ಯಾಸವೆಂದರೆ, ಬೆಂಗಳೂರು–ನೀಲಗಿರಿ (ಬಿಎನ್ ರಸ್ತೆ) ರಸ್ತೆಯಲ್ಲಿರುವ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಸಂಚಾರ ದಟ್ಟಣೆ ಕಾರಣ ಕೆಎಸ್‌ಆರ್‌ಟಿಸಿ ಭಾರಿ ಹಣವನ್ನು ವೆಚ್ಚ ಮಾಡಿ ಇಡೀ ಬಸ್ ನಿಲ್ದಾಣವನ್ನು ಮರು ನಿರ್ಮಾಣ ಮಾಡಿತು. ಇರುವ ಬಸ್‌ಗಳ ಸೇವೆ ಮತ್ತು ನಿಲುಗಡೆಗೆ ಸಾಕು ಎಂಬ ನಿರ್ಧಾರಕ್ಕೆ ಬಂದಂತೆ.

ಬನ್ನಿಮಂಟಪವು ಮೈಸೂರು ದಸರಾ ಮಹೋತ್ಸವದ ಅಂತಿಮ ಕಾರ್ಯಕ್ರಮದ ಪ್ರಮುಖ ಪಂಜಿನ ಕವಾಯತು ಹೊಂದಿರುವ ತಾಣವಾಗಿದೆ. ದಸರಾ ಪೂರ್ವಭಾವಿಯಾಗಿಯೇ ಹತ್ತಕ್ಕೂ ಹೆಚ್ಚು ಆನೆಗಳನ್ನು ಹೊಂದಿದ ಗಜಪಡೆಯು ಮೈಸೂರು ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ತಿಂಗಳ ಕಾಲ ತಾಲೀಮು ನಡೆಸಲಿವೆ.

ಇದೀಗ ಬನ್ನಿಮಂಟಪದ ನೆಲ್ಸನ್ ಮಂಡೇಲಾ ರಸ್ತೆಯಲ್ಲಿ ಬಸ್ ನಿಲ್ದಾಣದ ಪ್ರಸ್ತಾಪದೊಂದಿಗೆ ಕೆಎಸ್‌ಆರ್‌ಟಿಸಿ ಮತ್ತೊಂದು ತಪ್ಪು ಹೆಜ್ಜೆಯಿಡುತ್ತಿದೆ. ಪ್ರಸ್ತುತ ನೆಲ್ಸನ್ ಮಂಡೇಲಾ ರಸ್ತೆಯಲ್ಲಿ (ಬನ್ನಿಮಂಟಪ ಮುಖ್ಯರಸ್ತೆ) ಸಂಚಾರ ವ್ಯವಸ್ಥೆ ಸಮರ್ಪಕವಾಗಿದೆ. ಇದೀಗ ಹೊಸ ಬಸ್ ನಿಲ್ದಾಣ ನಿರ್ಮಾಣವಾದರೆ, ಇಲ್ಲಿ ಸುತ್ತಮುತ್ತಲ ಇಡೀ ವಸತಿ ಮತ್ತು ವಾಣಿಜ್ಯ ಪ್ರದೇಶದಲ್ಲಿ ದೊಡ್ಡ ಮಟ್ಟದಲ್ಲಿ ಸಂಚಾರ ದಟ್ಟಣೆ ಸಮಸ್ಯೆ ತಲೆದೋರಲಿದೆ. ಈ ಉದ್ದೇಶಿತ ಬಸ್ ನಿಲ್ದಾಣದಿಂದ 2,600 ಬಸ್‌ಗಳ ಕಾರ್ಯಾಚರಣೆ ಮಾಡಬೇಕಾಗುತ್ತದೆ. ಜೊತೆಗೆ ಶೀಘ್ರದಲ್ಲಿ ನೂರಾರು ಬಸ್‌ಗಳ ಸೇರ್ಪಡೆಯೂ ಆಗಲಿವೆ. ಈಗ ಊಹಿಸಿದರೆ, ನೆಲ್ಸನ್ ಮಂಡೇಲಾ ರಸ್ತೆಯ ಉದ್ದೇಶಿತ ಬಸ್ ನಿಲ್ದಾಣದ ಜಂಕ್ಷನ್ ಹಾಗೂ ದಸರಾ ವಿಜಯದಶಮಿಯ ದಿನದ ಬನ್ನಿಮರದ ಪೂಜೆ ಪರಂಪರೆಯ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಯಾವ ಮಟ್ಟದಲ್ಲಿ ವಾಹನ ಸಂಚಾರ ಹಾಗೂ ಜನದಟ್ಟಣೆ ತಲೆ ದೋರಬಹುದು ಎಂಬ ಚಿತ್ರಣ ಕಣ್ಮುಂದೆ ಬರಲಿದೆ.

ಕುತೂಹಲಕಾರಿ ಎಂದರೆ, ಈ ಉದ್ದೇಶಿತ ಬಸ್ ನಿಲ್ದಾಣದಿಂದ ಹೆಚ್ಚುವರಿ ದಸರಾ ಜನಸಂದಣಿ ಉಂಟಾಗಲಿದ್ದು, ಇದಕ್ಕೆ ಪೂರಕವಾಗಿ ಬಸ್ ಸಂಚಾರ ಒದಗಿಸಬೇಕಾಗುತ್ತದೆ!! ಖಂಡಿತ ಇದು ಮೈಸೂರು ಪರಂಪರೆಯ ವಿನಾಶದ ಮುನ್ಸೂಚನೆಯಾಗಿದೆ. ಮೈಸೂರು ಮಹಾನಗರ ಪಾಲಿಕೆ (ಎಂಸಿಸಿ) ಮತ್ತು ಮುಡಾದ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಅತಿರೇಕದ ತಪ್ಪು ನಿರ್ಧಾರಗಳಿಗೆ ಮೈಸೂರು ಈಗಾಗಲೇ ಬಲಿಪಶು ಆಗಿದೆ. ಈ ತಪ್ಪು ನಿರ್ಧಾರಗಳಲ್ಲಿ ಕೆಎಸ್‌ಆರ್‌ಟಿಸಿಯೂ ಸಮಪಾಲು ಹೊಂದಿದೆ. ಇದೀಗ ಉದ್ದೇಶಿತ ಬಸ್ ನಿಲ್ದಾಣ ಸ್ಥಾಪನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಮೈಸೂರಿಗರು ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕಿದೆ.

ಇದು ಮೈಸೂರಿನ ಪರಂಪರೆಗೆ ಮಹತ್ವದ ತಿರುವು ನೀಡಲಿದೆ. ಬನ್ನಿಮಂಟಪದ ಸುತ್ತಮುತ್ತ ಇರುವ ಶಿಕ್ಷಣ ಸಂಸ್ಥೆಗಳು, ನಿವಾಸಿಗಳು ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಬನ್ನಿಮಂಟಪದ ವಿಸ್ತೃತ ಬಡಾವಣೆ ನಿವಾಸಿಗಳು ಮುಂದಿನ ಅಪಾಯವನ್ನು ಅರಿತು ಈ ಪ್ರಸ್ತಾಪಿತ ಬಸ್ ನಿಲ್ದಾಣದ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಈಗಾಗಲೇ ಸಮಯ ಸರಿಯುತ್ತಿದ್ದು, ತುರ್ತು ಕಾರ್ಯಪ್ರವೃತ್ತರಾಗಲು ಕೋರಲಾಗಿದೆ.

–ಆರ್.ಚಂದ್ರಪ್ರಕಾಶ್

*ಟಿಪ್ಪಣಿ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಕೂಡಲೇ ಖುದ್ದು ಮಧ್ಯಪ್ರವೇಶಿಸುವ ಮೂಲಕ ತಮ್ಮ ನೇತೃತ್ವದ ಸಚಿವ ಸಂಪುಟ ಕೈಗೊಂಡ ನಿರ್ಧಾರವನ್ನು ರದ್ದುಗೊಳಿಸಬೇಕು. ತಪ್ಪಿದಲ್ಲಿ ಪಿಐಎಲ್ ಸಲ್ಲಿಸಲಾಗುವುದು ಎಂದು ನಮಗೆ ತಿಳಿಸಲಾಗಿದೆ. ಕೆಆರ್ ವೃತ್ತ ಸಮೀಪದ ಸಿಟಿ ಬಸ್ ನಿಲ್ದಾಣ ಮತ್ತು ಬಿಎನ್ ರಸ್ತೆಯ ಸಬ್‌ಅರ್ಬನ್ ಬಸ್ ನಿಲ್ದಾಣದ ವಿಚಾರದಲ್ಲಿ ಆದಂತೆ ಇದು ಗತಿಸಿದ ನಂತರದಲ್ಲಿ ವಿಷಾದ ವ್ಯಕ್ತಪಡಿಸುವ ಪ್ರಕರಣವಾಗಬಾರದು.*

–ಕೆಬಿಜಿ



ಬನ್ನೂರು ಕೆ. ರಾಜು

ಸಾಹಿತಿ, ಪತ್ರಕರ್ತ

ಮೊ: 94815 33167

ಬಹುಮುಖಿ


# ಅಭಿನವ ಸರಸ್ವತಿ ಬಿ.ಸರೋಜಾದೇವಿ

**ಜನವರಿ 7. ಖ್ಯಾತ ಚಲನಚಿತ್ರ ಕಲಾವಿದೆ ಪದ್ಮಭೂಷಣ ಡಾ. ಬಿ.ಸರೋಜಾದೇವಿ ಅವರ 84ನೇ ಹುಟ್ಟುಹಬ್ಬ. ತನ್ನಿಮಿತ್ತ ಈ ಲೇಖನ.**

ಅಚ್ಚ ಕನ್ನಡತಿ ಪದ್ಮಭೂಷಣ ಡಾ.ಬಿ.ಸರೋಜಾದೇವಿ ಅವರು ಚಿತ್ರರಂಗಕ್ಕೆ ಎಂದೂ ಬಯಸಿ ಬಂದವರಲ್ಲ. ಬೆಳ್ಳಿತೆರೆಯೇ ಅವರನ್ನು ಬಯಸಿ ತನ್ನತ್ತ ಸೆಳೆದುಕೊಂಡ ಪ್ರತಿಭಾರತ್ನ. ಐವತ್ತರ ದಶಕದಲ್ಲೇ ಹಿಂದಿ ಚಿತ್ರರಂಗದಲ್ಲಿ ಹೆಸರು ಮಾಡಿದ್ದ ಕನ್ನಡಿಗ ಬಿ.ಆರ್.ಕೃಷ್ಣಮೂರ್ತಿ ತಾವು ಕನ್ನಡದಲ್ಲಿ ನಿರ್ಮಿಸಿದ್ದ 'ಶ್ರೀರಾಮ ಪೂಜಾ' ಚಿತ್ರದ ಪುಟ್ಟ ಪಾತ್ರವೊಂದಕ್ಕೆ ಪುಟ್ಟ ವಯಸ್ಸಿನಲ್ಲೇ ಪುಟಿದೇಳುತ್ತಿದ್ದ ಸರೋಜಾದೇವಿ ಅವರನ್ನು ಕರೆತಂದರು. ಈ ಚಿತ್ರಕ್ಕೆ ಬಣ್ಣ ಹಚ್ಚುವಾಗಲೇ ತಮ್ಮ ಕಣ್ಣಿಗೆ ಬಿದ್ದ ಸರೋಜಾದೇವಿಯವರ ಚೆಂದಕ್ಕೆ ಬೆರಗಾದ ಅಂದಿನ ಖ್ಯಾತ ನಟ ಹೊನ್ನಪ್ಪ ಭಾಗವತರ್, ತಾವು ನಾಯಕ ನಟರಾಗಿ ನಿರ್ಮಿಸಿದ್ದ 'ಮಹಾಕವಿ ಕಾಳಿದಾಸ' ಎಂಬ ಚಿತ್ರದಲ್ಲಿ ಸರೋಜಾದೇವಿಗೆ ನಾಯಕಿ ಪಟ್ಟ ನೀಡಿ ಬೆಳ್ಳಿತೆರೆಗೆ ಬಹುದೊಡ್ಡದಾಗಿ ಪರಿಚಯಿಸಿದ್ದರು. ಈ ಚಿತ್ರಕ್ಕೆ ನಾಯಕಿಯಾಗಲು ಸರೋಜಾದೇವಿ ಮತ್ತು ಅವರ ಮನೆಯವರನ್ನು ಒಪ್ಪಿಸಲು ಹೊನ್ನಪ್ಪ ಭಾಗವತರ್ ಅವರಿಗೆ ಆಗ ಸಾಕು–ಸಾಕಾಗಿತ್ತಂತೆ.

ಹೀಗೆ ಅಂದು ಒಲ್ಲದ ಮನಸ್ಸಿನಿಂದಲೇ ಚಿತ್ರರಂಗ ಪ್ರವೇಶಿಸಿ ನಂತರದ ದಿನಗಳಲ್ಲಿ ಬಣ್ಣದ ಲೋಕವನ್ನೇ ತನ್ನ ಬದುಕಾಗಿಸಿ, ಉಸಿರಾಗಿಸಿಕೊಂಡು ಬಹುಭಾಷಾ ತಾರೆಯಾಗಿ, ಭಾರತೀಯ ಚಿತ್ರರಂಗದ ಬಹಳಷ್ಟು ನಾಯಕ ನಟ ದಿಗ್ಗಜರ ಜೊತೆ ನಾಯಕಿಯಾಗಿ ಅಭಿನಯಿಸಿದ ಈ ಚೆಲುವಿನ ತಾರೆ ಸರೋಜಾದೇವಿ ಜನಿಸಿದ್ದು 1942ರ ಜನವರಿ 7ರಂದು ಚನ್ನಪಟ್ಟಣ ತಾಲೂಕಿನ ದಶಾವಾರ ಗ್ರಾಮದಲ್ಲಿ. ತಂದೆ ಮಾಯಣ್ಣಗೌಡ, ತಾಯಿ ರುದ್ರಮ್ಮ. ಬಾಲ್ಯದಲ್ಲೇ ಬಹಳ ಬ್ಯೂಟಿ ಮತ್ತು ಚೂಟಿಯಾಗಿದ್ದ ಇವರಿಗೆ ಸೌಂದರ್ಯವೇ ವರವಾಗಿತ್ತು. ಹಾಗಾಗಿ ಇವರಿದ್ದೆಡೆ ಎಲ್ಲೇ ಯಾವುದೇ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದರೂ ಅಲ್ಲಿ ಮುಂಚೂಣಿಯಲ್ಲಿ ಮಿಂಚುತ್ತಿದ್ದದ್ದು ಸರೋಜಾದೇವಿಯೇ! ಮಧ್ಯಮ ವರ್ಗದ ಒಕ್ಕಲಿಗ ಕುಟುಂಬದ ಇವರ ತಂದೆ ಮಾಯಣ್ಣಗೌಡರು ಬೆಂಗಳೂರಿನಲ್ಲಿ ಪೊಲೀಸ್ ಇಲಾಖೆಯಲ್ಲಿದ್ದುದರಿಂದ ಸರೋಜಾದೇವಿಯ ವಿದ್ಯಾಭ್ಯಾಸ ಆರಂಭವಾದದ್ದು ಬೆಂಗಳೂರಿನ ಚಾಮರಾಜಪೇಟೆಯ ಸೇಂಟ್ ಥೆರೇಸಾ ಶಾಲೆಯಲ್ಲಿ. ಬಾಲ್ಯದ ವಿದ್ಯಾಭ್ಯಾಸದ ಸಮಯದಲ್ಲೇ ಇವರು ಸಂಗೀತ, ನೃತ್ಯಗಳತ್ತ ಆಕರ್ಷಿತರಾಗಿ ಶಾಲೆಯ ವಿದ್ಯೆಯ ಜೊತೆ ಇದೆಲ್ಲವನ್ನೂ ಕಲಿಯತೊಡಗಿದರು. ಇವರ ಎಲ್ಲಾ ರೀತಿಯ ಕಲಾಭಿರುಚಿಯ ಹೆಜ್ಜೆಗಳಿಗೂ ತಂದೆ–ತಾಯಿಗಳಾದ ಮಾಯಣ್ಣಗೌಡ ಹಾಗೂ ರುದ್ರಮ್ಮನವರ ಪ್ರೋತ್ಸಾಹವಿತ್ತು. ಇಷ್ಟಾದರೂ ಕೂಡ ಸಂಗೀತ, ನೃತ್ಯಗಳಲ್ಲಿ ಇವರಿಗಿದ್ದಷ್ಟು ಒಲವು ಸಿನಿಮಾ ನಟನೆಯತ್ತ ಇರಲಿಲ್ಲ. ಬಹುಶಃ ಆಗಿನ ಕಾಲ ಇಂದಿನಂತಿರಲಿಲ್ಲ. ರಂಗನಟಿ, ಸಿನಿಮಾ ನಟಿಯರೆಂದರೆ ಮೂಗು ಮುರಿವ ಮಂದಿಯೇ ತುಂಬಿದ್ದರಿಂದ ಇವರಿಗೆ ಅಭಿನಯದತ್ತ ಆಸಕ್ತಿ ಇರಲಿಲ್ಲ ಎನಿಸುತ್ತದೆ. ಆದರೆ ಬಣ್ಣದ ಲೋಕ ಇವರನ್ನು ಬಿಡಲಿಲ್ಲ. ತಾನಿಷ್ಟಪಟ್ಟ ಕಲಾ (ಸರೋಜಾ) ದೇವಿಯನ್ನು ಹೇಗೋ ಬೆಳ್ಳಿತೆರೆಗೆ ಕರೆತಂದೇ ಬಿಟ್ಟಿತು. ಅದೃಷ್ಟವೆಂದರೆ ಇವರು ನಾಯಕಿ ನಟಿಯಾಗಿ ಅಭಿನಯಿಸಿದ ಮೊದಲ ಚಿತ್ರ 'ಮಹಾಕವಿ ಕಾಳಿದಾಸ' ಕೇಂದ್ರ ಸರ್ಕಾರದ ರಾಷ್ಟ್ರೀಯ ಅರ್ಹತಾ ಪ್ರಶಸ್ತಿ ಪಡೆದು ಇವರ ಪ್ರತಿಭೆಗೊಂದು ಕೋಡು ಮೂಡಿಸಿತ್ತು.

ಕನ್ನಡ ಚಿತ್ರರಂಗದಲ್ಲಿ ಆಗ ಸೂಪರ್‌ಸ್ಟಾರ್‌ಗಳೆನಿಸಿದ್ದ ಕುಮಾರತ್ರಯರಾದ ರಾಜ್‌ಕುಮಾರ್, ಉದಯ್ ಕುಮಾರ್, ಕಲ್ಯಾಣ್ ಕುಮಾರ್ ಅವರುಗಳ ಎದುರು ನಾಯಕಿಯಾಗಿ ಹಲವಾರು ಚಿತ್ರಗಳಲ್ಲಿ ಅಭಿನಯಿಸಿ ಸೂಪರ್ ಸ್ಟಾರಿಣಿಯಾಗಿ ಮಿಂಚಿದ್ದು ಇವರ ಹೆಗ್ಗಳಿಕೆ. ಹಾಗೆಯೇ ತಮಿಳಿನಲ್ಲಿ ಅಲ್ಲಿನ ಜನಪ್ರಿಯ



ಡಾ.ಬಿ.ಸರೋಜಾದೇವಿ

ತಾರೆಗಳಾದ ಎಂ.ಜಿ. ರಾಮಚಂದ್ರನ್, ಶಿವಾಜಿ ಗಣೇಶನ್, ಜೆಮಿನಿ ಗಣೇಶನ್.... ಮುಂತಾದ ಅತಿರಥ ಮಹಾರಥ ನಾಯಕ ನಟರುಗಳ ಜೊತೆ ಬಹಳಷ್ಟು ತಮಿಳು ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿ ಮೆರೆದದ್ದೂ ಇವರ ಹೆಚ್ಚುಗಾರಿಕೆ. ಅಂತೆಯೇ ತೆಲುಗಿನಲ್ಲಿ ಅಲ್ಲಿನ ನಟ ದಿಗ್ಗಜರುಗಳಾದ ಎನ್.ಟಿ. ರಾಮರಾವ್, ಅಕ್ಕಿನೇನಿ ನಾಗೇಶ್ವರರಾವ್‌ರಂತಹ ಸ್ಟಾರ್‌ಗಳ ಜೊತೆ ಹಲವು ಹತ್ತು ತೆಲುಗು ಚಿತ್ರಗಳಲ್ಲಿ ಪ್ರತಿನಾಯಕಿಯಾಗಿ ಅಭಿನಯಿಸಿದ ಕೀರ್ತಿ ಇವರದ್ದು. ಇಷ್ಟಲ್ಲದೆ ಹಿಂದಿ ಚಿತ್ರಗಳಲ್ಲೂ ಸರೋಜಾದೇವಿ ನಟಿಸಿದ್ದು ದಿಲೀಪ್ ಕುಮಾರ್, ರಾಜೇಂದ್ರ ಕುಮಾರ್, ಸುನಿಲ್‌ದತ್, ಶಮ್ಮಿಕಪೂರ್ ಮುಂತಾದ ಹಿಂದಿ ಚಿತ್ರರಂಗದ ದಿಗ್ಗಜಗಳೆಲ್ಲರ ಜೊತೆ ಅನೇಕ ಹಿಂದಿ ಚಿತ್ರಗಳಲ್ಲಿ ಅಭಿನಯಿಸಿ ತಮ್ಮ ಅಪ್ರತಿಮ ಪ್ರತಿಭಾ ಸಾಮರ್ಥ್ಯದಿಂದ ಅಲ್ಲೂ ಕೂಡ ಅದ್ಭುತ ಯಶಸ್ಸು ಕಂಡ ಅಸಾಧಾರಣ ಕಲಾವಂತಿಕೆ ಇವರದು.

ಹೀಗೆ ತಾರೆ ಸರೋಜಾದೇವಿ ಹೆಜ್ಜೆಯಿರಿಸಿದ ಯಾವುದೇ ಭಾಷೆಯ ಚಲನ ಚಿತ್ರಗಳಿರಲಿ ಇವರಿಗೆ ಯಶಸ್ಸು ಕಟ್ಟಿಟ್ಟಬುತ್ತಿಯಾಗಿತ್ತು. ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಜಾನಪದ.... ಹೀಗೆ ಎಲ್ಲಾ ಬಗೆಯ ಚಿತ್ರಗಳಲ್ಲೂ ಅಭಿನಯಿಸಿರುವ ಇವರು ಎಂಥಾ ಕಠಿಣ ಪಾತ್ರವಾದರೂ ಸರಿಯೇ ಲೀಲಾಜಾಲವಾಗಿ ನಟಿಸುವ ಸಹಜಾಭಿನಯ ಪ್ರವೀಣೆ ಎನ್ನಬಹುದು. ಕನ್ನಡ, ತಮಿಳು, ತೆಲುಗು, ಹಿಂದಿ ಸೇರಿದಂತೆ ಇವರು ಅಭಿನಯಿಸಿರುವ ಬಹುತೇಕ ಚಿತ್ರಗಳು ಸಾರ್ವಕಾಲಿಕ ಉತ್ಕೃಷ್ಟ ಚಿತ್ರಗಳಾಗಿದ್ದು ಪಾತ್ರಗಳೇ ತಾನಾಗಿ ತನ್ಮಯದಿಂದ ಅಭಿನಯಿಸುವ ಇವರ ಕಲಾಕೌಶಲಕ್ಕೆ ಸಾಕ್ಷಿಗಲ್ಲುಗಳಾಗಿವೆ.

ಕನ್ನಡದಲ್ಲಂತೂ ಇವರ ಅಭಿನಯದಲ್ಲಿ ಮೂಡಿಬಂದಿರುವ ವಿಶೇಷವಾಗಿ ವರನಟ ಪದ್ಮಭೂಷಣ ಡಾ.ರಾಜ್‌ಕುಮಾರ್ ಅವರಿಗೆ ನಾಯಕಿಯಾಗಿ ಕು.ರಾ. ಸೀತಾರಾಮ ಶಾಸ್ತ್ರಿ ಅವರ 'ಅಣ್ಣತಂಗಿ' (1958) ಚಿತ್ರದಿಂದ ಆರಂಭಿಸಿ ಭಾರ್ಗವ ಅವರ 'ಭಾಗ್ಯವಂತರು' ತನಕ ಹನ್ನೊಂದು ಚಿತ್ರಗಳಲ್ಲಿ ನಟಿಸಿರುವ ಸರೋಜಾದೇವಿ, ಡಾ.ರಾಜ್ ಜೋಡಿಯಾಗಿ ಕನ್ನಡಿಗರೆಂದೆಂದಿಗೂ ಮರೆಯದಂಥ ಅಪೂರ್ವ ಚಿತ್ರಗಳಲ್ಲಿ ಅಭಿಜಾತ ಅಭಿನೇತ್ರಿಯಾಗಿ ಮೆರೆದಿದ್ದಾರೆ. 1961ರಲ್ಲಿ ತೆರೆಕಂಡ ಚಿತ್ರಶಿಲ್ಪಿ ಬಿ.ಆರ್. ಪಂತುಲು ಅವರ 'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿ ತಾಯ್ನಾಡಿನ ದಾಸ್ಯದ ಸಂಕೋಲೆಯನ್ನು ಕಿತ್ತೆಸೆಯುವ ಭಾರವನ್ನು ಹೊತ್ತ ರಾಣಿ ಚೆನ್ನಮ್ಮನಾಗಿ ಸರೋಜಾದೇವಿಯ ಅಭಿನಯವೇನು ಸಾಮಾನ್ಯವೆ ನಟನೆಯ ಆ ಗತ್ತು, ಗೈರತ್ತು, ಸಂಭಾಷಣೆಯ ಗಮ್ಮತ್ತು ಯಾರು ತಾನೆ ಮರೆತಾರು ಚೆನ್ನಮ್ಮನ ಪತಿ ದೇಸಾಯಿ ಮಲ್ಲಸರ್ಜನಾಗಿ ಸರೋಜಾದೇವಿ ಜೊತೆ ಈ ಚಿತ್ರದಲ್ಲಿ ಅಭಿನಯಿಸಿದ್ದ ಡಾ.ರಾಜ್‌ರವರೇ ಒಂದು ಕ್ಷಣ ಇವರ ಅಭಿನಯ ಕಂಡು ಮೂಕವಿಸ್ಮಿತರಾಗಿದ್ದರಂತೆ. ಈ ಚಿತ್ರಕ್ಕೆ ಆ ವರ್ಷದ ಕೇಂದ್ರ ಸರ್ಕಾರದ ರಜತ ಪದಕ ರಾಷ್ಟ್ರೀಯ ಪುರಸ್ಕಾರ ಬಂದಾಗ ಸ್ವತಃ ಡಾ. ರಾಜ್‌ಕುಮಾರ್‌ರವರೇ ಇದು ಸರೋಜಾದೇವಿಯವರ ಅಮೋಘ ಅಭಿನಯಕ್ಕೆ ಸಂದ ಗೌರವವೆಂದು ಮನದುಂಬಿ ಉದ್ಗರಿಸಿದ್ದರಂತೆ! ಹಾಗೆಯೇ ಬಿ.ಪುಟ್ಟಸ್ವಾಮಯ್ಯನವರ ಕಾದಂಬರಿ ಆಧರಿಸಿ ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಚಿತ್ರಿಸಿ 1969 ರಲ್ಲಿ ತೆರೆಗೆ ಬಂದ 'ಮಲ್ಲಮ್ಮನ ಪವಾಡ' ಚಿತ್ರದಲ್ಲಿ ಡಾ. ರಾಜ್ ಜೊತೆ ನಟಿಸಿರುವ ಸರೋಜಾದೇವಿಯವರು ಜೀವ ತುಂಬಿರುವ ಮಲ್ಲಮ್ಮನನ್ನು ಮರೆಯಲಾದೀತೆ?

ಇನ್ನು 1971ರಲ್ಲಿ ಬಂದ ಸಿದ್ದಲಿಂಗಯ್ಯ ನಿರ್ದೇಶನದ 'ನ್ಯಾಯವೇ ದೇವರು' ಚಿತ್ರವಂತೂ ಡಾ.ರಾಜ್ ಮತ್ತು ಸರೋಜಾದೇವಿ ಜೋಡಿಯಲ್ಲಿನ ಒಂದು ಅಮರ ಪ್ರೇಮ ಕಾವ್ಯವೆಂದೇ ಹೇಳಬಹುದು.

ಅಂತೆಯೇ ಅದೇ 1971 ರಲ್ಲೇ ತೆರೆಗೆ ಬಂದ ಕೆ.ಎಸ್.ಎಲ್. ಸ್ವಾಮಿ (ರವಿ) ಅವರ ಪೌರಾಣಿಕ ಚಿತ್ರವಾದ 'ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮಾ' ಹಾಗೆಯೇ 1974 ರಲ್ಲಿ ಪೌರಾಣಿಕ ಚಿತ್ರಗಳಲ್ಲೇ ಬಹು ವೈಭವೋಪೇತವಾಗಿ ತೆರೆಕಂಡ ವಿಜಯ್ ಅವರ 'ಶ್ರೀನಿವಾಸ ಕಲ್ಯಾಣ', ಪೌರಾಣಿಕ ಚಿತ್ರಗಳನ್ನು ತೆಗೆಯುವುದರಲ್ಲಿ ಎತ್ತಿದ ಕೈ ಎಂದೇ ಹೆಸರಾಗಿದ್ದ ಹುಣಸೂರು ಕೃಷ್ಣಮೂರ್ತಿ ಅವರ ನಿರ್ದೇಶನದಲ್ಲಿ 1977ರಲ್ಲಿ ಮಹೋನ್ನತವಾಗಿ ಬಂದ 'ಬಬ್ರುವಾಹನ' ಚಿತ್ರದಲ್ಲಿ ಚಿತ್ರಾಂಗದೆಯಾಗಿ ಸರೋಜಾದೇವಿಯ ಅಭಿನಯ ಅಬ್ಬಬ್ಬಾ ಎನ್ನುವಂಥಾದ್ದು.

ಇನ್ನು ಇದೇ 1977ರಲ್ಲಿ ಭಾರ್ಗವ ಅವರ ಮೂಸೆಯಿಂದ ಮೂಡಿಬಂದ 'ಭಾಗ್ಯವಂತರು' ಚಿತ್ರದ ಪಾರ್ವತಿಯನ್ನು ಮರೆತವರುಂಟೆ. ಪಾರ್ವತಿ ಪಾತ್ರಕ್ಕೆ ಪರಕಾಯ ಪ್ರವೇಶ ಮಾಡಿರುವ ಸರೋಜಾದೇವಿ ಇಲ್ಲಿ ಡಾ.ರಾಜ್‌ಕುಮಾರ್‌ಗೆ ಸಮಾನಾಂತರ ನಾಯಕಿಯಾಗಿ ಅಂಥ ಮೇರು ನಟನ ಸರಿ ಸಮಕ್ಕೆ ಅಭಿನಯಿಸಿ ಗೆದ್ದಿದ್ದಾರೆ.

ಹೀಗೆ ತಾರೆ ಸರೋಜಾದೇವಿ ತಮ್ಮ ಅಪ್ರತಿಮ ಅಭಿನಯದಿಂದ ಚಿತ್ರ ಪ್ರೇಮಿಗಳನ್ನು ಮಂತ್ರಮುಗ್ಧರನ್ನಾಗಿಸಿದ ಹಲವಾರು ಚಿತ್ರಗಳು ತೆರೆಯ ಮೇಲೆ ಬಂದಿವೆ. ಇವುಗಳೆಲ್ಲದರ ವಿಶ್ಲೇಷಣೆ ಇಲ್ಲಿ ಕಷ್ಟಸಾಧ್ಯ! ಆದರೂ ವಾದಿರಾಜ್‌ರ ಮೊದಲ ಚಿತ್ರವೆನಿಸಿದ ನಟರಾಜನ್ ನಿರ್ದೇಶನದ 'ಕೋಕಿಲವಾಣಿ' (1956), ನಟ ಬಾಲಕೃಷ್ಣ ಕಥೆ, ಚಿತ್ರಕಥೆ, ಸಂಭಾಷಣೆ, ಹಾಡುಗಳನ್ನು ಬರೆದಿದ್ದ ಹೊನ್ನಪ್ಪ ಭಾಗವತರ್ ಅವರ 'ಪಂಚರತ್ನ' (1956), ಡಾ.ರಾಜ್‌ಕುಮಾರ್, ಕಲ್ಯಾಣ್ ಕುಮಾರ್, ಜಮುನಾರಂತಹ ಬಹು ತಾರಾಗಣದ ಆರ್. ನಾಗೇಂದ್ರರಾಯರ 'ಭೂಕೈಲಾಸ' (1958), ಕು.ರಾ. ಸೀತಾರಾಮ ಶಾಸ್ತ್ರಿಗಳ 'ಅಣ್ಣತಂಗಿ' (1958), ಕೇಂದ್ರ ಸರ್ಕಾರದ ಅರ್ಹತಾ ರಾಷ್ಟ್ರೀಯ ಪ್ರಶಸ್ತಿ ಪಡೆದ ಪಂತುಲು ಅವರ 'ಸ್ಕೂಲ್ ಮಾಸ್ಟರ್'(1959), ಇವರು ದ್ವಿಪಾತ್ರದಲ್ಲಿ ಅಭಿನಯಿಸಿರುವ ಕೆ.ಎಸ್.ಎಲ್.ಸ್ವಾಮಿ ಅವರ 'ಲಕ್ಷ್ಮಿ ಸರಸ್ವತಿ' (1970), ಮೂರು ಕಥೆಗಳ ವಿಭಿನ್ನ ಪ್ರಯೋಗದ ಪುಟ್ಟಣ್ಣನವರ 'ಕಥಾಸಂಗಮ' (1976) ಮುಂತಾದ ಚಿತ್ರಗಳು ಸರೋಜಾದೇವಿಯ ಪ್ರಬುದ್ಧ ಅಭಿನಯದ ಪ್ರಮುಖ ಚಿತ್ರಗಳಾಗಿ ಹೆಸರಿಸಬಹುದು. ಅದರಲ್ಲೂ 'ಲಕ್ಷ್ಮಿ ಸರಸ್ವತಿ' ಚಿತ್ರದಲ್ಲಿ ದ್ವಿಪಾತ್ರದಲ್ಲಿ ನಟಿಸಿದ್ದ ಇವರು ನಟನೆಯಲ್ಲಿ ವಿಸ್ಮಯಗೊಳಿಸಿದ್ದರು. ಅಂದಿನ ದಿನಗಳಲ್ಲಿ ದ್ವಿಪಾತ್ರದಲ್ಲಿ ನಟಿಸಿದ ನಾಯಕಿ ನಟಿಯರ ಪೈಕಿ ಪ್ರಾಯಶಃ ಇವರೇ ಮೊದಲಿಗರಿರಬಹುದು. ಸರೋಜಾದೇವಿಯ ಅಂದಿನ ಸ್ಟಾರ್ ವ್ಯಾಲ್ಯೂಗೆ ಇದಕ್ಕಿಂತ ಸಾಕ್ಷಿ ಬೇಕೆ? ಇಂದಿಗೂ ಸಹ ಅಭಿನಯದ ಹಾದಿಯಲ್ಲಿ ಆಯಾಸವಿಲ್ಲದೆ ಸಾಗುತ್ತಿರುವ ಸರೋಜಾದೇವಿ ಇವತ್ತಿನ ಯುವ ಪೀಳಿಗೆಯವರ ನಿರ್ದೇಶನದಲ್ಲಿ ಅನುರಾಗ ಸಂಗಮ, ಅಗ್ನಿ ಐ.ಪಿ.ಎಸ್, ತಿಮ್ಮ (2007), ನಟಸಾರ್ವಭೌಮ (2019) ಮುಂತಾದ ಚಿತ್ರಗಳಲ್ಲಿ ನಟಿಸಿ ತಮ್ಮೊಳಗಿನ ಕಲಾದೇವಿಗಿನ್ನೂ ಮುಪ್ಪಾಗಿಲ್ಲವೆಂಬುದನ್ನು ತೋರಿಸಿದ್ದಾರೆ. ಅಂತೆಯೇ ತಮಗೆ ಸೂಕ್ತವಾದ ಪಾತ್ರಗಳು ಸಿಕ್ಕರೆ ಈಗಲೂ ತಾವು ಅಭಿನಯಿಸಲು ಸಿದ್ಧವೆನ್ನುವ ಇವರ ಮನದಿಂಗಿತ ನಿಜಕ್ಕೂ ಅಭಿಮಾನಪಡುವಂತಾದ್ದು!

1967ರಲ್ಲಿ ಸರೋಜಾದೇವಿಯವರು ಶ್ರೀಹರ್ಷ ಅವರೊಡನೆ ವೈವಾಹಿಕ ಜೀವನಕ್ಕೆ ಕಾಲಿರಿಸಿದರೂ ಅಭಿನಯಕ್ಕೆ ವಿದಾಯ ಹೇಳದೆ ಮುಂದುವರಿಸಿದರು. ಸುಮಧುರ ದಾಂಪತ್ಯ ಜೀವನದಲ್ಲಿ ಮೂರು ಮಕ್ಕಳ ತಾಯಿಯಾದರೂ ಕೆಲವು ವರ್ಷಗಳ ನಂತರ ಹಿರಿಮಗಳು ಭುವನೇಶ್ವರಿಯನ್ನು ಇವರಿಂದ ವಿಧಿ ಕಿತ್ತುಕೊಂಡಿತ್ತು. ಆ ದುಃಖದಲ್ಲಿ ಮಗಳ ಸ್ಮರಣಾರ್ಥ ಇವರು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ತಮ್ಮ ಹೆಸರಿನಲ್ಲಿ 'ಸರೋಜಾದೇವಿ ಸಾಹಿತ್ಯ ಪ್ರಶಸ್ತಿ' ಯನ್ನು ಸ್ಥಾಪಿಸಿದ್ದು, ಈಗಲೂ ಪ್ರತಿ ವರ್ಷ ಓರ್ವ ಪ್ರತಿಭಾವಂತ ಕನ್ನಡ ಲೇಖಕಿಗೆ ಈ ಪ್ರಶಸ್ತಿಯನ್ನು ನೀಡುತ್ತಾ ಬರುತ್ತಿದ್ದಾರೆ.

ರಾಜ್ಯ ಸರ್ಕಾರದ ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮದ ಅಧ್ಯಕ್ಷೆಯಾಗಿ, ಕಂಠೀರವ ಸ್ಟುಡಿಯೋದ ಅಧ್ಯಕ್ಷೆಯಾಗಿ, ರಾಜ್ಯ ಚಲನ ಚಿತ್ರ ಪ್ರಶಸ್ತಿಯ ಸಲಹಾ ಸಮಿತಿಯ ಅಧ್ಯಕ್ಷೆಯಾಗಿ ಉತ್ತಮ ಕೆಲಸ ಮಾಡಿರುವುದೇ ಅಲ್ಲದೆ, ಕೇಂದ್ರ ಸರ್ಕಾರದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷೆಯಾಗಿಯೂ ಜವಾಬ್ದಾರಿ ಮೆರೆದಿದ್ದಾರೆ ಮತ್ತು ಚಲನಚಿತ್ರ ಕಲಾವಿದರ ಕ್ಷೇಮಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷೆಯಾಗಿ, ಚಲನಚಿತ್ರ ಕಲಾವಿದರ ಸಂಘದ ಉಪಾಧ್ಯಕ್ಷೆಯಾಗಿ, ಪ್ರತಿಷ್ಠಿತ ಭಾರತೀಯ ಚಲನಚಿತ್ರಗಳ ಪನೋರಮಾ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದಾರೆ. ಕೇಂದ್ರ ಮತ್ತು ರಾಜ್ಯ ಚಲನಚಿತ್ರ ಸೆನ್ಸಾರ್ ಮಂಡಳಿಗಳೆರಡರಲ್ಲೂ ಸದಸ್ಯರಾಗಿ ಇವರು ಕಾರ್ಯನಿರ್ವಹಿಸಿದ್ದು ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ನಿಗಮದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಕನ್ನಡ ಚಿತ್ರೋದ್ಯಮದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಮಹಾದೈವ ಭಕ್ತೆಯಾದ ಇವರು ತಿರುಮಲೆ–ತಿರುಪತಿ ದೇವಸ್ಥಾನದ ಟ್ರಸ್ಟಿಯೂ ಆಗಿ ಕಾರ್ಯನಿರ್ವಹಿಸಿದ್ದಾರೆ.

ಸರೋಜಾದೇವಿಯವರ ಕಲಾಸೇವೆಗೆ ಭಾರತ ಸರ್ಕಾರದಿಂದ 1979ರಲ್ಲಿ 'ಪದ್ಮಶ್ರೀ ಪ್ರಶಸ್ತಿ', 1991 ರಲ್ಲಿ 'ಪದ್ಮಭೂಷಣ ಪ್ರಶಸ್ತಿ', 1988 ರಲ್ಲಿ ಕರ್ನಾಟಕ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ', ಎಸ್. ನಿಜಲಿಂಗಪ್ಪ ಮುಖ್ಯ ಮಂತ್ರಿಗಳಾಗಿದ್ದಾಗ 'ಅಭಿನವ ಸರಸ್ವತಿ ರಾಜ್ಯ ಪ್ರಶಸ್ತಿ', 1999 ರಲ್ಲಿ 'ಸಾವಿತ್ರಮ್ಮ ದೇಜಗೌ ರಾಜ್ಯ ಪ್ರಶಸ್ತಿ', 2007 ರಲ್ಲಿ ಬೆಂಗಳೂರು ವಿಶ್ವ ವಿದ್ಯಾಲಯದ ಗೌರವ 'ಡಾಕ್ಟರೇಟ್ ಪದವಿ', ಆಂಧ್ರ ಸರ್ಕಾರದ 'ಎನ್.ಟಿ.ಆರ್. ರಾಜ್ಯ ಪ್ರಶಸ್ತಿ', 'ಫಿಲಂಫೇರ್ ಪ್ರಶಸ್ತಿ' ಸೇರಿದಂತೆ ನೂರಾರು ಪ್ರಶಸ್ತಿ–ಪುರಸ್ಕಾರಗಳು ಸಂದಿವೆ. ಹಾಗೆಯೇ 60ನೇ ಸ್ವಾತಂತ್ರ್ಯೋತ್ಸವದ ದ್ಯೋತಕವಾಗಿ ಭಾರತ ಸರ್ಕಾರ ಕೂಡ ಇವರಿಗೆ ಪ್ರತಿಷ್ಠಿತ 'ಜೀವಮಾನ ಸಾಧನೆ ರಾಷ್ಟ್ರೀಯ ಪ್ರಶಸ್ತಿ' ನೀಡಿ ಗೌರವಿಸಿದೆ. ಇವೆಲ್ಲಕ್ಕೂ ಬಂಗಾರದ ಜೋಡಿ ಕಳಶವಿಟ್ಟಂತೆ ಬದುಕಿದ್ದಾಗಲೇ ದಂತ ಕಥೆಗಳಂತಿದ್ದ ಕನ್ನಡ ಚಿತ್ರರಂಗದ ಮೇರುನಟ ಡಾ. ರಾಜ್‌ಕುಮಾರ್ ಮತ್ತು ತೆಲುಗಿನ ಮಹಾನ್ ನಟ ಡಾ.ಎನ್.ಟಿ. ರಾಮರಾವ್ ಹೆಸರುಗಳನ್ನು ಹೊತ್ತ 2009ನೇ ಸಾಲಿನ ಕರ್ನಾಟಕ ಸರ್ಕಾರದ 'ಡಾ.ರಾಜ್‌ಕುಮಾರ್ ರಾಜ್ಯ ಪ್ರಶಸ್ತಿ' ಮತ್ತು ಆಂಧ್ರ ಸರ್ಕಾರದ 'ಡಾ.ಎನ್.ಟಿ. ರಾಮರಾವ್ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ' ಗಳಿಗೂ ಬಿ.ಸರೋಜಾದೇವಿ ಭಾಜನರಾಗಿದ್ದಾರೆ.

# ಸೂಕ್ತವಲ್ಲದ ಸ್ಥಳದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣ ಪ್ರಸ್ತಾಪ

**"ಒಂದೂರಲ್ಲಿ ಒಬ್ಬ ಸಾಹುಕಾರನಿದ್ದ. ಆತ ಜನರಿಗೆ ನೀರೊದಗಿಸಲು ಕೆರೆಯೊಂದನ್ನು ಕಟ್ಟಿಸಿದ. ಬಳಿಕ ಅದರಲ್ಲಿ ಮೊಸಳೆ ಬಿಟ್ಟು ಬಿಟ್ಟ! ಇನ್ನೊಂದು ಗ್ರಾಮದಲ್ಲಿ ದಾನಿಯೂ, ದೈವ ಭಕ್ತನೂ ಆದ ಒಬ್ಬನಿದ್ದ. ಆತ ಹಬ್ಬದ ದಿನ ಪ್ರಸಾದಕ್ಕೆ ಪಾಯಸ ಮಾಡಿ, ನಂತರ ಅದರೊಳಗೆ ತನ್ನ ಚಪ್ಪಲಿ ಹಾಕಿದ!! ಮೈಸೂರಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣ ಮಾಡುವ ಸರ್ಕಾರದ ನಿರ್ಧಾರವೇನೋ ಒಳ್ಳೆಯದು. ಆದರೆ ಅದನ್ನು ಸ್ಥಾಪಿಸಲು ಆಯ್ಕೆ ಮಾಡಿಕೊಂಡಿರುವ ಸ್ಥಳ ಮಾತ್ರ ಸೂಕ್ತವೂ ಸಮಂಜಸವೂ ಆದುದ್ದಲ್ಲ. ಒಂದು ವೇಳೆ ಉದ್ದೇಶಿತ ಸ್ಥಳದಲ್ಲೇ ಬಸ್ ನಿಲ್ದಾಣ ನಿರ್ಮಾಣವಾದರೆ ಅದು ಮೇಲಿನ ಎರಡು ಪ್ರಸಂಗಗಳಂತೆ ಅನರ್ಥವಾಗಬಹುದು. ಸಾರ್ವಜನಿಕರ ಒಕ್ಕೊರಲ ಅಭಿಪ್ರಾಯವೂ ಇದೇ ಆಗಿದೆ. –ಕೆಬಿಜಿ**



ಡಾ.ಕೆ.ಜಾವೇದ್ ನಯೀಮ್, ಎಂಡಿ

ಮೈಸೂರಿನ ಬನ್ನಿಮಂಟಪದ 16 ಎಕರೆ ಪ್ರದೇಶದಲ್ಲಿ ಅಂದಾಜು 120 ಕೋಟಿ ರೂ. ವೆಚ್ಚದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದ ಬಗ್ಗೆ ಕಳೆದ ಎರಡು ದಿನಗಳ ಹಿಂದೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್'ನಲ್ಲಿ ಓದಿದೆ.

ಹೌದು, ನಮ್ಮ ಸರ್ಕಾರಕ್ಕೆ 120 ಕೋಟಿ ರೂ. ಕಡಲೆಕಾಯಿಯಂತೆ ಕಾಣಬಹುದು. ಆದರೆ ಕೆಎಸ್‌ಆರ್‌ಟಿಸಿ ಸಂಸ್ಥೆಯ ಆರ್ಥಿಕ ಸ್ಥಿತಿಗತಿ ಇದಕ್ಕೆ ತದ್ವಿರುದ್ಧವಾಗಿದೆ. 2024ರ ಡಿ.31ರ ವೇಳೆಗೆ ಕೆಎಸ್‌ಆರ್‌ಟಿಸಿ ನಾಲ್ಕು ವಿಭಾಗಗಳು ಸೇರಿದಂತೆ ಒಟ್ಟಾರೆ 6 ಸಾವಿರ ಕೋಟಿ ಸಾಲದಲ್ಲಿವೆ ಎಂಬುದಿಲ್ಲಿ ಗಮನಾರ್ಹ. ಕೆಎಸ್‌ಆರ್‌ಟಿಸಿ ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಡೀಸೆಲ್ ಬಿಲ್‌ಗಳ ಬಾಕಿ ಪಾವತಿಸಲು ವಿವಿಧ ಹಣಕಾಸು ಸಂಸ್ಥೆಗಳಿಂದ 2 ಸಾವಿರ ಕೋಟಿ ಸಾಲ ಪಡೆಯಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಈ ದುಸ್ಥಿತಿಗೆ ಕಾರಣ ಏನೆಂಬುದನ್ನು ಯಾರೊಬ್ಬರೂ ಊಹಿಸಿಕೊಳ್ಳಬಹುದು, ಹಾಗಾಗಿ ನಾನಿಲ್ಲಿ ಅದನ್ನೂ ವಿವರಿಸಬೇಕಾದ್ದಿಲ್ಲ. 16 ಎಕರೆ ಭೂಮಿಯು ಕೆಎಸ್‌ಆರ್‌ಟಿಸಿಗೆ ಸುಲಭವಾಗಿ ಲಭ್ಯವಿರುವ ಹಾಗೂ ಬಳಕೆಯಾಗದ ತುಂಡು ಭೂಮಿಯಂತೆ ಕಾಣಿಸಬಹುದು. ಆದರೆ ಇದು ಭಾರಿ ಬೆಲೆಬಾಳುವ ಭೂಮಿಯಾಗಿದ್ದು, ಕೆಎಸ್‌ಆರ್‌ಟಿಸಿ ಬಸ್ ಡಿಪೋಗಳು ಸಹ ಇಲ್ಲಿವೆ. ಆದರೆ ಕೇವಲ ಡಿಪೋಗಳು ಇರುವುದು ಹಾಗೂ ಇಲ್ಲಿ ಬಸ್ ನಿಲುಗಡೆ ಮಾಡಿದಷ್ಟು ಬಸ್ ನಿಲ್ದಾಣದ ನಿರ್ವಹಣೆ ಎಂಬುದು ಸುಲಭವಲ್ಲ. ಇದು ವರ್ಷಪೂರ್ತಿ ಪ್ರತಿದಿನ ಸಾವಿರಾರು ಪ್ರಯಾಣಿಕರು ಪ್ರಯಾಣಿಸಲು ಸೇವೆ ಒದಗಿಸಬೇಕಾಗುತ್ತದೆ.

ಬನ್ನಿಮಂಟಪ ಪ್ರದೇಶವು ವಿಶ್ವವಿಖ್ಯಾತ ದಸರಾ ಮಹೋತ್ಸವದ ಪಂಜಿನ ಕವಾಯತು ನಡೆಯುವ ಸ್ಥಳವಾಗಿದೆ. ಜೊತೆಗೆ ಇಲ್ಲಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯು ವಿಜಯದಶಮಿ ಮೆರವಣಿಗೆ ನಡೆಯುವ ರಾಜಮಾರ್ಗವಾಗಿದೆ. ಹೀಗಿರುವಾಗ ಈ ಉದ್ದೇಶಿತ ಬಸ್ ನಿಲ್ದಾಣದ ಪರಿಕಲ್ಪನೆ ಯಾರ ಮೂರ್ಖತನದ ಪರಮಾವಧಿ ಎಂದು ನನಗೆ ಅಚ್ಚರಿ ಉಂಟಾಯಿತು.

ದಸರಾದ ಎರಡು ಪ್ರಮುಖ ಕಾರ್ಯಕ್ರಮಗಳು ನಡೆಯುವ ಮಧ್ಯೆ ಈ ಉದ್ದೇಶಿತ ಬಸ್ ನಿಲ್ದಾಣ ಕಾರ್ಯನಿರ್ವಹಿಸುವುದು ಹೇಗೆ ತಾನೆ ಸಾಧ್ಯ? ಯಾರಾದರೂ ಈ ಬಗ್ಗೆ ಸ್ವಲ್ಪವಾದರೂ ಯೋಚಿಸಿದ್ದಾರೆಯೇ? ದಸರಾ ಗಜಪಡೆಯ ತಾಲೀಮು ನಡೆಯುವ ತಿಂಗಳು ಕಾಲ ಬಸ್ ನಿಲ್ದಾಣವನ್ನು ಸಂಪೂರ್ಣವಾಗಿ ಮುಚ್ಚುತ್ತಾರೆಯೇ? ಈ ಸಂದರ್ಭದಲ್ಲಿ ಏನು ಮಾಡಬೇಕೆಂದು ಅವರು ಯೋಚಿಸಿದ್ದಾರೆಯೇ? ಬಸ್ ನಿಲ್ದಾಣವನ್ನು ಈ ವೇಳೆ ಎಲ್ಲಾ ಸೌಕರ್ಯಗಳೊಂದಿಗೆ ತಾತ್ಕಾಲಿಕವಾಗಿ ಯಾವ ಸ್ಥಳಕ್ಕೆ ಸ್ಥಳಾಂತರಿಸುತ್ತಾರೆ? ದಸರಾ ಉತ್ಸವ ಮತ್ತು ಉದ್ದೇಶಿತ ಬಸ್ ನಿಲ್ದಾಣದ ನಡುವೆ ಈ ರೀತಿಯಲ್ಲಿ ಸಂದಿಗ್ಧ ಪರಿಸ್ಥಿತಿ ಉಂಟಾಗದಂತೆ ದಸರಾವನ್ನೇ ಬೇರೆ ಸ್ಥಳಕ್ಕೆ ಸ್ಥಳಾಂತರಿಸುವ ಬೃಹತ್ ಹಾಗೂ ಭವ್ಯವಾದ ಯೋಜನೆ ಏನಾದರೂ ಇಂತಹವರ ತಲೆಯಲ್ಲಿ ಇದೆಯೇ? ಬನ್ನಿಮಂಟಪದ ಮೈದಾನವು ಪರಂಪರೆ ಹೊಂದಿದ್ದು, ಹಾಗೆಂದು ಅಧಿಕೃತ ಅಧಿಸೂಚನೆ ಇಲ್ಲವಾದರೂ ಆ ಸ್ಥಾನಮಾನ ಹೊಂದಲು ಅದು ಅರ್ಹವಲ್ಲವೇ? ಅದು ಈಗಿರುವಂತೆ ಸಂರಕ್ಷಿಸಲು ಅರ್ಹವಾಗಿಲ್ಲವೇ? ನನ್ನ ಈ ಎಲ್ಲಾ ಸಾಲುಗಳು ಪ್ರಶ್ನಾರ್ಥಕ ಚಿಹ್ನೆಗಳೊಂದಿಗೆ ಕೊನೆಗೊಳ್ಳುತ್ತಿದ್ದು, ನನ್ನ ಎಲ್ಲಾ ಮೈಸೂರಿಗರ ಪರವಾಗಿ ಈ ಪ್ರಶ್ನೆಗಳನ್ನು ಮುಂದಿಡುತ್ತಿದ್ದೇನೆ. ಕಾಮಗಾರಿಗಾಗಿ ಬುಲ್ಡೋಜರ್‌ಗಳನ್ನು ಇಳಿಸುವ ಮೊದಲು ನಮ್ಮ ತೃಪ್ತಿಗಾಗಿ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಪಡೆಯಬಹುದೇ?

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com*

ಮೈಸೂರು ಮಿತ್ರ
ಮಂಗಳವಾರ 7 ಜನವರಿ 2025

## ಬಂದ್‌ಗೆ ದಲಿತ ಪ್ಯಾಂಥರ್ಸ್ ಬೆಂಬಲ



'ಮೈಸೂರು ಬಂದ್'ಗೆ ಕರ್ನಾಟಕ ದಲಿತ ಪ್ಯಾಂಥರ್ಸ್ ಬೆಂಬಲವಿದೆ ಎಂದು ಸಂಘದ ಅಧ್ಯಕ್ಷ ಯೋಗನರಸಿಂಹ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೈಸೂರು, ಜ.6 (ಜಿಎ)– ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಅಮಿತ್ ಶಾ ಲಘುವಾಗಿ ಹೇಳಿಕೆ ನೀಡಿರುವುದನ್ನು ಖಂಡಿಸಿ, ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿ ಕರೆ ನೀಡಿರುವ 'ಮೈಸೂರು ಬಂದ್'ಗೆ ಕರ್ನಾಟಕ ದಲಿತ ಪ್ಯಾಂಥರ್ಸ್ ಬೆಂಬಲವಿದೆ ಎಂದು ಸಂಘದ ಅಧ್ಯಕ್ಷ ಯೋಗನರಸಿಂಹ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಶ್ವಮಾನ್ಯರ ವಿರುದ್ಧ ಮಾತನಾಡಿರುವುದು ಖಂಡನೀಯ. ಅಧಿಕಾರ ಮದದಿಂದ ಈ ರೀತಿ ವರ್ತಿಸುತ್ತಿದ್ದಾರೆ. ಅಮಿತ್ ಶಾ ರಾಜೀನಾಮೆ ನೀಡಬೇಕು ಅವರ ಗಡಿಪಾರಿಗೆ ಆಗ್ರಹಿಸಿ ದೇಶದಲ್ಲಿ ಪ್ರಗತಿಪರ ಚಿಂತಕರು, ಅಂಬೇಡ್ಕರ್ ಅನುಯಾಯಿಗಳು ಹೋರಾಟ ಮಾಡುತ್ತಿದ್ದು, ಅದರ ಮುಂದಿನ ಹಂತವಾಗಿ ಮೈಸೂರು ಬಂದ್‌ಗೆ ಗ್ರಾಮಾಂತರ ಸಂಘಟನೆಗಳು, ಕಟ್ಟಡ ಕಾರ್ಮಿಕರು, ರಸ್ತೆಬದಿ ವ್ಯಾಪಾರಿಗಳು ಬಂದ್‌ಗೆ ಬೆಂಬಲ ನೀಡುವ ಮೂಲಕ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಚಂದ್ರಶೇಖರ್, ಮಂಜುನಾಥ್, ವೀರೇಂದ್ರ, ಕಿರಣ್‌ಕುಮಾರ್ ಉಪಸ್ಥಿತರಿದ್ದರು.

# ಮೈಸೂರು ಬಂದ್ ಬೆಂಬಲಿಸಲು ವಿವಿಧ ಸಂಘಟನೆಗಳ ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿದರು.

ಮೈಸೂರು,ಜ.6(ಜಿಎ)–ಡಾ.ಬಿ.ಆರ್. ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿ ಕರೆ ನೀಡಿರುವ ಮೈಸೂರು ಬಂದ್‌ಗೆ ಬೆಂಬಲ ನೀಡಬೇಕೆಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಅಹಿಂದ ಸಂಘಟನೆ, ವಿವಿಧ ಸಂಘಟನೆ ಮುಖಂಡರು ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿ, ಮೈಸೂರು ಬಂದ್‌ಗೆ ಈಗಾಗಲೇ ಆಟೋ ಚಾಲಕರ ಸಂಘ, ಹೋಟೆಲ್ ಮಾಲೀಕರು, ಕಾರ್ಮಿಕ ಸಂಘಟನೆಗಳು, ಖಾಸಗಿ ಬಸ್ ಮಾಲೀಕರು, ಸಂಘ, ಟೆಂಪೋ ಮಾಲೀಕರ ಸಂಘ, ರೈತ ಸಂಘಟನೆಗಳು, ಮುಸ್ಲಿಂ ಸಂಘಟನೆ ಹಾಗೂ ಗುಜರಿ ವ್ಯಾಪಾರಿಗಳು ಸೇರಿದಂತೆ ಬಹುತೇಕ ಸಂಸ್ಥೆಗಳು ಬೆಂಬಲ ನೀಡಿವೆ ಎಂದರು.

ಸಂವಿಧಾನ ರಚಿಸಿದ ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಲಘುವಾಗಿ ಹೇಳಿಕೆ ನೀಡಿರುವುದು ಖಂಡನೀಯ. ದೇಶದ ಪ್ರಧಾನಿ ಮೋದಿ ಅವರಿಗೆ ಸಂವಿಧಾನದ ಮೇಲೆ ಗೌರವವಿದ್ದಿದ್ದರೆ, ಸಂಪುಟದಿಂದ ಅಮಿತ್ ಶಾರನ್ನು ವಜಾಗೊಳಿಸಬೇಕಿತ್ತು. ಆದರೆ, ರಾಜ್ಯ, ರಾಷ್ಟ್ರದ ಮಟ್ಟದಲ್ಲಿ ಇಷ್ಟು ಹೋರಾಟಗಳು ನಡೆಯುತ್ತಿದ್ದರು. ಸುಮ್ಮನೆ ಇರುವುದಕ್ಕೆ ಮತದಾರರು ಮುಂದಿನ ದಿನಗಳಲ್ಲಿ ಪಾಠ ಕಲಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಂದ್ ಯಶಸ್ಸಿಗಾಗಿ ಮೈಸೂರಿನ ಎಲ್ಲಾ ದಿಕ್ಕಿನಲ್ಲಿಯೂ ಈಗಾಗಲೇ ಸಿದ್ಧತೆ ಮಾಡಿಕೊಂಡಿದ್ದು, ಅದರಂತೆ 8 ತಂಡಗಳಾಗಿ ಎಲ್ಲಾ ದಿಕ್ಕಿನಲ್ಲಿ ಪ್ರತಿಭಟನೆ ಮಾಡುತ್ತೇವೆ. ಬೆಳಗ್ಗೆ 6 ಗಂಟೆಗೆ ಮೈಸೂರಿನ ಗ್ರಾಮಾಂತರ (ಸಬರ್ಬ್) ಬಸ್ ನಿಲ್ದಾಣದಲ್ಲಿ ಬಸ್ ತಡೆದು ಈ ವೇಳೆ ಅಮಿತ್ ಶಾ ಪ್ರತಿಕೃತಿ ದಹನ ಮಾಡುತ್ತೇವೆ. ನಂತರ ಮತ್ತೊಂದು ತಂಡ ನಗರ ಬಸ್ ನಿಲ್ದಾಣದಲ್ಲಿ ಬಸ್ ತಡೆಯುತ್ತೇವೆ ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಕಳೆದ 4 ದಿನಗಳ ಹಿಂದೆ ನೀಡಿದ ಬಂದ್ ಕರೆಗೆ ಈಗಾಗಲೇ ಉತ್ತಮ ಪ್ರತಿಕ್ರಿಯೆ ಬಂದಿದ್ದು, ಬಹುತೇಕ ವ್ಯಾಪಾರಿಗಳು ಸ್ವಯಂಪ್ರೇರಿತವಾಗಿ ಬಂದ್ ಮಾಡುತ್ತೇವೆ ಎಂದು ಬೆಂಬಲ ನೀಡಿದ್ದಾರೆ. ಬಂಡಿಪಾಳ್ಯ ಎಪಿಎಂಸಿ ಹಾಗೂ ಸಂತೆಪೇಟೆ ವರ್ತಕರು ಬಂದ್‌ಗೆ ಬೆಂಬಲ ನೀಡುವುದಾಗಿ ತಿಳಿಸಿದ್ದಾರೆ. ಸ್ವಯಂಪ್ರೇರಿತರಾಗಿ ಬಂದ್‌ಗೆ ಬೆಂಬಲ ನೀಡುತ್ತಿರುವ ಹಿನ್ನೆಲೆಯಲ್ಲಿ ಯಾರಿಗೂ ಒತ್ತಡ ಹಾಕುವುದಿಲ್ಲ. ಬಂದ್ ಕುರಿತು ಪೊಲೀಸ್ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಜಿಲ್ಲಾಧಿಕಾರಿ ಅವರಿಗೆ ಶಾಲಾ–ಕಾಲೇಜು ರಜೆ ನೀಡುವಂತೆ ಮನವಿ ಸಲ್ಲಿಸಿದ್ದೇವೆ ಎಂದರು.

ಡಾ.ಅಂಬೇಡ್ಕರ್ ಬಗ್ಗೆ ಕೇಂದ್ರ ಸಚಿವ ಅಮಿತ್ ಶಾ ಲಘುವಾಗಿ ಹೇಳಿಕೆ ನೀಡಿರುವುದನ್ನು ಖಂಡಿಸಿ, ಈಗಾಗಲೇ ದೇಶಾದ್ಯಂತ ಹೋರಾಟ, ಪ್ರತಿಭಟನೆಗಳು ನಡೆಯುತ್ತಿದ್ದು, ಪ್ರಧಾನಿ ಮೋದಿ ಮಾತ್ರ ಅಮಿತ್ ಶಾ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಶೀಘ್ರ ಕ್ರಮ ತೆಗೆದುಕೊಳ್ಳದಿದ್ದರೆ ದೆಹಲಿ ಚಲೋ ಮಾಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ಪುಟ್ಟನಂಜಯ್ಯ, ಜಿಲ್ಲಾಧ್ಯಕ್ಷ ರಫತ್ ಖಾನ್, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ರವಿನಂದನ್, ಯೋಗೇಶ್ ಉಪ್ಪಾರ್, ದಲಿತ ಮಹಾಸಭಾದ ರಾಜೇಶ್, ರಾಜಶೇಖರ್ ಉಪಸ್ಥಿತರಿದ್ದರು.

## ಪೌರಕಾರ್ಮಿಕರ ಬೆಂಬಲ

ಮೈಸೂರು, ಜ.6(ಜಿಎ)–ಮೈಸೂರು ಬಂದ್‌ಗೆ ಮೈಸೂರು ನಗರಪಾಲಿಕೆ ಕಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾ ಸಂಘ ಬೆಂಬಲ ವ್ಯಕ್ತಪಡಿಸಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಉಸ್ತುವಾರಿ ಸಮಿತಿ ಅಧ್ಯಕ್ಷ ಎನ್.ಮಾರ ಈ ವಿಷಯ ತಿಳಿಸಿ, ಪೌರ ಕಾರ್ಮಿಕರು, ಒಳಚರಂಡಿ ಸಹಾಯಕರು, ಸ್ವಚ್ಛತಾ ವಾಹನ ಚಾಲಕರು ಈ ಬಂದ್‌ಗೆ ಪೂರ್ಣ ಬೆಂಬಲ ಸೂಚಿಸಿದ್ದು, ಬೆಳಗ್ಗೆ 9 ಗಂಟೆವರೆಗೆ ಮಾತ್ರ ಕೆಲಸ ಮಾಡಿ, ಅಂದು ಮಧ್ಯಾಹ್ನ ಪುರಭವನದಲ್ಲಿ ಬಂದ್ ಕುರಿತಂತೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆಂದರು. ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸ, ಕುಮಾರಸ್ವಾಮಿ, ಮಂಚಯ್ಯ, ಜಿ.ಮಂಜುನಾಥ್, ಪಿ.ಅಮಾಸೆ ಉಪಸ್ಥಿತರಿದ್ದರು.

## ಬಂದ್‌ಗೆ ಬೆಂಬಲ

ಮೈಸೂರು, ಜ.6(ಪಿಎಂ)– ಜನವರಿ 7ರ ಮೈಸೂರು ಬಂದ್‌ಗೆ ವಿನಾಯಕನಗರ (ಪಡುವಾರಹಳ್ಳಿ) ಡಾ.ಬಿ.ಆರ್.ಅಂಬೇಡ್ಕರ್ ಹಿತರಕ್ಷಣಾ ಸಮಿತಿ ಬೆಂಬಲ ವ್ಯಕ್ತಪಡಿಸಿದೆ.

ಡಾ.ಅಂಬೇಡ್ಕರ್ ಬಗ್ಗೆ ಅಮಿತ್ ಶಾ ಅವರು ಅವಹೇಳನಕಾರಿಯಾಗಿ ಮಾತನಾಡಿದ್ದು, ಇದು ಖಂಡನೀಯ. ಅಲ್ಲದೆ, ಅವರ ಈ ಹೇಳಿಕೆ ಸಂವಿಧಾನ ವಿರೋಧಿ ನಡವಳಿಕೆಯೂ ಆಗಿದೆ. ಅಮಿತ್ ಶಾ ಅವರ ಇಂತಹ ನಡವಳಿಕೆ ಖಂಡಿಸಿ ಜ.7ರಂದು ನಡೆಯುತ್ತಿರುವ ಬಂದ್‌ಗೆ ಸಮಸ್ತ ನಾಗರಿಕ ಬಂಧುಗಳು, ವಾಣಿಜ್ಯೋದ್ಯಮಿಗಳು, ಕಾರ್ಮಿಕ ಸಂಘಟನೆಗಳು, ಪ್ರಗತಿಪರರು, ಕಾಲೇಜು ವಿದ್ಯಾರ್ಥಿಗಳು ಸಂಪೂರ್ಣ ಬೆಂಬಲ ನೀಡಬೇಕೆಂದು ಹಿತರಕ್ಷಣಾ ಸಮಿತಿ ಅಧ್ಯಕ್ಷ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಶಂಕರ ನಾರಾಯಣ ಕೋರಿದ್ದಾರೆ.

## ವಿಧಾನಪರಿಷತ್‌ನ 4 ಸ್ಥಾನ ಭರ್ತಿಗೆ ಕಾಂಗ್ರೆಸ್‌ನಲ್ಲಿ ಅವಕಾಶ, ಮೂರು ಬಣದ ಹತ್ತಾರು ಆಕಾಂಕ್ಷಿಗಳು

ಬೆಂಗಳೂರು,ಜ.6–ಚಿಂತಕರ ಚಾವಡಿ ಎಂದು ಕರೆಯಲಾಗುವ ಮೇಲ್ಮನೆಗೆ (ವಿಧಾನಪರಿಷತ್) ನಾಲ್ಕು ಜನರನ್ನು ಆಯ್ಕೆ ಮಾಡುವ ಸಂಬಂಧ ಪ್ರಕ್ರಿಯೆಯನ್ನು ಸದ್ಯದಲ್ಲೇ ಆರಂಭಿಸುವ ಸಾಧ್ಯತೆಯನ್ನು ಅರಿತ ಕೈ ಮುಖಂಡರು, ಲಾಬಿ ಆರಂಭಿಸಿದ್ದಾರೆ. ಪ್ರಮುಖವಾಗಿ ಮೂರು ಬಣದಲ್ಲಿ (ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್) ಗುರುತಿಸಿಕೊಂಡಿರುವ ನಾಯಕರು ತಮ್ಮ ತಮ್ಮ ನಾಯಕರನ್ನು ಓಲೈಸುವ ಕೆಲಸವನ್ನು ಆರಂಭಿಸಿದ್ದಾರೆ. ಇದಲ್ಲದೇ, ಯಾವುದೇ ಬಣದಲ್ಲಿ ಗುರುತಿಸಿಕೊಳ್ಳದ 25ಕ್ಕೂ ಹೆಚ್ಚು ನಾಯಕರು ತಮ್ಮ ಪ್ರಯತ್ನವನ್ನು ಆರಂಭಿಸಿದ್ದಾರೆ.

ಯು.ಬಿ.ವೆಂಕಟೇಶ್, ಪ್ರಕಾಶ್ ರಾಥೋಡ್, ಕೆ.ಎ.ತಿಪ್ಪೇಸ್ವಾಮಿ ಸದಸ್ಯತ್ವ ಅವಧಿ ಜುಲೈ 27ಕ್ಕೆ ಮುಕ್ತಾಯವಾಗಲಿದೆ. ಅಲ್ಲದೆ, ಸಿ.ಪಿ.ಯೋಗೇಶ್ವರ್ ರಾಜೀನಾಮೆಯಿಂದ ತೆರವಾಗಿರುವ ಸ್ಥಾನ ಸೇರಿ ಒಟ್ಟು 4 ಸ್ಥಾನಗಳನ್ನು ಭರ್ತಿ ಮಾಡಬೇಕಿದೆ.

ಹನ್ನೊಂದು ಮಂದಿಯನ್ನು ನಾಮನಿರ್ದೇಶನ ಮಾಡುವ ಅವಕಾಶ ಕಾಂಗ್ರೆಸ್ ಪಾಲಿಗೆ ಒದಗಿ ಬಂದಿದ್ದು, ಅದರಲ್ಲಿ ನಾಲ್ವರನ್ನು ಈಗ ಆಯ್ಕೆ ಮಾಡಬಹುದು. ಇದರಲ್ಲಿ ಯಾರಿಗೆಲ್ಲಾ ಭರವಸೆಯನ್ನು ನೀಡಲಾಗಿದೆ, ಅಂತವರಿಗೆ ಆದ್ಯತೆಯನ್ನು ಕೊಡುವ ಸಾಧ್ಯತೆಯಿದೆ. ಜ.14 ಸಂಕ್ರಾಂತಿಯ ನಂತರ, ಸಿಎಂ ಮತ್ತು ಡಿಸಿಎಂ ಸಭೆ ಸೇರಿ, ಹೈಕಮಾಂಡಿಗೆ ಪಟ್ಟಿ ಕಳುಹಿಸಿ ಕೊಡುವ ಸಾಧ್ಯತೆಯಿದೆ. ತಮ್ಮ ತಮ್ಮ ಆಪ್ತರಿಗೆ ಅವಕಾಶ ಕೊಡಬೇಕು ಎನ್ನುವ ಒತ್ತಡದ ನಡುವೆ, ಪಕ್ಷಕ್ಕಾಗಿ ಇದುವರೆಗೆ ಯಾವುದೇ ಸ್ಥಾನವನ್ನು ಪಡೆಯದೇ ನಿಷ್ಠೆಯಿಂದ ಕೆಲಸ ಮಾಡಿದವರಿಗೆ ಅವಕಾಶ ನೀಡಬೇಕೆನ್ನುವ ಒತ್ತಡ ಹೆಚ್ಚುತ್ತಲೇ ಇದೆ. ಇದರ ಮಧ್ಯೆ, ಹಾಲಿಗಳು ಸದಸ್ಯ ಅವಧಿಯನ್ನು ಮುಂದುವರಿಸಲು ಒತ್ತಾಯವನ್ನು ಮಾಡುತ್ತಿದ್ದಾರೆ.

ಕೆಪಿಸಿಸಿ ಮೂಲಗಳ ಪ್ರಕಾರ ಇರುವ 4 ಸ್ಥಾನಕ್ಕೆ 35ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ ಎಂಬ ಮಾಹಿತಿಯಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳ ಕೋಟಾದಲ್ಲಿ ವಿಧಾನಪರಿಷತ್‌ಗೆ ಎಂಟ್ರಿ ಕೊಡಲು ಬಹಳಷ್ಟು ನಾಯಕರಿದ್ದಾರೆ. ಇದರ ಜೊತೆಗೆ, ಎಐಸಿಸಿ ಅಧ್ಯಕ್ಷರ ಆಪ್ತರೂ ಪರಿಷತ್ ರೇಸಿನಲ್ಲಿ ಇದ್ದಾರೆ ಎಂದು ಹೇಳಲಾಗುತ್ತಿದೆ. ಮೂಲಗಳ ಪ್ರಕಾರ, ರೇಸಿನಲ್ಲಿದ್ದಾರೆ ಎಂದು ಹೇಳಲಾಗುತ್ತಿರುವವರಲ್ಲಿ ಮಾಜಿ ಸದಸ್ಯ ಪ್ರಕಾಶ್ ರಾಥೋಡ್, ಮಾಜಿ ಸದಸ್ಯ ಯು.ಬಿ.ವೆಂಕಟೇಶ್, ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ಮಾಜಿ ಶಾಸಕ ಅಜ್ಜಂಪೀರ್ ಖಾದ್ರಿ, ಸಿ.ಎಸ್.ದ್ವಾರಕಾನಾಥ್, ರಘುನಂದನ್ ರಾಜಣ್ಣ, ಚಿತ್ರ ಕಲಾವಿದ ಸಾಧು ಕೋಕಿಲ, ಮಂಡ್ಯ ಲೋಕಸಭೆ ಪರಾಜಿತ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ರಾಜ್ಯಸಭಾ ಮಾಜಿ ಸದಸ್ಯ ಎಲ್.ಹನುಮಂತಯ್ಯ, ಸೋಮಣ್ಣ ಬೇವಿನಮರದ ಮತ್ತು ಜೆ.ಎಸ್.ಆಂಜನೇಯಲು.

## ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಅರ್ಥಪೂರ್ಣ ಆಚರಣೆ



ಡಿಸಿ ಕಚೇರಿಯಲ್ಲಿ 'ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ' ಆಚರಣೆ ಸಂಬಂಧ ಎಡಿಸಿ ಡಾ.ಪಿ.ಶಿವರಾಜು ಸಭೆ ನಡೆಸಿದರು.

ಮೈಸೂರು,ಜ.6– ಫೆ.3 ರಂದು ಬೆಳಗ್ಗೆ 11.30 ಗಂಟೆಗೆ ಕರ್ನಾಟಕದ ಕಿರು ರಂಗ ಮಂದಿರದಲ್ಲಿ 'ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ'ಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ ಶಿವರಾಜು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ 'ಶಿವಯೋಗಿ ಸಿದ್ಧರಾಮೇಶ್ವರ' ಜಯಂತಿಯ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಿವಯೋಗಿ ಸಿದ್ಧರಾಮೇಶ್ವರ ಅವರ ಎಲ್ಲಾ ಆದರ್ಶಗಳ ನಿಟ್ಟಿನಲ್ಲಿ ಹಾಗೂ ಮೈಸೂರು ಜಿಲ್ಲೆಯಲ್ಲಿ ಅವರದೇ ಆದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವುದರಿಂದ ಅಂತಹ ಮಹಾಶಯರ ಜಯಂತಿಯನ್ನು ಆಚರಣೆ ಮಾಡುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಈ ಸಂಬಂಧ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಿ, ಜಯಂತಿ ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಮಾತನಾಡಿ, ಕಾರ್ಯಕ್ರಮದಲ್ಲಿ ಕಲಾತಂಡಗಳಿಂದ ಗೀತ ಗಾಯನವನ್ನು ಏರ್ಪಡಿಸಲಾಗುವುದು. ಆಹ್ವಾನ ಪತ್ರಿಕೆಯ ಮುದ್ರಣ ಮಾಡಿ ಸರ್ಕಾರದ ಶಿಷ್ಟಾಚಾರದಂತೆ ಜನ ಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಈ ಸಂಬಂಧ ಸಮಿತಿಯವರು ಸಹಕರಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಕರ್ನಾಟಕ ಕಾವಲು ಪಡೆಯ ಅಧ್ಯಕ್ಷ ಮೋಹನ್‌ಕುಮಾರ್‌ಗೌಡ, ಮೈಸೂರಿನ ಚಳುವಳಿಗಾರ ಅರವಿಂದ್ ಶರ್ಮ ಸೇರಿದಂತೆ ಶಿವಯೋಗಿ ಸಿದ್ಧರಾಮೇಶ್ವರ ಸಮಿತಿ ಮುಖಂಡರು ಉಪಸ್ಥಿತರಿದ್ದರು.

## ಜ.12, ವಯೋಲಿನ್ ವೃಂದ ವಾದನ

ಮೈಸೂರು, ಜ.6– ಜನವರಿ 12ರ ಸಂಜೆ 6.30ಕ್ಕೆ ಕೇರ್ಗಳ್ಳಿಯ 'ನಿನಾದ' ಸಭಾಂಗಣ ಒಂದು ಅಪರೂಪದ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದೆ.

ಮೈಸೂರಿನ ಕೇರ್ಗಳ್ಳಿಯಲ್ಲಿರುವ ನಿನಾದ ಗೃಹ ಸಂಗೀತ ಸರಣಿಯ 16ನೇ ಕಾರ್ಯಕ್ರಮವಾಗಿ ಹಿಂದುಸ್ತಾನಿ ವಯೋಲಿನ್ ವೃಂದ ವಾದನ 'ಸ್ವರಸ್ವಪ್ನ'ವನ್ನು ಪುಣೆಯ ಸುಪ್ರಸಿದ್ಧ ವಯೋಲಿನ್ ವಾದಕಿ, ಗುರು ವಿ.ಸ್ವಪ್ನಾ ದಾತಾರ್ ಅವರ ಆಯ್ದ ವಿದ್ಯಾರ್ಥಿಗಳು ನಡೆಸಿಕೊಡಲಿದ್ದಾರೆ.

ಈ ದೇಶದ ಅಗ್ರಪಂಕ್ತಿಯ ವಯೋಲಿನ್ ವಾದಕರಲ್ಲಿ ಒಬ್ಬರಾಗಿರುವ ವಿ. ಸ್ವಪ್ನ ದಾತಾರ್ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪಂ.ವಸಂತರಾವ್ ಶಿವಲೇಕರ್ ಅವರ ಹಿರಿಯ ಶಿಷ್ಯರು. ಗಾಯಕಿ ಅಂಗ ಹಾಗೂ ತಂತ್ರಕಾರ್ ಎರಡೂ ಅಂಗಗಳ ಸಮ್ಮಿಲನದೊಂದಿಗೆ ಆಕರ್ಷಕವಾಗಿ ವಯೋಲಿನ್ ನುಡಿಸಬಲ್ಲ ಸ್ವಪ್ನಾ ದಾತಾರ್ ಅವರು ವಿಶೇಷವಾದ ಪ್ರತಿಭೆ, ಸಾಮರ್ಥ್ಯ ಮತ್ತು ದೂರದರ್ಶಿತ್ವವುಳ್ಳ ಕಲಾವಿದೆ.

ಕಾರ್ಯಕ್ರಮದಲ್ಲಿ ವಿ.ಸ್ವಪ್ನಾ ಅವರ ಶಿಷ್ಯರಾದ ಕು.ವೇದಾ ಪೋಲ್, ಕು.ಸಿದ್ಧಿ ದೇಶಪಾಂಡೆ, ಮಾ.ಶ್ರೇಯಸ್ ಅಭ್ಯಂಕರ್ ಅವರು ವಯೋಲಿನ್ ಮತ್ತು ಕು.ತನಿಶ್ಕಾ ಜೋಶಿ ಸೆಲ್ಲೊ ನುಡಿಸಲಿದ್ದಾರೆ. ಶುಭಂ ಶಹಾ ತಬಲಾದಲ್ಲಿ ಸಹಕರಿಸಲಿದ್ದಾರೆ.

## ಸಾವಿತ್ರಿಬಾಯಿ ಫುಲೆ ಜಯಂತಿ ಆಚರಣೆ



ಮೈಸೂರು ಅಶೋಕಪುರಂನ ಬೋಧಿಸತ್ವ ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ಒಕ್ಕೂಟದಿಂದ ಸಾವಿತ್ರಿಬಾಯಿ ಫುಲೆ ಜನ್ಮದಿನ ಆಚರಿಸಲಾಯಿತು. ಶಮಾ, ಕವಿತಾ, ಸಿದ್ದಸ್ವಾಮಿ, ಗಿರೀಶ್, ಚಂದ್ರಶೇಖರ್, ರಾಜು, ಮಹೇಶ್, ಪುಟ್ಟಣ್ಣ, ಪುಟ್ಟಮ್ಮಣ್ಣಿ, ವೃಕೋದರ, ಸಿದ್ದಸ್ವಾಮಿ, ನೇತ್ರಾ, ರೂಪಾ, ಸುವರ್ಣ, ತೇಜಾವತಿ, ಬಬಿತಾ ಮತ್ತಿತರರು ಉಪಸ್ಥಿತರಿದ್ದರು.

## ನೂತನ ದಿನದರ್ಶಿಕೆ ಬಿಡುಗಡೆ



ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘದ 2025ನೇ ದಿನದರ್ಶಿಕೆಯನ್ನು ಸೋಮವಾರ ಮೈಸೂರು ಮಹಾನಗರ ಪಾಲಿಕೆ ಕಚೇರಿ ಆವರಣದಲ್ಲಿ ಸಹಕಾರ ಸಂಘದ ಅಧ್ಯಕ್ಷ ಜವರೇಗೌಡ ಬಿಡುಗಡೆ ಮಾಡಿದರು. ಸಂಘದ ಉಪಾಧ್ಯಕ್ಷ ಸಿ.ರವಿಶಂಕರ್, ಖಜಾಂಚಿ ಎನ್.ಪುಟ್ಟಸ್ವಾಮಿ, ಸಂಘದ ನಿರ್ದೇಶಕರಾದ ಎಂ.ಬಸವಣ್ಣ, ಬಿ.ಭಾಸ್ಕರ್, ಡಿ.ಸುರೇಂದ್ರ ಕುಮಾರ್, ಎಸ್.ಮಂಜುಕುಮಾರ್, ಶಂಭು, ಪಿ.ಶೀಲಾ, ಎಸ್.ಮೈತ್ರಿ, ಮಹಾದೇವಸ್ವಾಮಿ, ಬಿ.ರಾಜು, ಕಾರ್ಯದರ್ಶಿ ಎನ್.ಶಿವಕುಮಾರ್ ಕಚೇರಿ ಸಿಬ್ಬಂದಿಗಳಾದ ಸಿದ್ದಪ್ಪಾಜಿ, ಮೋಹನ್‌ಕುಮಾರ್, ಸುರೇಶ್ ಉಪಸ್ಥಿತರಿದ್ದರು.

## ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮೈಸೂರು,ಜ.6–2024–25ನೇ ಸಾಲಿನಲ್ಲಿ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪಿಹೆಚ್.ಡಿ ಅಧ್ಯಯನ ಮಾಡುವ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ) ಹಾಗೂ 3(ಬಿ)ಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ನೀಡುವ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನಕ್ಕೆ ಜನವರಿ 15ರವರೆಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ https://bcwd.Karnataka.gov.in ನೋಡಬಹುದು ಹಾಗೂ ದೂ.ಸಂ.8050770004 ಅನ್ನು ಸಂಪರ್ಕಿಸಬಹುದು.

## ಜ.11ರಂದು ಮಾಜಿ ಸಿಎಂ ದಿವಂಗತ ಎಸ್.ಎಂ.ಕೃಷ್ಣರಿಗೆ ಶ್ರದ್ಧಾಂಜಲಿ ಸಭೆ



ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಜ.6– ಮೈಸೂರು ಮಹಾನಗರ, ಜಿಲ್ಲಾ ನಾಗರಿಕರ ಸಮಿತಿ ಹಾಗೂ ಮಂಡ್ಯ ಜಿಲ್ಲಾ ಬಳಗ ಮೈಸೂರು ವತಿಯಿಂದ ಜ.11ರಂದು ಶನಿವಾರ ಸಂಜೆ 4 ಗಂಟೆಗೆ ವಿಜಯನಗರದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜ್ ಸಾಹುಕಾರ್ ಎಸ್.ಚೆನ್ನಯ್ಯ ಸಭಾಂಗಣದಲ್ಲಿ ಇತ್ತೀಚೆಗೆ ಅಗಲಿದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಸಂತಾಪ ಸಭೆ ಆಯೋಜಿಸಿದೆ.

ಅದರ ಪೂರ್ವಭಾವಿ ಸಭೆಯನ್ನು ಟಿ.ಕೆ.ಲೇಔಟ್‌ನಲ್ಲಿರುವ ಮೈಸೂರು ಮಹಾನಗರ ಮತ್ತು ಜಿಲ್ಲಾ ನಾಗರಿಕ ಸಮಿತಿ ಕಚೇರಿಯಲ್ಲಿ ನಡೆಸಲಾಯಿತು. ಇದೇ ವೇಳೆ ದಿವಂಗತ ಮಾಜಿ ಪ್ರಧಾನಿ ಮನಮೋಹನ್‌ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರೊ. ಕಾಳಚೆನ್ನೇಗೌಡ, ಪ್ರೊ.ಚಂದ್ರಶೇಖರ್‌ಗೌಡ, ಮರಿತಿಬ್ಬೇಗೌಡ, ಲಯನ್ ದೇವೇಗೌಡ, ಹೇಮಾ ನಂದೀಶ್, ಕೆ.ವಿ.ಶ್ರೀಧರ್, ಕೆ.ವಿ.ಮಲ್ಲೇಶ್, ಒಕ್ಕಲಿಗರ ಸಂಘದ ನಿರ್ದೇಶಕರಾದ ಮಂಜೇಗೌಡ, ಸತೀಶ್ ಗೌಡ, ಜಯರಾಮ್ ಕೀಲಾರ ಹಲವು ಮುಖಂಡರು ಹಾಜರಿದ್ದರು.

## ಸಕ್ಕರೆಕಾಯಿಲೆ ಉಚಿತ ತಪಾಸಣಾ ಶಿಬಿರ

ಮೈಸೂರು, ಜ.6–ಸುಯೋಗ್ ಆಸ್ಪತ್ರೆಯ ವತಿಯಿಂದ ಜ.11ರವರೆಗೆ ಬೆಳಗ್ಗೆ 10ಗಂಟೆಯಿಂದ ಸಂಜೆ 6ಗಂಟೆವರೆಗೆ ಸಕ್ಕರೆಕಾಯಿಲೆ ತಜ್ಞರಾದ ಡಾ.ಅಭಿಷೇಕ್ ಟಿ.ಎಂ ಅವರ ನೇತೃತ್ವದಲ್ಲಿ ಉಚಿತ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ.

ಶಿಬಿರದಲ್ಲಿ ಪದೇ ಪದೆ ಮೂತ್ರವಿಸರ್ಜನೆ, ಅತಿಯಾದ ಬಾಯಾರಿಕೆ, ಹಸಿವಾಗುವಿಕೆ, ಸುಸ್ತಾಗುವಿಕೆ, ರಕ್ತದೊತ್ತಡ, ತಲೆಸುತ್ತು, ಕಣ್ಣು ಮಂಜಾಗುವಿಕೆ, ದೇಹದ ತೂಕ ಏರಿಕೆ, ಇಳಿಯುವಿಕೆ ಮುಂತಾದ ಲಕ್ಷಣಗಳಿರುವವರಿಗೆ ತಪಾಸಣೆ ಹಾಗೂ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗೆ 0821–2566966, 9986399862 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

## ಮಂದಸ್ಮಿತಾಗೆ ಪಿಹೆಚ್.ಡಿ ಪದವಿ



ಮೈಸೂರು, ಜ.6– ಮಂದಸ್ಮಿತ ಎನ್ ಅವರು ಡಾ. ಎ.ಎಸ್ ಗುರುದತ್ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ವಿವಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

# ಬುಡಕಟ್ಟು ಸಮುದಾಯಕ್ಕೆ ಸರ್ಕಾರಿ ಸವಲತ್ತು ಕಲ್ಪಿಸುವ ಅಧಿಕಾರಿಗಳಿಗೆ ತರಬೇತಿ

### ಹಾಡಿಗಳಲ್ಲಿ ವಾಸಿಸುವ ಜನರಿಗೆ ಸವಲತ್ತು ಸಮರ್ಪಕ ರೀತಿ ಪೂರೈಸಿ: ಪರಿಶಿಷ್ಟ ವರ್ಗಗಳ ಇಲಾಖೆ ನಿರ್ದೇಶಕ ಟಿ.ಯೋಗೀಶ್ ಸಲಹೆ



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗಾಗಿ ಆಯೋಜಿಸಿರುವ ಆಡಳಿತಾತ್ಮಕ ತರಬೇತಿ ಹಾಗೂ ಪುನರ್‌ಮನನ ಕಾರ್ಯಾಗಾರವನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಟಿ. ಯೋಗೀಶ್ ಉದ್ಘಾಟಿಸಿದರು.

ಮೈಸೂರು,ಜ.6(ಎಂಟಿವೈ)– ಹಾಡಿಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯ ಜನರಿಗೆ ಸರ್ಕಾರದ ಸವಲತ್ತುಗಳನ್ನು ತಲುಪಿಸುವ ಅಧಿಕಾರಿಗಳು ಪ್ರಾಮಾಣಿಕವಾಗಿ ಸೇವೆ ಸಲ್ಲಿಸಬೇಕು ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಟಿ.ಯೋಗೀಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗಾಗಿ ಆಯೋಜಿಸಿರುವ 5 ದಿನಗಳ ಆಡಳಿತಾತ್ಮಕ ತರಬೇತಿ ಹಾಗೂ ಪುನರ್‌ಮನನ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಧಿಕಾರಿಗಳು ದಕ್ಷತೆಯಿಂದ ಕಾರ್ಯನಿರ್ವಹಿಸಬೇಕಾದರೆ ಪುನರ್‌ಮನನದಂತಹ ಕಾರ್ಯಾಗಾರಗಳು ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ.

ಕಾರ್ಯಾಗಾರದಿಂದ ಅಧಿಕಾರಿಗಳು ವ್ಯಕ್ತಿತ್ವ ರೂಪಿಸಿಕೊಳ್ಳಲು ನೆರವಾಗುತ್ತದೆ. ಹಾಡಿಗಳಲ್ಲಿ ವಾಸಿಸುವ ಜನರಿಗೆ ನೆರವಾಗಬೇಕು. ಸರ್ಕಾರದ ಸುತ್ತೋಲೆಗಳನ್ನು ತಿಳಿದುಕೊಳ್ಳಬೇಕು. ನಂತರ ಹಾಡಿಗಳಿಗೆ ತೆರಳಿ ಅಲ್ಲಿನ ನಿವಾಸಿಗಳ ಬಳಿ ಬಿಪಿಎಲ್ ಕಾರ್ಡ್, ಆಯುಷ್ಮಾನ್ ಕಾರ್ಡ್ ಇರುವಿಕೆ ಬಗ್ಗೆ ಮಾಹಿತಿ ಪಡೆಯಬೇಕು. ಅಲ್ಲದೆ, ಮನೆ, ವಿದ್ಯುತ್ ಸಂಪರ್ಕ, ಶಿಕ್ಷಣ ಪಡೆಯುತ್ತಿರುವ ಮಕ್ಕಳೆಷ್ಟು, ಶಾಲೆ ಬಿಟ್ಟ ಮಕ್ಕಳ ಬಗ್ಗೆ ಮಾಹಿತಿ ಕಲೆ ಹಾಕಬೇಕು. ಆಶ್ರಮ ಶಾಲೆಗಳಲ್ಲಿ ಸಾಕ್ಷರತೆಯ ಪ್ರಮಾಣ ಎಷ್ಟಿದೆ ಎಂದು ತಿಳಿದುಕೊಂಡು ಆ ಸಮುದಾಯದ ಜನರಿಗೆ, ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಕೆ.ಆರ್. ರಾಜ್‌ಕುಮಾರ್ ಮಾತನಾಡಿ, ಯಾವುದೇ ಇಲಾಖೆಯಲ್ಲಿ ಅಧಿಕಾರಿಗಳಿಗೆ ತರಬೇತಿ ಇಲ್ಲದೇ, ಆಡಳಿತ ನಡೆಸಲು ಸಾಧ್ಯವಿಲ್ಲ. ಆದ್ದರಿಂದ 5 ದಿನಗಳ ಕಾಲ ತಾಲೂಕು ಮಟ್ಟದ ಅಧಿಕಾರಿಗಳಿಗೆ ಆಡಳಿತಾತ್ಮಕ ತರಬೇತಿ ನೀಡುತ್ತಿದ್ದೇವೆ. ಇಲಾಖೆ ಅಧಿಕಾರಿಗಳ ಮೇಲೆ ಸಮುದಾಯ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದು, ಹಾಡಿ ಜನರ ಅಭಿವೃದ್ಧಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡಲು ಎಲ್ಲರ ಸಹಕಾರ ಮುಖ್ಯವಾಗಿದೆ ಎಂದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಕಾಶ ಮಾತನಾಡಿ, ಅಧಿಕಾರಿಗಳಿಗೆ ಕಲಿಕೆ ನಿರಂತರವಾಗಿರಬೇಕು. ಎಸ್‌ಇಪಿ, ಟಿಎಸ್‌ಪಿ ಕಾಯಿದೆ ಬಗ್ಗೆ ತಿಳಿದುಕೊಳ್ಳಬೇಕು. ಅರಣ್ಯ ಇಲಾಖೆ ಕಾಯಿದೆ ಬಗ್ಗೆ ತಿಳುವಳಿಕೆ ಇರಬೇಕು. ಇಲಾಖೆಯ ಅಭಿವೃದ್ಧಿ ಮತ್ತು ಮುಂದಿನ ಯೋಜನೆಗಳನ್ನು ಸಿದ್ಧತೆ ಮಾಡಿಕೊಳ್ಳಬೇಕು. ಈ ಎಲ್ಲಾ ಸಮರ್ಪಕ ಮಾಹಿತಿ ಒದಗಿಸಿದಾಗ ಮಾತ್ರ ಅಭಿವೃದ್ಧಿ ಮಾಡಲು ಸಹಾಯವಾಗುತ್ತದೆ ಎಂದರು.

ಮೈಸೂರು ಜಿಲ್ಲಾ ವಾಲ್ಮೀಕಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಶಿವಕುಮಾರ್ ಮಾತನಾಡಿ, ಅಧಿಕಾರಿಗಳು ಜ್ಞಾನವನ್ನು ವೃದ್ಧಿಮಾಡಿಕೊಳ್ಳಲು ತರಬೇತಿ ಮುಖ್ಯ. ಇಲಾಖೆ ಬಗ್ಗೆ ಮಾಹಿತಿ ಇದ್ದರೆ ಧೈರ್ಯವಾಗಿ ಯಾರಿಗೆ ಬೇಕಾದರೂ ಉತ್ತರ ಕೊಡಬಹುದು. ನೀವು ಶ್ರಮಪಟ್ಟು ಕೆಲಸ ಮಾಡಿದರೆ ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ. ನಿಮ್ಮ ಹುದ್ದೆಗೆ ಮೊದಲು ನೀವು ಗೌರವಕೊಡಿ. ಮೊಬೈಲ್ ಬಿಟ್ಟು ಈ ತರಬೇತಿಯ ಸದುಪಯೋಗ ಪಡಿಸಿಕೊಳ್ಳಿರಿ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕ ಬಿ.ಎಸ್.ಪ್ರಭಾ ಅರಸ್, ಸಂಶೋಧನಾಧಿಕಾರಿ ಕೆ.ಶ್ರೀನಿವಾಸ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಎಂ.ಕೆ.ಮಲ್ಲೇಶ್, ಡಾ.ಮೋಹನ್, ಕೃಷ್ಣಮೂರ್ತಿ, ಅರುಣ್‌ಪ್ರಭು, ಜಿ.ಆರ್. ಮಹೇಶ, ಭವ್ಯ ಬಿ.ಆರ್, ಗುಣಧರ್, ಹೇಮಚಂದ್ರ, ಮಮತ, ದಾಕ್ಷಾಯಿಣಿ ಎಂ.ಆರ್., ಡಾ.ಕುಮಾರ್ ಪಾಲ್ಗೊಂಡಿದ್ದರು.

# ಸಾಧಕರಿಗೆ ಕುವೆಂಪು ಪ್ರಶಸ್ತಿ ಪ್ರದಾನ

## ರಮೇಶ ಬಂಡಿಸಿದ್ದೇಗೌಡ



ಶ್ರೀರಂಗಪಟ್ಟಣ, ಜ.6–ಕುವೆಂಪು ಅವರು ಬರೆದ ಕತೆ, ಕಾವ್ಯ, ನಾಟಕ, ಲೇಖನಗಳು ಎಲ್ಲ ಕಾಲಕ್ಕೂ ಅನ್ವಯವಾಗುತ್ತವೆ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಹೇಳಿದರು.

ಪಟ್ಟಣದ ಕುವೆಂಪು ವೃತ್ತದಲ್ಲಿ ವಿಶ್ವಮಾನವ ಕುವೆಂಪು ಜಯಂತಿ ಆಚರಣಾ ಸಮಿತಿ ಏರ್ಪಡಿಸಿದ್ದ ಕುವೆಂಪು ಅವರ 120ನೇ ಜಯಂತಿಯಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಕುವೆಂಪು ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಕುವೆಂಪು ಬರೆದಂತೆ ಬದುಕಿದರು. ಮೌಢ್ಯಾಚರಣೆಗಳು ಸಮಾಜಕ್ಕೆ ಕಂಟಕವಾಗಿವೆ ಎಂದು ಸಾರಿದರು. ಎಲ್ಲ ಮಾನವರೂ ಸಮಾನರೇ ಎಂಬುದನ್ನು ತಿಳಿಸಿದ್ದಾರೆ. ಜನರಲ್ಲಿ ವೈಚಾರಿಕತೆಯ ಕಿಡಿ ಹೊತ್ತಿಸಿ ಜಾಗೃತಿ ಮೂಡಿಸಿದ್ದಾರೆ. ಅವರ ಸಾಹಿತ್ಯವನ್ನು ಎಲ್ಲೆಡೆ ಪ್ರಚಾರ ಮಾಡಬೇಕು. ಯುವ ಜನಾಂಗಕ್ಕೆ ಕುವೆಂಪು ಆಶಯಗಳನ್ನು ತಿಳಿಸಬೇಕು ಎಂದರು.

ಚಿಕ್ಕಬಳ್ಳಾಪುರ ಜಿಲ್ಲೆ ಸಹಕಾರ ಸಂಘಗಳ ಉಪ ನಿಬಂಧಕ ಡಾ.ಶಂಕರ್ ಬಲ್ಲೇನಹಳ್ಳಿ 'ಕುವೆಂಪು ಸಾಹಿತ್ಯದಲ್ಲಿ ವೈಚಾರಿಕ ದೃಷ್ಟಿಕೋನ' ಕುರಿತು ಮಾತನಾಡಿ, ರಾಜಾರಾಂ ಮೋಹನರಾಯ್ ಅವರಂತೆ ಕುವೆಂಪು ಕೂಡ ಸಮಾಜ ಸುಧಾರಕ. ಪುರಾಣಗಳಲ್ಲಿರುವ ಕಟ್ಟುಕತೆಗಳನ್ನು, ತಮ್ಮ ಕಾವ್ಯಗಳ ಮೂಲಕ ಬಯಲು ಮಾಡಿದರು. ವಿವಿಧ ಧರ್ಮಗಳಲ್ಲಿನ ಪುರೋಹಿತಶಾಹಿ ವ್ಯವಸ್ಥೆಯ ಲೋಪಗಳನ್ನು ಖಂಡಿಸಿದರು. ಶೂದ್ರ ವರ್ಗದ ಸಾಹಿತಿಗಳು ಸಾಹಿತ್ಯ ಕೃಷಿ ಮಾಡಲು ಪ್ರೇರಣೆ ನೀಡಿದರು. ಅವರು 1935ರಲ್ಲಿ ಶ್ರೀರಂಗಪಟ್ಟಣದಲ್ಲಿ ಮಾಡಿದ ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ಭಾಷಣ ಸಾಹಿತ್ಯ ವಲಯದಲ್ಲಿ ದೊಡ್ಡ ಚರ್ಚೆಯನ್ನೇ ಹುಟ್ಟು ಹಾಕಿತು. ಬರೆದಂತೆ ಬದುಕಿದ ಕುವೆಂಪು ಅವರ ವಿಚಾರಗಳ ಎಲ್ಲ ಕಾಲ ಮತ್ತು ಎಲ್ಲ ಪ್ರದೇಶಗಳಿಗೂ ಅನ್ವಯವಾಗುತ್ತವೆ ಎಂದರು.

ನಾಟಿ ವೈದ್ಯ ದರಸಗುಪ್ಪೆ ಡಿ. ಸ್ವಾಮಣ್ಣ, ಪ್ರಗತಿಪರ ಕೃಷಿಕ ಚಿಕ್ಕಅಂಕನಹಳ್ಳಿ ಶಾಂತರಾಜು, ಆಕಾಶವಾಣಿ ಜಾನಪದ ಕಲಾವಿದ ಕೆ.ಶೆಟ್ಟಹಳ್ಳಿ ಮಂಟೇಲಿಂಗಯ್ಯ, ಮಾದರಿ ಜನಪ್ರತಿನಿಧಿ ಮಂಡ್ಯಕೊಪ್ಪಲು ಎಂ.ಕೆ.ಮಂಜುನಾಥ್ ಹಾಗೂ ಸಮಾಜ ಸೇವಕ ಸೋಮಶೇಖರ್ ಅವರಿಗೆ ಶಾಸಕ ರಮೇಶ ಬಂಡಿಸಿದ್ದೇಗೌಡ ಕುವೆಂಪು ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಜನಮನ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಸಿ.ಪುಟ್ಟಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ತಾಲೂಕು ಘಟಕದ ಅಧ್ಯಕ್ಷ ಕಡತನಾಳು ಬಾಲಕೃಷ್ಣ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಲ್. ದಿನೇಶ್, ಕುವೆಂಪು ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಸಿ.ಸ್ವಾಮಿಗೌಡ, ಪುರಸಭೆ ಸದಸ್ಯರಾದ ಕೃಷ್ಣಪ್ಪ, ಎಸ್.ಪ್ರಕಾಶ್, ಗಂಜಾಂ ಶಿವು, ಕೆ.ಬಿ.ಬಸವರಾಜು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ. ಶ್ರೀನಿವಾಸ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಡಿ.ಎನ್.ಲೋಕೇಶ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಬಿ.ಎಸ್.ಸಂದೇಶ್, ಪ್ರಜ್ಞಾವಂತರ ವೇದಿಕೆ ಸಂಚಾಲಕ ಸಿ.ಎಸ್.ವೆಂಕಟೇಶ್, ಗೌಡಹಳ್ಳಿ ದೇವರಾಜು, ಕಡತನಾಳು ಜಯಶಂಕರ್, ಎನ್.ಸರಸ್ವತಿ, ಮಹೇಶ್, ಶಂಕರ್, ಎಂ.ಸುರೇಶ್ ಇತರರು ಭಾಗವಹಿಸಿದ್ದರು.

## ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಭಿಯಾನದ

# ಮತದಾರರ ಅಂತಿಮ ಪಟ್ಟಿ ಪ್ರಕಟ

ಮಂಡ್ಯ, ಜ.6– ಜಿಲ್ಲೆಯಲ್ಲಿ ಕೈಗೊಂಡ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಭಿಯಾನದ ಅಂತಿಮ ಮತದಾರ ಪಟ್ಟಿಯನ್ನು ಜಿಲ್ಲಾಧಿಕಾರಿಗಳ ಕಚೇರಿ, ತಾಲೂಕು ಕಚೇರಿ ಹಾಗೂ ಎಲ್ಲಾ ಮತಗಟ್ಟೆಗಳಲ್ಲಿ ಪ್ರಕಟಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ ಅವರು ತಿಳಿಸಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಸಮ್ಮುಖದಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯ ಅಂತಿಮ ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ದಿನಾಂಕ 1–1–2025ನ್ನು ಅರ್ಹತಾ ದಿನಾಂಕವನ್ನಾಗಿಟ್ಟುಕೊಂಡು ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಸಂಬಂಧ ಮಂಡ್ಯ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಂದು ಅಂತಿಮ ಮತದಾರರ ಪಟ್ಟಿಯನ್ನು ಹಾಗೂ ಸೇವಾ ಮತದಾರರ ಅಂತಿಮ ಪಟ್ಟಿಯನ್ನು ಪ್ರಚುರಪಡಿಸಲಾಗಿದೆ. ಜಿಲ್ಲೆಯ ನೋಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಉಚಿತವಾಗಿ ನೀಡಲಾಗಿದೆ ಎಂದರು.



ಮತದಾರರ ಅಂತಿಮ ಪಟ್ಟಿಯನ್ನು ಜಿಲ್ಲೆಯ ನೋಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ನೀಡುತ್ತಿರುವುದು.

**ಜಿಲ್ಲೆಯಲ್ಲಿ ಒಟ್ಟು 15,62,916 ಮತದಾರರು:** ಮಂಡ್ಯ ಜಿಲ್ಲೆಯಲ್ಲಿ ಒಟ್ಟು 15,62,916 ಮತದಾರರಿದ್ದು, 7,67,209 ಗಂಡು, 7,95,562 ಮಹಿಳಾ ಮತದಾರರು ಹಾಗೂ 145 ತೃತೀಯಲಿಂಗಿ ಮತದಾರರಿದ್ದಾರೆ ಎಂದರು.

ಮಳವಳ್ಳಿ ತಾಲೂಕಿನಲ್ಲಿ ಗಂಡು–1,26,747, ಹೆಣ್ಣು–1,28,841, ತೃತೀಯಲಿಂಗಿ–10, ಒಟ್ಟು–2,55,598 ಮತದಾರರಿದ್ದಾರೆ. ಮದ್ದೂರು ಗಂಡು–1,04,109, ಹೆಣ್ಣು–1,11,901, ತೃತೀಯಲಿಂಗಿ–19, ಒಟ್ಟು–2,16,029 ಮತದಾರರಿದ್ದಾರೆ. ಮೇಲುಕೋಟೆ ಕ್ಷೇತ್ರದಲ್ಲಿ ಗಂಡು–1,00,262, ಹೆಣ್ಣು–1,03,477, ತೃತೀಯಲಿಂಗಿ–10, ಒಟ್ಟು–2,03,749 ಮತದಾರರಿದ್ದಾರೆ. ಮಂಡ್ಯ ತಾಲೂಕಿನಲ್ಲಿ ಗಂಡು–1,11,847, ಹೆಣ್ಣು–1,18,285, ತೃತೀಯಲಿಂಗಿ–42, ಒಟ್ಟು–2,30,174 ಮತದಾರರಿದ್ದಾರೆ. ಶ್ರೀರಂಗಪಟ್ಟಣ–ಗಂಡು 1,05,868, ಹೆಣ್ಣು–1,11,664, ತೃತೀಯಲಿಂಗಿ–43, ಒಟ್ಟು–2,17,575 ಮತದಾರರಿದ್ದಾರೆ. ನಾಗಮಂಗಲ ಗಂಡು–1,07,278, ಹೆಣ್ಣು–1,08,889, ತೃತೀಯಲಿಂಗಿ–11, ಒಟ್ಟು–2,16,178 ಮತದಾರರು ಹಾಗೂ ಕೆಆರ್.ಪೇಟೆ ತಾಲೂಕಿನಲ್ಲಿ ಗಂಡು–1,11,098, ಹೆಣ್ಣು–1,12,505, ತೃತೀಯಲಿಂಗಿ–10, ಒಟ್ಟು–2,23,613 ಮತದಾರರಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು.

**1,823 ಮತಗಟ್ಟೆಗಳು:** ಜಿಲ್ಲೆಯಲ್ಲಿ ಒಟ್ಟು 1,823 ಮತಗಟ್ಟೆಗಳಿದ್ದು, ಮಳವಳ್ಳಿ–272 ಮತಗಟ್ಟೆಗಳು, ಮದ್ದೂರು–254, ಮೇಲುಕೋಟೆ–264, ಮಂಡ್ಯ–263, ಶ್ರೀರಂಗಪಟ್ಟಣ–249, ನಾಗಮಂಗಲ–260, ಕೆಆರ್.ಪೇಟೆ–261 ಮತಗಟ್ಟೆಗಳಿವೆ ಎಂದು ತಿಳಿಸಿದರು.

**ಯುವ ಮತದಾರರು:** ಜಿಲ್ಲೆಯಲ್ಲಿ ಒಟ್ಟು 19,875 ಯುವ ಮತದಾರರಿದ್ದಾರೆ. ಅದರಲ್ಲಿ 10,484 ಗಂಡು, 9,388 ಹೆಣ್ಣು ಹಾಗೂ 3–ತೃತೀಯಲಿಂಗಿ ಮತದಾರರಿದ್ದಾರೆ. ಜಿಲ್ಲೆಯಲ್ಲಿ ಒಟ್ಟು–19,373 ಮತದಾರರು 85 ವರ್ಷ ಮೇಲ್ಪಟ್ಟವರಿದ್ದಾರೆ. 22,320–ವಿಶೇಷಚೇತನ ಮತದಾರರು, 617–ಸೇವಾ ಮತದಾರರಿದ್ದಾರೆ.

ಸಭೆಯಲ್ಲಿ ಚುನಾವಣಾ ತಹಸೀಲ್ದಾರ್ ರೇಣುಕುಮಾರ್.ವೈಎಂ ಸೇರಿದಂತೆ ವಿವಿಧ ರಾಜಕೀಯ ಪಕ್ಷದ ಮುಖಂಡರುಗಳಾದ ಬೊಮ್ಮಯ್ಯ, ದಿನೇಶ್, ಮಂಜುನಾಥ, ರಮೇಶ ಉಪಸ್ಥಿತರಿದ್ದರು.

# ಬಸ್ ದರ ಏರಿಕೆ ಖಂಡಿಸಿ ಸಿಪಿಐ(ಎಂ) ಕಾರ್ಯಕರ್ತರ ಪ್ರತಿಭಟನೆ




ಭಾರತೀನಗರ, ಜ.6– ಬಸ್ ಪ್ರಯಾಣ ದರ ಶೇ15 ರಷ್ಟು ಹೆಚ್ಚಳ ಮಾಡಿರುವುದನ್ನು ಖಂಡಿಸಿ ಸಿಪಿಐ (ಎಂ) ಕಾರ್ಯಕರ್ತರು ಭಾರತೀನಗರದ ಸಾರಿಗೆ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದರು.

ಭಾರತೀನಗರದ ಸಿಪಿಐ(ಎಂ) ಕಚೇರಿಯಿಂದ ಮದ್ದೂರು–ಮಳವಳ್ಳಿ ಹೆದ್ದಾರಿಯುದ್ದಕ್ಕೂ ಪ್ರತಿಭಟನಾ ಮೆರವಣಿಗೆ ನಡೆಸಿ ನಂತರ ಬಸ್ ನಿಲ್ದಾಣದ ಬಳಿ ಜಮಾಯಿಸಿದ ಕಾರ್ಯಕರ್ತರು, ಮುಖಂಡರು ಬಸ್ ಪ್ರಯಾಣದರ ಹೆಚ್ಚಳ ಮಾಡಿರುವುದನ್ನು ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐ(ಎಂ) ಜಿಲ್ಲಾ ಘಟಕದ ಕಾರ್ಯದರ್ಶಿ ಟಿ.ಎಲ್.ಕೃಷ್ಣೇಗೌಡ ಮಾತನಾಡಿ, ರಾಜ್ಯ ಸರ್ಕಾರ ದಿಢೀರ್ ಕೆಎಸ್ಆರ್‌ಟಿಸಿ ಬಸ್ ದರವನ್ನು ಹೆಚ್ಚಳ ಮಾಡಿದೆ. ಸಿಪಿಐ (ಎಂ) ವತಿಯಿಂದ ರಾಜ್ಯಾದ್ಯಂತ ಬಸ್ ದರ ಏರಿಕೆ ಖಂಡಿಸಿ ಇಂದು ಪ್ರತಿಭಟಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಚ್ಚರಿಕೆ ನೀಡಿದ್ದೇವೆ. ಈ ಕೂಡಲೇ ದರ ಏರಿಕೆ ಮಾಡಿರುವುದನ್ನು ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಎಂ.ಪುಟ್ಟಮಾದು ಅವರು ಮಾತನಾಡಿ, ಗ್ಯಾರಂಟಿ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಮಾಡಿಸಿ ಆ ಶುಲ್ಕವನ್ನು ಪುರುಷರಿಂದ ಭರಿಸುವಂತಹ ತಂತ್ರವನ್ನು ಮೊದಲು ಬಿಡಬೇಕು. ಜನರು ದಡ್ಡರಲ್ಲ, ನಿಮ್ಮ ಧೋರಣೆಯನ್ನು ರಾಜ್ಯಾದ್ಯಂತ ಖಂಡಿಸಲಾಗುತ್ತದೆ. ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವ ಹೊತ್ತಿನಲ್ಲೇ ರಾಜ್ಯ ಸರ್ಕಾರ ಬಸ್ ದರವನ್ನು ಹೆಚ್ಚಳ ಮಾಡಿ ಜನಸಾಮಾನ್ಯರ ಬದುಕಿನಲ್ಲಿ ಚೆಲ್ಲಾಟವಾಡುತ್ತಿದೆ. ಇದೇ ರೀತಿ ಮುಂದುವರೆದರೆ ಸರ್ಕಾರ ಸಹ ಉದ್ದಾರವಾಗುವುದಿಲ್ಲ. ಬಾಂಡಲಿಯಿಂದ ಬೆಂಕಿಗೆ ಬೀಳುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಸಿಪಿಐ(ಎಂ) ರಾಜ್ಯ ವಲಯ ಸಮಿತಿ ಕಾರ್ಯದರ್ಶಿ ಟಿ.ಬಿ.ಶೋಭಾ, ಜಿಲ್ಲಾ ಸಮಿತಿ ಸದಸ್ಯರಾದ ಬಿ.ಹನುಮೇಶ್, ಡಿ.ಕೆ.ಲತಾ, ವಲಯ ಸಮಿತಿ ಸದಸ್ಯರಾದ ಡಿ.ಸಿದ್ದರಾಜು, ಅಜಯ್‌ಕುಮಾರ್, ಅರುಣ, ಗಾಳಿಹೊನ್ನಯ್ಯ, ಅನಿತಾ, ಶೋಭಾ, ಬೋರೇಗೌಡ ಸೇರಿದಂತೆ ಹಲವರಿದ್ದರು.

## ಗೊರುಚ ಅವರಿಂದ ಮಂಡ್ಯ ಡಿಸಿಗೆ ಅಭಿನಂದನಾ ಪತ್ರ



**ಮಂಡ್ಯ:** 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಡ್ಯ ಜಿಲ್ಲೆಯಲ್ಲಿ ಯಶಸ್ವಿಯಾಗಿ ಆಯೋಜಿಸಿದ ಹಿನ್ನೆಲೆಯಲ್ಲಿ ಸಮ್ಮೇಳನಾಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಅವರು ಜಿಲ್ಲಾಧಿಕಾರಿ ಕುಮಾರ ಅವರಿಗೆ ಅಭಿನಂದನೆ ಸಲ್ಲಿಸಿ ಪತ್ರವನ್ನು ಬರೆದಿದ್ದಾರೆ.

ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗೆಗೆ ಜಿಲ್ಲಾಧಿಕಾರಿಗೆ ಇರುವ ಶ್ರದ್ಧಾಸಕ್ತಿ ನಿಜಕ್ಕೂ ಅಭಿನಂದನೀಯ. ನಾನು ಸಮ್ಮೇಳನದ ಸಲುವಾಗಿ ಮಂಡ್ಯದಲ್ಲಿದ್ದ ನಾಲ್ಕು ದಿನಗಳೂ ತಾವು ನನ್ನ ಬಗೆಗೆ ತೋರಿದ ವಿಶ್ವಾಸಾದರಗಳನ್ನು ಮರೆಯಲಾರೆ. ತಾವು ನೀಡಿದ ಸತ್ಕಾರಕ್ಕೆ ನಾನು ಕೃತಜ್ಞನಾಗಿದ್ದೇನೆ. ಈ ಸಮ್ಮೇಳನ ಸಾಹಿತ್ಯಾಸಕ್ತರ ಪಾಲುದಾರಿಕೆಯಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿತು ಎಂದು ಹೇಳಲು ನನಗೆ ಹರ್ಷವೆನಿಸುತ್ತದೆ. ಸಮ್ಮೇಳನದ ಯಶಸ್ಸಿಗಾಗಿ ಶ್ರಮಿಸಿದ ತಮಗೆ ಮತ್ತು ಜಿಲ್ಲಾಡಳಿತದ ಸಮಸ್ತರಿಗೆ ನನ್ನ ಅಭಿನಂದನೆಗಳು ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

# ಪಿಗ್ಮಿ, ಎಫ್‌ಡಿ ಹಣ ವಾಪಸ್‌ಗೆ ಆಗ್ರಹಿಸಿ ಸಹಕಾರ ಸಂಘಕ್ಕೆ ಬೀಗ ಜಡಿದು ಪ್ರತಿಭಟನೆ



ಪಾಂಡವಪುರ, ಜ.6– ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕಟ್ಟಿರುವ ಪಿಗ್ಮಿ ಹಾಗೂ ಎಫ್‌ಡಿ ಹಣವನ್ನು ವಾಪಸ್ಸು ನೀಡುವಂತೆ ಆಗ್ರಹಿಸಿ ಮಹಿಳೆಯರು ಕಚೇರಿಗೆ ಬೀಗ ಜಡಿದು ಅಧಿಕಾರಿಗಳು ಹಾಗೂ ಆಡಳಿತ ಮಂಡಳಿ ವಿರುದ್ಧ ಸೋಮವಾರ ಪ್ರತಿಭಟನೆ ನಡೆಸಿದರು.

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಂದೆ ಜಮಾಯಿಸಿದ ಮಹಿಳೆಯರು ಕಚೇರಿಗೆ ಬೀಗ ಜಡಿದು ಆಕ್ರೋಶ ಹೊರಹಾಕಿದರು.

ಸೊಸೈಟಿಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳು, ಗ್ರಾಹಕರು ಹಾಗೂ ರೈತರು ಕಷ್ಟಪಟ್ಟು ಕಟ್ಟಿರುವಂತಹ ಪಿಗ್ಮಿ, ಎಫ್‌ಡಿ (ಠೇವಣಿ) ಹಣ ಹಾಗೂ ಅಡಮಾನವಿಟ್ಟಿರುವ ಚಿನ್ನಾಭರಣಗಳನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಕೋಟ್ಯಾಂತರ ರೂ. ನಷ್ಟ ಮಾಡಿದ್ದಾರೆ. ಕ್ಷೇತ್ರದ ಶಾಸಕರು ಹಂತ ಹಂತವಾಗಿ ಭ್ರಷ್ಟಾಚಾರ ನಡೆಸಿರುವ ಅಧಿಕಾರಿಗಳಿಂದ ಹಣ ವಸೂಲಾತಿ ಮಾಡಿಕೊಡುವುದಾಗಿ ಭರವಸೆ ನೀಡಿದ್ದರು. ಆದರೆ, ಈವರೆಗೂ ಪಿಗ್ಮಿ ಹಾಗೂ ಎಫ್‌ಡಿ ಕಟ್ಟಿರುವ ಗ್ರಾಹಕರು, ರೈತರಿಗೆ ವಾಪಸ್ಸು ಕೊಡಿಸಿಲ್ಲ ಎಂದು ಕಿಡಿಕಾರಿದರು.

ಈಗಿರುವ ಸಂಸ್ಥೆಯ ಅಧ್ಯಕ್ಷ ಯೋಗೇಶ್ ಅವರು ಶನಿವಾರದೊಳಗೆ ಪಿಗ್ಮಿ ಕಟ್ಟಿರುವ ಎಲ್ಲಾ ರೈತರಿಗೆ ಹಣಕೊಡುವುದಾಗಿ ಭರವಸೆ ನೀಡಿದ್ದರು. ಶನಿವಾರ ಮುಗಿಸಿ ಸೋಮವಾರ ಬಂದಿದೆ ಪಿಗ್ಮಿ ಹಣ ಕೇಳಲು ಬಂದರೆ ಅಧ್ಯಕ್ಷರು, ಅಧಿಕಾರಿಗಳು ಯಾರೂ ಪತ್ತೆ ಇಲ್ಲ. ಫೋನ್ ಮಾಡಿದರೂ ಅಧ್ಯಕ್ಷರು, ಶಾಸಕರು ಫೋನ್ ತೆಗೆಯುತ್ತಿಲ್ಲ. ಕಸಬಾ ಸೊಸೈಟಿ ವ್ಯಾಪ್ತಿಯಲ್ಲಿ ಬರುವ ಪಾಂಡವಪುರ ಪಟ್ಟಣ, ಬೀರಶೆಟ್ಟಹಳ್ಳಿ, ಹಾರೋಹಳ್ಳಿ, ಹಿರೇಮರಳಿ, ಬನಘಟ್ಟ ಗ್ರಾಮಗಳಿಂದ ಅಂದಾಜು 1500ಕ್ಕೂ ಅಧಿಕ ಮಂದಿ ರೈತರು, ಗ್ರಾಹಕರು 45 ಲಕ್ಷಕ್ಕೂ ಅಧಿಕ ಪಿಗ್ಮಿ ಕಟ್ಟಿದ್ದಾರೆ. ಎಲ್ಲಾ ಹಣವನ್ನು ಇಲ್ಲಿನ ಅಧಿಕಾರಿಗಳು, ಆಡಳಿತ ಮಂಡಳಿ ಭ್ರಷ್ಟಾಚಾರ ನಡೆಸಿ ರೈತರಿಗೆ ಅನ್ಯಾಯ ಮಾಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಕೂಡಲೇ ನಮಗೆ ಪಿಗ್ಮಿ ಹಣ ನೀಡಬೇಕು. ಇಲ್ಲವಾದರೆ, ಕಚೇರಿ ಬಾಗಿಲು ತೆಗೆದು ಕೆಲಸ ನಡೆಸಲು ಬಿಡದೆ ಉಗ್ರ ಹೋರಾಟ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಮಹಿಳೆಯರಾದ ಶೋಭಾ, ಅನುರಾಧ, ಸುನಂದ, ರಾಜಮ್ಮ, ರತ್ನಮ್ಮ ಸೇರಿದಂತೆ ಹಲವರು ಭಾಗವಹಿಸಿದ್ದರು.

ಒಂದನೇ ಪುಟದಿಂದ

## ಚೀನಾ ವೈರಸ್ ಪತ್ತೆ

ಇರುವುದು ಪತ್ತೆಯಾಗಿದೆ. ಮತ್ತೊಂದು ಪ್ರಕರಣದಲ್ಲಿ, ನಗರದ ಖಾಸಗಿ ಆಸ್ಪತ್ರೆಗೆ ದಾಖಲಾದ ಮೂರು ತಿಂಗಳ ಹೆಣ್ಣು ಶಿಶುವಿನಲ್ಲಿಯೂ ಎಚ್‌ಎಂಪಿ ವೈರಸ್ ಇರುವುದು ದೃಢಪಟ್ಟಿದೆ, ಆದರೆ, ಶಿಶುವನ್ನು ಈಗಾಗಲೇ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಎಚ್‌ಎಂಪಿ ವೈರಸ್ ಪತ್ತೆಯಿಂದ ಯಾರೂ ಆತಂಕ, ಗಾಬರಿಪಡುವ ಅಗತ್ಯವಿಲ್ಲ. ಈ ವೈರಸ್ ಭಾರತದಲ್ಲೂ ಇದೆ. ಆದರೆ, ಅದು ಮ್ಯೂಟೇಷನ್ ಆಗಿರುವ ಕುರಿತು ಯಾವುದೇ ಮಾಹಿತಿ ಇಲ್ಲ.

ಚೀನಾದಲ್ಲಿ ಮ್ಯುಟೇಟ್ ಆಗಿರುವ ವೈರಸ್ ಹೇಗಿದೆ ಎಂಬ ಬಗ್ಗೆಯೂ ಸ್ಪಷ್ಟ ಮಾಹಿತಿ ಇಲ್ಲ. ಹೀಗಾಗಿ ಇಲ್ಲಿ ಪತ್ತೆಯಾಗಿರುವುದು ಸಾಮಾನ್ಯ ಎಚ್‌ಎಂಪಿ ವೈರಸ್ಸಾ ಅಥವಾ ಚೀನಾ ತಳಿಯೇ ಎಂಬ ಗೊಂದಲ ಇದೆ. ಭಾರತದಲ್ಲೂ ಸಾಮಾನ್ಯ ಎಚ್‌ಎಂಪಿ ವೈರಸ್ ಶೇ 0.78 ರಷ್ಟು ಕಾಣಿಸುತ್ತದೆ. ಸದ್ಯ ಸೋಂಕು ಪತ್ತೆಯಾಗಿರುವ ಮಗು ಮತ್ತು ಅದರ ಕುಟುಂಬದವರು ಪ್ರವಾಸ ಮಾಡಿದ (ಟ್ರಾವೆಲ್ ಹಿಸ್ಟರಿ) ಮಾಹಿತಿ ಇಲ್ಲ. ಈ ಬಗ್ಗೆ ಆರೋಗ್ಯ ಇಲಾಖೆ ಕೂಡ ಪರಿಶೀಲನೆ ನಡೆಸುತ್ತಿದೆ. ಯಾವುದೇ ಆತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಪತ್ತೆಯಾಗಿರುವ ವೈರಸ್ ಬಗ್ಗೆ ಕೇಂದ್ರಕ್ಕೆ ಮಾಹಿತಿ ನೀಡಲಾಗಿದೆ. ಕೇಂದ್ರದ ಆರೋಗ್ಯ ಇಲಾಖೆ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ, ಸೂಕ್ತ ಮುನ್ನೆಚ್ಚರಿಕೆ ವಹಿಸುವಂತೆ ಕೇಂದ್ರ ಆರೋಗ್ಯ ಇಲಾಖೆ ರಾಜ್ಯಕ್ಕೆ ತಿಳಿಸಿದೆ. ಚೀನಾದಲ್ಲಿ ಆತಂಕಕ್ಕೆ ಕಾರಣವಾಗಿದೆ ಎನ್ನಲಾದ ಹ್ಯೂಮನ್ ಮೆಟಾಪ್ನ್ಯೂಮೋ ವೈರಸ್ (ಎಚ್‌ಎಂಪಿವಿ) ಹೊಸದೇನಲ್ಲ, 2001ರಲ್ಲಿ ಈ ವೈರಸ್ ಕಂಡುಹಿಡಿಯಲಾಗಿತ್ತು ಎಂಬುದಾಗಿ ಯುಎಸ್ ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ ತಿಳಿಸಿದೆ.

ಕೊರೊನಾ ವೈರಸ್ ಒಂದು ಸಾಂಕ್ರಾಮಿಕ ಕಾಯಿಲೆ, ಇದು ಎಸ್‌ಆರ್‌ಎಸ್–ಸಿಒವಿ–2 ವೈರಸ್‌ನಿಂದ ಉಂಟಾಗುತ್ತದೆ, ಎಚ್‌ಎಂಪಿವಿ ಮತ್ತು ಕೊರೊನಾ ವೈರಸ್ ನಡುವೆ ಕೆಲವು ಹೋಲಿಕೆ ಇವೆಯಾದರೂ ಸದ್ಯದ ಪರಿಸ್ಥಿತಿಯಲ್ಲಿ ಎಚ್‌ಎಂಪಿ ವೈರಸ್‌ನಿಂದ ಭೀತಿಪಡುವ ಅಗತ್ಯವಿಲ್ಲ.

ಎರಡೂ ವೈರಸ್‌ಗಳು ಎಲ್ಲಾ ವಯೋಮಾನದವರಲ್ಲಿ ಉಸಿರಾಟದ ತೊಂದರೆಗೆ ಕಾರಣವಾಗುತ್ತದೆ. ಚಿಕ್ಕ ಮಕ್ಕಳು, ಹಿರಿಯ ವಯಸ್ಕರು ಮತ್ತು ರೋಗನಿರೋಧಕ ಶಕ್ತಿ ಕಡಿಮೆ ಇರುವವರು ಹೆಚ್ಚು ಅಪಾಯಕ್ಕೆ ಒಳಗಾಗುವ ಸಾಧ್ಯತೆ ಇದೆ.

ಸದ್ಯದ ಪರಿಸ್ಥಿತಿಯಲ್ಲಿ ಎಚ್‌ಎಂಪಿ ವೈರಸ್ ಹರಡುವಿಕೆ ತಡೆಗಟ್ಟಲು ಯಾವುದೇ ಲಸಿಕೆ ಲಭ್ಯವಿಲ್ಲ. ಭಾರತದಲ್ಲಿ ಯಾವುದೇ ರೀತಿಯ ಆತಂಕಪಡಬೇಕಾದ ಅಗತ್ಯವೂ ಇಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

## ಸೋಂಕಿತರ ಸಂಖ್ಯೆ 5ಕ್ಕೆ ಏರಿಕೆ

ಬಗ್ಗೆ ರಾಜ್ಯ ಸರ್ಕಾರಗಳು ಅಲರ್ಟ್ ಮೋಡ್‌ನಲ್ಲಿವೆ. ಮೊದಲ ಪ್ರಕರಣವು ಬೆಂಗಳೂರಿನಲ್ಲಿ 3 ತಿಂಗಳ ಹೆಣ್ಣು ಮಗುವಿನಲ್ಲಿ ಪತ್ತೆಯಾಗಿತ್ತು. ಬ್ರಾಂಕೋಪ್ನ್ಯುಮೋನಿಯಾದೊಂದಿಗೆ ಆಸ್ಪತ್ರೆಗೆ ದಾಖಲಾದ ನಂತರ ಎಚ್‌ಎಂಪಿವಿ ರೋಗನಿರ್ಣಯ ಮಾಡಲಾಯಿತು. ಸಚಿವಾಲಯದ ಮಾಹಿತಿ ಪ್ರಕಾರ ಆಕೆಯನ್ನು ಡಿಸ್ಚಾರ್ಜ್ ಮಾಡಲಾಗಿದೆ. ಎರಡನೇ ಪ್ರಕರಣವು 8 ತಿಂಗಳ ಗಂಡು ಶಿಶುವಿನಲ್ಲಿ ಪತ್ತೆಯಾಗಿದ್ದು ಪ್ರಸ್ತುತ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದೆ. ಎರಡು ಶಿಶುಗಳಿಗೂ ಯಾವುದೇ ಅಂತರರಾಷ್ಟ್ರೀಯ ಪ್ರಯಾಣದ ಇತಿಹಾಸವಿಲ್ಲ ಎಂದು ಐಸಿಎಂಆರ್ ದೃಢಪಡಿಸಿದೆ. ಇದರ ಬೆನ್ನಲ್ಲೇ ಗುಜರಾತ್‌ನಲ್ಲಿ ಮತ್ತೊಂದು ಪ್ರಕರಣ ವರದಿಯಾಗಿತ್ತು. ಗುಜರಾತ್‌ನಲ್ಲಿ ಇದು ಮೊದಲ ಎಚ್‌ಎಂಪಿವಿ ಪ್ರಕರಣವಾಗಿದೆ. ಸುಮಾರು 2 ವರ್ಷ ವಯಸ್ಸಿನ ಮಗುವಿನಲ್ಲಿ ಎಚ್‌ಎಂಪಿವಿ ವೈರಸ್ ಪತ್ತೆಯಾಗಿತ್ತು. ರೋಗಿಯನ್ನು ಅಹಮದಾಬಾದ್‌ನ ಚಂದ್ಖೇಡಾ ಪ್ರದೇಶದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮತ್ತೊಂದೆಡೆ ಇದೀಗ ಚೆನ್ನೈನಲ್ಲಿ ಇಬ್ಬರಲ್ಲಿ ಸೋಂಕು ಪತ್ತೆಯಾಗಿದ್ದು ಸೋಂಕಿತರ ಸಂಖ್ಯೆ 5ಕ್ಕೇ ಏರಿಕೆಯಾಗಿದೆ.

### ಏನು ಮಾಡಬಾರದು

- **ಸ್ವಯಂ ಚಿಕಿತ್ಸೆ ಮಾಡಬೇಡಿ.**
- **ನೀವು ಕೆಮ್ಮುವಾಗ ಅಥವಾ ಸೀನುವಾಗ ನಿಮ್ಮ ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳಿ.**
- **ನಿಮ್ಮ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಅಥವಾ ಆಲ್ಕೋಹಾಲ್ ಆಧಾರಿತ ಹ್ಯಾಂಡ್ ಸ್ಯಾನಿಟೈಸರ್ ನಿಂದ ತೊಳೆಯಿರಿ.**
- **ನೀವು ಅಸ್ವಸ್ಥರಾಗಿದ್ದರೆ ಕಿಕ್ಕಿರಿದ ಸ್ಥಳಗಳನ್ನು ತಪ್ಪಿಸಿ ಮತ್ತು ಸಂಪರ್ಕವನ್ನು ಮಿತಿಗೊಳಿಸಿ.**
- **ಆಗಾಗ್ಗೆ ಕಣ್ಣು, ಮೂಗು ಮತ್ತು ಬಾಯಿಯನ್ನು ಮುಟ್ಟಬೇಡಿ.**
- **ನೀವು ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ ಮತ್ತು ಟಿಶ್ಯೂ ಪೇಪರ್ ಅನ್ನು ಮರುಬಳಕೆ ಮಾಡಬೇಡಿ.**

## ಮುಂಜಾಗ್ರತಾ ಕ್ರಮ ಕೈಗೊಳ್ತೇವೆ

ಪ್ರಯಾಣದ ಹಿನ್ನೆಲೆ ಹೊಂದಿಲ್ಲ ಎಂಬುದನ್ನು ಗಮನಿಸಲಾಗಿದೆ. ಕೇಂದ್ರ ಆರೋಗ್ಯ ಸಚಿವಾಲಯವು ಲಭ್ಯವಿರುವ ಎಲ್ಲಾ ಮಾರ್ಗಗಳ ಮೂಲಕ ಪರಿಸ್ಥಿತಿಯ ಮೇಲ್ವಿಚಾರಣೆ ಮಾಡುತ್ತಿದೆ. ಐಸಿಎಂಆರ್ ವರ್ಷವಿಡೀ ಎಚ್‌ಎಂಪಿವಿ ಹರಡುವಿಕೆ ಸಾಧ್ಯತೆಗಳ ನಿಗಾ ಕಾರ್ಯವನ್ನೂ ಮುಂದುವರೆಸಿದೆ. ವಿಶ್ವ ಆರೋಗ್ಯ ಸಂಸ್ಥೆ ಈಗಾಗಲೇ ನಡೆಸುತ್ತಿರುವ ಕ್ರಮಗಳನ್ನು ಮತ್ತಷ್ಟು ತಿಳಿಸಲು, ಚೀನಾದಲ್ಲಿನ ಪರಿಸ್ಥಿತಿ ಬಗ್ಗೆ ಸಮಯೋಚಿತ ಸ್ಥಿತಿಗತಿಗಳನ್ನು ಒದಗಿಸುತ್ತಿದೆ. ಉಸಿರಾಟದ ಖಾಯಿಲೆಗಳಲ್ಲಿ ಯಾವುದೇ ಸಂಭಾವ್ಯ ಏರಿಕೆಯನ್ನು ನಿಭಾಯಿಸಲು ಆರೋಗ್ಯ ಇಲಾಖೆ ಸುಸಜ್ಜಿತವಾಗಿದೆ ಮತ್ತು ಅಗತ್ಯವಿದ್ದರೆ, ಸಾರ್ವಜನಿಕ ಆರೋಗ್ಯ ತುರ್ತು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯದಲ್ಲಿ ಹೆಚ್‌ಎಂಪಿ ವೈರಸ್‌ನ ಎರಡು ಪ್ರಕರಣ ಪತ್ತೆಯಾದ ಹಿನ್ನೆಲೆಯಲ್ಲಿ, ಸೋಂಕು ಹರಡದಂತೆ ಸರ್ಕಾರ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂದರು.

ಚೀನಾದಲ್ಲಿ ಹೆಚ್‌ಎಂಪಿ ವೈರಸ್ ಕಾಣಿಸಿಕೊಂಡಿದ್ದು, ಕರ್ನಾಟಕದಲ್ಲಿ ಈ ವೈರಸ್ ಪತ್ತೆಯಾಗಿರುವ ಮಾಹಿತಿ ದೊರೆತಿದ್ದು, ಮುಂಜಾಗ್ರತಾ ಕ್ರಮ ಕೈಗೊಳ್ಳಲು ಆರೋಗ್ಯ ಇಲಾಖೆಗೆ ಸೂಚಿಸಲಾಗಿದೆ, ಆರೋಗ್ಯ ಸಚಿವರು ಈಗಾಗಲೇ ಸಭೆ ನಡೆಸಿದ್ದು, ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿವೆ. ಸೋಂಕು ತಡೆ ಕ್ರಮವಾಗಿ ವಿಮಾನ ನಿಲ್ದಾಣಗಳಲ್ಲಿ ಪುನಃ ಸ್ಕ್ರೀನಿಂಗ್ ಪ್ರಾರಂಭಿಸುವ ಹಾಗೂ ಮುಂಜಾಗ್ರತಾ ಕ್ರಮಗಳ ಕುರಿತು ತೀರ್ಮಾನಿಸಲಾಗುವುದು ಎಂದರು.

**ಇಲವಾಲ ಬಳಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣ:** ಮೈಸೂರಿನ ಇಲವಾಲ ಸಮೀಪ ಸುಸಜ್ಜಿತ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಿಸಲು ಅಗತ್ಯ ಭೂಮಿ ಮತ್ತು ಮೂಲಸೌಕರ್ಯ ಕಲ್ಪಿಸಿಕೊಡುವಂತೆ ಮಾಡಿದ ಮನವಿಗೂ ಮುಖ್ಯಮಂತ್ರಿ ಅವರ ಸಕಾರಾತ್ಮಕ ಸ್ಪಂದನೆ ದೊರೆತಿದೆ.

**ಬೆಂಗಳೂರು ಅರಮನೆಯ ಸ್ವಲ್ಪ ಭೂಮಿ ಸ್ವಾಧೀನಕ್ಕೆ :** ಅಭಿವೃದ್ಧಿ ವಿಷಯ ಮುಗಿಯುತ್ತಿದ್ದಂತೆ, ರಸ್ತೆ ವಿಸ್ತರಣೆಗೆ ಬೆಂಗಳೂರು ಅರಮನೆಯ ಸ್ವಲ್ಪ ಭೂಮಿ ಸ್ವಾಧೀನಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಎದುರಾಗಿರುವ ಕಾನೂನು ತೊಡಕಿನ ಬಗ್ಗೆಯೂ ಯದುವೀರ್ ಅವರು ಮುಖ್ಯಮಂತ್ರಿ ಬಳಿ ಮಾತನಾಡಿದ್ದಾರೆ.

ರಸ್ತೆಗೆ ಅಗತ್ಯವಿರುವ ಭೂಮಿ ಪಡೆದು, ನ್ಯಾಯಾಲಯದ ತೀರ್ಪಿನಂತೆ ಟಿಡಿಆರ್ ಮಂಜೂರಾತಿಗೆ ಅವಕಾಶ ಮಾಡಿಕೊಡಿ. ಈಗಾಗಲೇ ನಿಮ್ಮ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿ ರಸ್ತೆ ಅಗಲೀಕರಣಕ್ಕೆ ಭೂಮಿ ಪಡೆದು ಟಿಡಿಆರ್ ನೀಡುವ ಬಗ್ಗೆಯೂ ಪ್ರಸ್ತಾಪ ಆಗಿದೆ ಎಂಬುದನ್ನು ಮುಖ್ಯಮಂತ್ರಿ ಅವರ ಗಮನಕ್ಕೆ ಯದುವೀರ್ ತಂದಿದ್ದಾರೆ ಎನ್ನಲಾಗಿದೆ.

## ವಿವಿಧ ಸಂಘಟಗಳಿಂದ ಇಂದು 'ಮೈಸೂರು ಬಂದ್'

ಒಂದು ವೇಳೆ ಅಹಿತಕರ ಘಟನೆ ನಡೆದಲ್ಲಿ ಸಂದರ್ಭಾನುಸಾರ ಬಸ್‌ಗಳನ್ನು ಸ್ಥಗಿತಗೊಳಿಸುತ್ತೇವೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮೈಸೂರು ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದ್ದಾರೆ. ನಾಳಿನ ಬಂದ್ ಹಿನ್ನೆಲೆಯಲ್ಲಿ ಪ್ರಯಾಣಿಕರು ಹಾಗೂ ಸಿಬ್ಬಂದಿಗೆ ತೊಂದರೆಯಾಗದಂತೆ ಪರಿಸ್ಥಿತಿ ನೋಡಿಕೊಂಡು ಬಸ್ ಸಂಚಾರಕ್ಕೆ ವ್ಯವಸ್ಥೆ ಮಾಡುವುದಾಗಿ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಶಿವಲಿಂಗೇಗೌಡ ತಿಳಿಸಿದ್ದಾರೆ.

**ಶಾಲೆಗಳಿಗೆ ಅಧಿಕೃತ ರಜೆ ಇಲ್ಲ:** ಜಿಲ್ಲಾಧಿಕಾರಿಗಳು, ಬಂದ್ ವಿಚಾರಕ್ಕೆ ಸಂಬಂಧಪಟ್ಟಂತೆ ಯಾವುದೇ ಸೂಚನೆ ನೀಡದಿರುವುದರಿಂದ ಶಾಲೆಗಳಿಗೆ ಅಧಿಕೃತ ರಜೆ ಘೋಷಿಸಿಲ್ಲ. ಆದರೆ ಮಕ್ಕಳು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರಿಸ್ಥಿತಿಗನುಗುಣವಾಗಿ ಕ್ರಮ ವಹಿಸುವಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲಹೆ ನೀಡಿರುವುದಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು ಉಪನಿರ್ದೇಶಕ ಎಸ್.ಟಿ.ಜವರೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

**ಲಾರಿ ಮಾಲೀಕರ ನೈತಿಕ ಬೆಂಬಲ:** ಅದೇ ರೀತಿ ಮೈಸೂರು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟದ ಅಧ್ಯಕ್ಷ ಕೋದಂಡರಾಮು ಅವರು ಈಗಾಗಲೇ ಅಬಕಾರಿ, ಬಣ್ಣ ಸೇರಿದಂತೆ ಇನ್ನಿತರ ಸರಕು ಸಾಗಾಣಿಕೆ ಲಾರಿಗಳನ್ನು ಬುಕ್ ಮಾಡಿ ರಶೀದಿ ಬರೆದಿರುವುದರಿಂದ ನಾವು ಸರಕುಗಳನ್ನು ಸಾಗಣೆ ಮಾಡಲೇಬೇಕಾಗಿರುತ್ತದೆ. ಒಂದು ವೇಳೆ ತಡವಾಗಿ ತಲುಪಿಸಿದರೆ ದಂಡ ತೆರಬೇಕಾಗುತ್ತದೆ. ಆದ್ದರಿಂದ ಸರಕು ಸಾಗಣೆಯನ್ನು ಮಾಡಿ ಅನ್‌ಲೋಡ್ ಮಾಡದೆ ನಿಲ್ಲಿಸುತ್ತೇವೆ. ನಾವು ಡಾ.ಅಂಬೇಡ್ಕರ್ ವಿರುದ್ಧ ನೀಡಿರುವ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿ ಬಂದ್‌ಗೆ ನೈತಿಕ ಬೆಂಬಲ ವ್ಯಕ್ತಪಡಿಸುತ್ತೇವೆ ಎಂದು ತಿಳಿಸಿದ್ದಾರೆ.

**ಕಚೇರಿಗಳು ಎಂದಿನಂತೆ ತೆರೆದಿರುತ್ತವೆ:** ಬಂದ್‌ಗೆ ಕರೆ ಹಿನ್ನೆಲೆಯಲ್ಲಿ ಶಾಲಾ ಕಾಲೇಜುಗಳಿಗೆ ಸರ್ಕಾರ ಅಥವಾ ಜಿಲ್ಲಾಡಳಿತದಿಂದ ರಜಾ ಘೋಷಣೆ ಮಾಡಿರುವುದಿಲ್ಲ. ಹಾಗೆಯೇ ಸರ್ಕಾರಿ ಕಚೇರಿಗಳು, ಬ್ಯಾಂಕ್‌ಗಳು ಇನ್ನಿತರ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸಂಸ್ಥೆಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ. ಬಂದ್‌ಗೆ ಎಲ್ಲಾ ಬಗೆಯ ಕೈಗಾರಿಕೋದ್ಯಮಗಳು ನೈತಿಕ ಬೆಂಬಲ ನೀಡಲಿವೆ ಎಂದು ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್ ತಿಳಿಸಿದ್ದಾರೆ. ಉಳಿದಂತೆ ಸಾರಿಗೆ, ಅಂಗಡಿ ಮುಂಗಟ್ಟು ಇನ್ನಿತರ ವಹಿವಾಟುಗಳನ್ನು ಮೆರವಣಿಗೆ ಮೂಲಕ ಸಾಗಿ ಬಂದ್ ಮಾಡಿಸುವುದಾಗಿ ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿಯು ತಿಳಿಸಿದೆ.

**ವ್ಯಾಪಕ ಪೊಲೀಸ್ ಬಂದೋಬಸ್ತ್:** ಬಂದ್ ಹಿನ್ನೆಲೆಯಲ್ಲಿ ಮೈಸೂರು ನಗರದಾದ್ಯಂತ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭಾರೀ ಭದ್ರತೆ ಒದಗಿಸಲಾಗಿದೆ. ಸಾರ್ವಜನಿಕ ಬದುಕಿಗೆ ತೊಂದರೆಯಾಗದಂತೆ ಪ್ರತಿಭಟನೆ ಮಾಡಲು ಅವಕಾಶವಿದೆ. ಆದರೆ ಕಲ್ಲು ತೂರಾಟ, ಹಿಂಸೆಯಂತಹ ಅಹಿತಕರ ಘಟನೆಗಳನ್ನು ನಡೆಸಿದಲ್ಲಿ ಅಂತಹವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

## ದಂಡ ಪಾವತಿಸುವ ವೆಬ್‌ಸೈಟ್ ಕಾರ್ಯ ಸ್ಥಗಿತ

ಸಂಬಂಧಪಟ್ಟ ಸಂಚಾರ ಠಾಣೆಗಳಿಗೇ ಹೋಗಬೇಕಾಗಿದೆ.

ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್ ಮೆಂಟ್ ಸಿಸ್ಟಂ ಎಐ ಆಧಾರದ ಆಟೋ ಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನಿಷನ್ (ಎಎನ್‌ಪಿಆರ್) ಕ್ಯಾಮರಾಗಳಲ್ಲಿ ಸಂಚಾರ ನಿಯಮ ಉಲ್ಲಂಘನೆಯು ಸ್ವಯಂ ಚಾಲಿತವಾಗಿ ಚಲನ್ ಸೃಜನೆಯಾಗುತ್ತದೆ. ಪ್ರತಿ ಸಂಚಾರ ನಿಯಮ ನಿತ್ಯ ಸಾವಿರಾರು ಉಲ್ಲಂಘನೆ ಪ್ರಕರಣಗಳು ದಾಖಲಾಗುತ್ತಿದ್ದರೂ, ಬಾಕಿ ದಂಡ ವಸೂಲಿಯಾಗದೇ ಸರ್ಕಾರದ ಆದಾಯ ಕಡಿಮೆ ಯಾಗುತ್ತಿದೆ. ವೆಬ್‌ಸೈಟ್ ಚಾಲನೆಗೆ ಬರುವ ಮುನ್ನ ಸಾರ್ವಜನಿಕರು ಅವರ ವ್ಯಾಪ್ತಿಯ ಸಂಚಾರ ಠಾಣೆಗೆ ಹೋಗಿ ದಂಡ ಕಟ್ಟಿ ರಶೀದಿ ಪಡೆಯುತ್ತಿದ್ದರು. ಕರ್ನಾಟಕ–ಒನ್ ಅಥವಾ ಮೈಸೂರು–ಒನ್ ವೆಬ್‌ಸೈಟ್‌ಗಳಲ್ಲೂ ದಂಡ ಪಾವತಿಸುವ ವ್ಯವಸ್ಥೆ ಇತ್ತು. ಈಗ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ದಂಡ ಪಾವತಿಸಲೆಂದೇ ಇರುವ ಪ್ರತ್ಯೇಕ ವೆಬ್‌ಸೈಟ್‌ನಿಂದಾಗಿ ಸಂಚಾರ ಠಾಣೆಗಳ ಮೇಲಿನ ಒತ್ತಡ ಕಡಿಮೆಯಾಗಿತ್ತು.

ವೆಬ್‌ಸೈಟ್‌ನಲ್ಲಿ ಶೋಧಿಸಿದಾಗ ಅದು ಕಾರ್ಯ ಸ್ಥಗಿತವಾಗಿರುವುದರಿಂದ ದಂಡ ಪಾವತಿಸಲು ಸಾಧ್ಯವಾಗಲಿಲ್ಲ ಎಂದು ಬನ್ನಿಮಂಟಪ ನಿವಾಸಿ ಅಶೋಕ್‌ಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ. ಅದೇ ರೀತಿ ಸರಸ್ವತಿಪುರಂನ ಆನಂದಕೃಷ್ಣ ಎಂಬುವರು 'ನಾನು 2 ವಾಹನಗಳ ದಂಡ ಕಟ್ಟಬೇಕು, ನನ್ನ ಲ್ಯಾಪ್‌ಟಾಪ್, ಫೋನ್ ಹಾಗೂ ಸ್ನೇಹಿತರ ಫೋನ್‌ಗಳಲ್ಲಿ ಸರ್ಚ್ ಮಾಡಿದರೂ ವೆಬ್‌ಸೈಟ್ ಓಪನ್ ಆಗಲಿಲ್ಲ' ಎಂದರು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ವೆಬ್‌ಸೈಟ್ ಕಾರ್ಯ ಸ್ಥಗಿತಗೊಂಡಿರುವ ಬಗ್ಗೆ ಪರಿಶೀಲಿಸಿ ತಾಂತ್ರಿಕ ತೊಂದರೆಗಳಾಗಿದ್ದರೆ ಶೀಘ್ರ ಸರಿಪಡಿಸುತ್ತೇವೆ ಎಂದರು.

## ಮೂರನೇ ತರಗತಿ ಬಾಲಕಿ ಸಾವು

ಈ ಬಾಲಕಿ ಬೆಳಗ್ಗೆ ತನ್ನ ಸಹಪಾಠಿಗಳೊಂದಿಗೆ ನಗುನಗುತ್ತಲೇ ತರಗತಿಗೆ ಹಾಜರಾಗಿದ್ದಳು. ಶಿಕ್ಷಕಿ ನಡೆಸುತ್ತಿದ್ದ ಪಾಠವನ್ನು ತದೇಕಚಿತ್ತದಿಂದ ಕೇಳುತ್ತಿದ್ದ ಈಕೆ, ತನ್ನ ನೋಟ್ಸ್ ಅನ್ನು ಶಿಕ್ಷಕಿಗೆ ನೀಡಲು ಹೋದಾಗ ಹಠಾತ್ತನೇ ಕುಸಿದು ಬಿದ್ದಿದ್ದಾಳೆ. ತಕ್ಷಣವೇ ಶಿಕ್ಷಕಿಯು ತನ್ನ ಸಹೋದ್ಯೋಗಿಗಳ ಸಹಕಾರದಿಂದ ಬಾಲಕಿಯನ್ನು ಜೆಎಸ್‌ಎಸ್ ಆಸ್ಪತ್ರೆಗೆ ಕೊಂಡೊಯ್ದಿದ್ದಾರೆ. ಆದರೆ, ತೇಜಸ್ವಿನಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾಳೆ ಎಂದು ವೈದ್ಯರು ಘೋಷಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಆಸ್ಪತ್ರೆಗೆ ದೌಡಾಯಿಸಿದ ಬಾಲಕಿಯ ತಂದೆ–ತಾಯಿ ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಒಂದು ದಿನವೂ ಅನಾರೋಗ್ಯದ ಸಮಸ್ಯೆ ನಮ್ಮ ಮಗುವಿಗೆ ಕಾಡಿರಲಿಲ್ಲ. ಆರೋಗ್ಯವಂತ ಮಗುವಿಗೆ ಇದ್ದಕ್ಕಿದ್ದಂತೆ ಹೃದಯಾಘಾತವಾಗಿದೆ ಎಂಬುದರ ಬಗ್ಗೆ ಪಾಲಕರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ಮರಣೋತ್ತರ ಪರೀಕ್ಷೆಗೆ ಒಪ್ಪದ ಪೋಷಕರು, ಮಗುವಿನ ದೇಹವನ್ನು ಸ್ವಗ್ರಾಮಕ್ಕೆ ಕೊಂಡೊಯ್ದಿದ್ದು, ನಾಳೆ (ಜ. 7) ಅಂತ್ಯಕ್ರಿಯೆ ನೆರವೇರಿಸಲಿದ್ದಾರೆ ಎಂದು ಅವರ ಕುಟುಂಬಸ್ಥರು ತಿಳಿಸಿದ್ದಾರೆ.

## ಭೂಮಿ ಹಸ್ತಾಂತರಕ್ಕೆ ಮನವಿ

ಮಾಡುವ ವಿಚಾರ ವಿವಾದ ಸ್ವರೂಪ ಪಡೆಯುತ್ತಿರುವ ಈ ಸಂದರ್ಭದಲ್ಲಿ ಯದುವೀರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿಯಾಗಿದೆ. ಬೆಂಗಳೂರು ಅರಮನೆ ಜಾಗವನ್ನು ರಸ್ತೆಗೆ ಬಿಟ್ಟು ಕೊಡುವ ಬಗ್ಗೆ ರಾಜ್ಯ ಸರ್ಕಾರ ಅರಮನೆ ವಾರಸುದಾರರಿಗೆ ಅಭಿವೃದ್ಧಿ ಹಕ್ಕು (ಟಿಡಿಆರ್) ನೀಡುವ ವಿಚಾರ ಕೂಡ ಚಾಲ್ತಿಯಲ್ಲಿದೆ. ಮೈಸೂರು ರಾಜವಂಶಸ್ಥರು ಹಾಗೂ ಸರ್ಕಾರದ ನಡುವೆ ಹಲವು ವಿಚಾರದಲ್ಲಿ ವೈರುಧ್ಯ ಇರುವ ಸಂದರ್ಭದಲ್ಲಿ ಸಿದ್ದರಾಮಯ್ಯ ಹಾಗೂ ಯದುವೀರ್ ಭೇಟಿ ಮಹತ್ವ ಪಡೆದಿದೆ. ಈ ವೇಳೆ ಸಿದ್ದರಾಮಯ್ಯ ಹಾಗೂ ಯದುವೀರ್ ಟಿಡಿಆರ್ ಹಾಗೂ ರಸ್ತೆಗೆ ನಾಮಕರಣ ಮಾಡುವ ವಿಚಾರವಾಗಿ ಚರ್ಚೆ ಮಾಡಿದ್ದಾರೆಯೇ, ಇಲ್ಲವೇ ಎಂಬುದು ಖಚಿತವಾಗಿಲ್ಲ.

## ಖಾತಾ ರದ್ದುಪಡಿಸಲು ಸೂಚನೆ

ಶುದ್ಧ ಕ್ರಯ ಮಾಡಿ ಮಾರಾಟ ಮಾಡಲಾಗಿದೆ. ಆದ್ದರಿಂದ ಮುಡಾದಿಂದ ಬಿಡುಗಡೆಯಾಗದಿರುವ 22 ಹಾಗೂ ನಕ್ಷೆ ಅನುಮೋದನೆಯಾಗದೆ ಸೃಷ್ಟಿಸಿರುವ 8 ಶುದ್ಧ ಕ್ರಯ ಪತ್ರಗಳನ್ನು ರದ್ದುಪಡಿಸಬೇಕೆಂದು ಪತ್ರದಲ್ಲಿ ತಿಳಿಸಿದ್ದಾರೆ. ಜೊತೆಗೆ ಮುಡಾ ವಲಯ ಕಚೇರಿ 1ರ ವಲಯಾಧಿಕಾರಿಗಳು ಮೈಸೂರು ಮಹಾನಗರಪಾಲಿಕೆ ವಲಯ ಕಚೇರಿ 2ರ ವಲಯ ಆಯುಕ್ತರಿಗೆ ಈ ಕುರಿತಂತೆ ಪತ್ರ ಬರೆದಿದ್ದು, ನಕ್ಷೆ ಅನುಮೋದನೆಯಾಗದ ಹಾಗೂ ಮುಡಾದಿಂದ ಸಿಡಿ ಪಟ್ಟಿ ಬಿಡುಗಡೆಯಾಗದ ನಿವೇಶನಗಳನ್ನು ಖಾತೆ ಮಾಡಿದ್ದಲ್ಲಿ ಅಂತಹ ನಿವೇಶನಗಳ ಖಾತೆಯನ್ನು ರದ್ದುಪಡಿಸುವಂತೆ ಕೋರಿದ್ದಾರೆ.

## 'ಆಶಾ' ಮುಷ್ಕರ: ಸಿಬ್ಬಂದಿಗೆ ರಜೆ ನೀಡದಿರಲು ಸೂಚನೆ

**ಬೆಂಗಳೂರು:** 'ಆಶಾ' ಕಾರ್ಯಕರ್ತೆಯರು ಇದೇ 7ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗಿರುವುದರಿಂದ ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ವ್ಯತ್ಯಯವಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆಯು ತನ್ನ ಅಧಿಕಾರಿಗಳಿಗೆ ಸೂಚಿಸಿದೆ. ಈ ಬಗ್ಗೆ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ. ಕಾನೂನುಬಾಹಿರವಾಗಿ ಆಶಾ ಕಾರ್ಯಕರ್ತೆಯರು ಹೋರಾಟದಲ್ಲಿ ಭಾಗವಹಿಸದಂತೆ ಜಿಲ್ಲಾಡಳಿತ ಮನವೊಲಿಸಬೇಕು. 7 ರಿಂದ ಕರ್ತವ್ಯಕ್ಕೆ ಗೈರಾಗುವ ಆಶಾ ಕಾರ್ಯಕರ್ತೆಯರ ಮಾಹಿತಿಯನ್ನು ಪಡೆಯಬೇಕು. ಸೇವೆ ಒದಗಿಸಲು ತೊಡಕಾದ ಸ್ಥಳಗಳಲ್ಲಿ ಈಗಾಗಲೇ ಇಲಾಖೆಯಿಂದ ನೀಡಿರುವ ಮಾನದಂಡದಂತೆ ಆಶಾ ಕಾರ್ಯಕರ್ತೆಯರ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು ಎಂದು ತಿಳಿಸಲಾಗಿದೆ. ಸಮುದಾಯ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುವ ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಅಂಗನವಾಡಿ ಕಾರ್ಯಕರ್ತರ ಸಹಕಾರ ಪಡೆದು, ಆರೋಗ್ಯ ಸೇವೆಯಲ್ಲಿ ತೊಡಕಾಗದಂತೆ ಕ್ರಮವಹಿಸಬೇಕು. ಇಲಾಖೆಯ ಎಲ್ಲ ಅಧಿಕಾರಿ, ಸಿಬ್ಬಂದಿಗೆ ವೈದ್ಯಕೀಯ ತುರ್ತು ಹೊರತುಪಡಿಸಿ ಯಾವುದೇ ರಜೆ ನೀಡಬಾರದು ಎಂದು ಸೂಚಿಸಲಾಗಿದೆ.

## ಥ್ರೋಬಾಲ್ ಪಂದ್ಯಾವಳಿಗೆ ಆಯ್ಕೆ



ಕೇರಳದ ಕ್ಯಾಲಿಕಟ್‌ನ ಪ್ರೆಸ್ಟೀಜ್ ಪಬ್ಲಿಕ್ ಸ್ಕೂಲ್‌ನಲ್ಲಿ ಜ.3 ರಿಂದ 5ರವರೆಗೆ ನಡೆಯಲಿರುವ ಥ್ರೋಬಾಲ್ ಪಂದ್ಯಾವಳಿಗೆ ಥ್ರೋಬಾಲ್ ಸಬ್ ಜೂನಿಯರ್ ಕರ್ನಾಟಕ ತಂಡಕ್ಕೆ ರಂಜಿತಾ, ಲಾವಣ್ಯ, ಶಿವಶಂಕರ, ವಿಷ್ಣು, ನಂದೀಶ್ ಹಾಗೂ ಕ್ರೀಡಾಧಿಕಾರಿಗಳಾದ ಆಂತೋಣಿ ಬ್ಲಾಸ್ಸಿನ್, ಶ್ರೀನಿವಾಸ್, ಸುಪ್ರೀತ್ ಆಯ್ಕೆಯಾಗಿದ್ದಾರೆ.

## ಬಸ್ ನಿಲ್ದಾಣದಲ್ಲಿ ಕಳ್ಳತನ ಮಾಡುತ್ತಿದ್ದ ಮಹಿಳೆ ಸೇರಿ ಇಬ್ಬರ ಬಂಧನ

### 12 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶ



ಕಳವು ಮಾಡಿದ್ದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವ ತನಿಖಾ ತಂಡ.

ಮೈಸೂರು, ಜ.6(ಆರ್‌ಕೆ)–ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಂದ ಚಿನ್ನಾಭರಣ ಕಳವು ಮಾಡುತ್ತಿದ್ದ ಮಹಿಳೆ ಸೇರಿ ಇಬ್ಬರನ್ನು ಲಷ್ಕರ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗ ಜಿಲ್ಲೆ ಭದ್ರಾವತಿಯ ಸಂತೆ ಮೈದಾನ 3ನೇ ಕ್ರಾಸ್‌ನ ಸಾವಿತ್ರಿ (42) ಹಾಗೂ ಗುರುರಾಜ್ (32) ಬಂಧಿತರಾಗಿದ್ದು, ಅವರಿಂದ 12 ಲಕ್ಷ ರೂ. ಮೌಲ್ಯದ 184 ಗ್ರಾಂ ಚಿನ್ನಾಭರಣವನ್ನು ಪೊಲೀಸರು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಡಿಸೆಂಬರ್ 16ರಂದು ಮಹಿಳೆಯೊಬ್ಬರು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದಾಗ 184 ಗ್ರಾಂ ಚಿನ್ನಾಭರಣವಿದ್ದ ವ್ಯಾನಿಟಿ ಬ್ಯಾಗ್ ಕಳವಾಗಿದೆ ಎಂದು ಲಷ್ಕರ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಇನ್‌ಸ್ಪೆಕ್ಟರ್ ಪ್ರಸಾದ್ ತನಿಖೆ ನಡೆಸುತ್ತಿದ್ದರು. ಡಿಸೆಂಬರ್ 31ರಂದು ಗಸ್ತಿನಲ್ಲಿದ್ದಾಗ ಸಿಕ್ಕಿಬಿದ್ದ ಆರೋಪಿಗಳನ್ನು ಠಾಣೆಗೆ ತಂದು ವಿಚಾರಣೆ ಮಾಡಲಾಗಿ ಅವರು ಆಭರಣ ಕಳವು ಮಾಡಿದ್ದಾರೆಂಬುದು ತಿಳಿಯಿತು. ಅವರಿಂದ ಆಭರಣಗಳನ್ನು ವಶಪಡಿಸಿಕೊಂಡ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಅವರನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅಪರಾಧ ಮತ್ತು ಸಂಚಾರ ವಿಭಾಗದ ಎಸಿಪಿ ಎಸ್.ಜಾಹ್ನವಿ, ದೇವರಾಜ ಸಂಚಾರ ವಿಭಾಗದ ಎಸಿಪಿ ಶಾಂತಮಲ್ಲಪ್ಪ ಅವರ ಮಾರ್ಗದರ್ಶನದಂತೆ ಲಷ್ಕರ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಕೆ.ಆರ್.ಪ್ರಸಾದ್, ಸಬ್ ಇನ್‌ಸ್ಪೆಕ್ಟರ್‌ಗಳಾದ ಅನಿಲ್‌ಕುಮಾರ್ ಮಹೂರ್, ಸಿಬ್ಬಂದಿಗಳಾದ ಸುರೇಶ್, ರವಿಕುಮಾರ್, ಗಿರೀಶ್, ಮಂಜುನಾಥ್, ಚೌಡಪ್ಪ ಹಾಸಗೀರ್, ಅಬ್ದುಲ್ ರೆಹಮಾನ್, ಅಶ್ವಿನಿ ಹಳವಾರ ಹಾಗೂ ಕುಮಾರ್ ಪತ್ತೆ ಕಾರ್ಯದಲ್ಲಿ ಭಾಗವಹಿಸಿದ್ದರು.

### ಪಿಹೆಚ್.ಡಿ ಪದವಿ



ಮೈಸೂರು,ಜ.6–ರಾಜ್ಯಶಾಸ್ತ್ರ ವಿಭಾಗದ ಡಾ.ಎಂ.ಜಿ.ಹನುಮಂತರಾಜು ಮಾರ್ಗದರ್ಶನದಲ್ಲಿ ನಾಗರಾಜು ಸಂಶೋಧನೆ ನಡೆಸಿ ಸಾದರಪಡಿಸಿದ 'ಕರ್ನಾಟಕದಲ್ಲಿ ದಲಿತ ಚಳವಳಿಯ ರಾಜಕಾರಣ : ವಿಶೇಷವಾಗಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಅನುಲಕ್ಷಿಸಿ ಒಂದು ತೌಲನಿಕ ವಿಶ್ಲೇಷಣೆ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

## ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿ

ಮೈಸೂರು,ಜ.6– ಜನವರಿ 6, 7, 8, 9 ಮತ್ತು 10 ರಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಗರದ 2 ಪರೀಕ್ಷಾ ಕೇಂದ್ರಗಳಲ್ಲಿ UGC-NET ಪರೀಕ್ಷೆ ನಡೆಸಲಿದ್ದು, ಸದರಿ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಭಾರತೀಯ ಸುರಕ್ಷಾ ಸಂಹಿತೆ 2023 ಸೆಕ್ಷನ್ 163 ರೀತ್ಯ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯ ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿದೆ. ಪರೀಕ್ಷಾ ಕೇಂದ್ರಗಳು IONDigital Zone, IDZ hebbal jyothirgamaya Mansion, ಜ.6 ರಿಂದ 10 ರವರೆಗೆ ಹೆಬ್ಬಾಳಲ್ಲಿ ಪರೀಕ್ಷೆ ನಡೆಯಲ್ಲಿದ್ದು, Chandana resources center, maha devapura main road ಜ.7 ರಂದು ಉದಯಗಿರಿಯಲ್ಲಿ ಪರೀಕ್ಷೆ ನಡೆಯುವುದು.

**ಡಿ.ಇಲ್.ಇಡಿ ಪೂರಕ ಪರೀಕ್ಷೆ:** ಜನವರಿ 6 ಮತ್ತು 7 ರಂದು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ, ಡಯಟ್, ಇಲ್ಲಿ ನಡೆಯುವ ಪ್ರಥಮ ಮತ್ತು ದ್ವಿತೀಯ ಡಿ.ಇಲ್.ಇಡಿ ಪೂರಕ ಪರೀಕ್ಷೆಗಳು ನಡೆಯಲಿದ್ದು, ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯವರೆಗೆ ಸದರಿ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಭಾರತೀಯ ಸುರಕ್ಷಾ ಸಂಹಿತೆ 2023 ಸೆಕ್ಷನ್ 163 ರೀತ್ಯ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯ ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಚುನಾವಣಾ ತಂತ್ರಗಾರ ಪ್ರಶಾಂತ್ ಕಿಶೋರ್ ಬಂಧನ



**ಪಾಟ್ನಾ:** ಬಿಪಿಎಸ್‌ಸಿ ಪರೀಕ್ಷೆಯನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಬಿಹಾರದ ಪಾಟ್ನಾದ ಗಾಂಧಿ ಮೈದಾನದಲ್ಲಿ ಅನಿರ್ದಿಷ್ಟಾವಧಿ ಉಪವಾಸ ನಡೆಸುತ್ತಿದ್ದ ಜನ್ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಬಿಪಿಎಸ್‌ಸಿ ಅಭ್ಯರ್ಥಿಗಳ ಬೇಡಿಕೆಗಳಿಗಾಗಿ ಅಮರಣಾಂತ ಉಪವಾಸ ನಡೆಸುತ್ತಿದ್ದ ಪ್ರಶಾಂತ್ ಕಿಶೋರ್ ಅವರನ್ನು ಸೋಮವಾರ (ಜ.6) ಬೆಳಗ್ಗೆ 4 ಗಂಟೆಗೆ ಪೊಲೀಸರು ವಶಕ್ಕೆ ಪಡೆದಿದ್ದು, ನಂತರ ಬಂಧನಕ್ಕೆ ಒಳಪಡಿಸಲಾಗಿದೆ ಎಂದು ಪಾಟ್ನಾ ಜಿಲ್ಲಾಡಳಿತ ಮಾಹಿತಿ ನೀಡಿದ್ದು, ಪ್ರಶಾಂತ್ ಕಿಶೋರ್ ಅವರನ್ನು ಮೊದಲು ಪೊಲೀಸರು ವಶಕ್ಕೆ ಪಡೆದಿದ್ದು, ನಂತರ ಚಿಕಿತ್ಸೆಗಾಗಿ ಪಾಟ್ನಾ ಏಮ್ಸ್‌ಗೆ ದಾಖಲಿಸಿದ್ದಾರೆ. ಪ್ರಶಾಂತ್ ಕಿಶೋರ್ ಅವರನ್ನು ಪೊಲೀಸರು ಬಲವಂತವಾಗಿ ಕರೆದೊಯ್ದಿದ್ದಾರೆ ಎಂದು ಜನ್ ಸುರಾಜ್ ಪಕ್ಷದ ಮುಖಂಡರು ಆರೋಪಿಸಿದ್ದು, ಪ್ರಶಾಂತ್ ಕಿಶೋರ್ ಬಂಧನ ಖಂಡಿಸಿ ಪ್ರತಿಭಟನಾಕಾರರು ಏಮ್ಸ್ ಆಸ್ಪತ್ರೆಯ ಹೊರ ಭಾಗದಲ್ಲಿ ಗದ್ದಲವನ್ನು ಸೃಷ್ಟಿಸಿದ್ದಾರೆ.

ಜನ ಸುರಾಜ್ ಮುಖ್ಯಸ್ಥ ಪ್ರಶಾಂತ್ ಕಿಶೋರ್ ಸತತ ನಾಲ್ಕು ದಿನಗಳ ಕಾಲ ಅನಿರ್ದಿಷ್ಟಾವಧಿ ಉಪವಾಸ ನಡೆಸಿದ್ದರು. ಹೀಗಾಗಿ ಅವರನ್ನು ಬಂಧಿಸಿದ ಪೊಲೀಸರು, ಬಳಿಕ ಅವರನ್ನು ಚಿಕಿತ್ಸೆಗಾಗಿ ಏಮ್ಸ್‌ಗೆ ಕರೆದೊಯ್ದರು.

# ಸಿದ್ದರಾಮಯ್ಯ ನೇತೃತ್ವದ ಡಿನ್ನರ್ ಪಾಲಿಟಿಕ್ಸ್ ವಿಶೇಷವೇನಿಲ್ಲ!

### ನಾನು ಔತಣಕೂಟಕ್ಕೆ ಕರೆಯುತ್ತೇನೆ, ಅದರಲ್ಲೇನಿರುತ್ತೆ ವಿಶೇಷ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನೆ

ನವದೆಹಲಿ, ಜ.6(ಬಿಎಲ್‌ಯು)–ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಇತರೆ ಸಚಿವರು ಡಿನ್ನರ್ ಪಾರ್ಟಿ ನಡೆಸಿರುವುದಕ್ಕೆ ಮಹತ್ವವಿಲ್ಲ. ನಾನು ಕೂಡ ಔತಣಕೂಟಕ್ಕೆ ಕರೆಯುತ್ತೇನೆ, ಇದರಲ್ಲಿ ವಿಶೇಷ ಏನಿರುತ್ತದೆ ಎಂದು ಉಪ ಮುಖ್ಯಮಂತ್ರಿಗಳೂ ಆದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ.

ವಿದೇಶ ಪ್ರವಾಸದ ನಂತರ ದೆಹಲಿ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಿಮ್ಮ ಮನೆಗೆ ನಾವು, ನಮ್ಮ ಮನೆಗೆ ನೀವು ಬರುವುದು ರಾಜಕೀಯದಲ್ಲಿ ಸಾಮಾನ್ಯ. ನಾನೂ ಕೂಡ ಆಗಾಗ್ಗೆ ಔತಣಕೂಟ ಸಭೆ ಕರೆಯುತ್ತೇನೆ. ಇದರಲ್ಲಿ ಯಾವುದೇ ವಿಶೇಷ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನೀವು ವಿದೇಶ ಪ್ರವಾಸ ಕೈಗೊಂಡ ವೇಳೆ ಕರ್ನಾಟಕದಲ್ಲಿ ಡಿನ್ನರ್ ಪಾಲಿಟಿಕ್ಸ್ ನಡೆದಿದೆಯಲ್ಲ ಎಂಬ ಪ್ರಶ್ನೆಗೆ, ಔತಣಕೂಟಕ್ಕೆ ಕೆಲವರು ಒಂದೆಡೆ ಸೇರಿರುವುದಕ್ಕೆ ರಾಜಕಾರಣ ಏಕೆ ಬೆರೆಸುತ್ತೀರಾ, ಇದಕ್ಕೆ ಇಲ್ಲಸಲ್ಲದ ಅರ್ಥ ಏಕೆ ಕಲ್ಪಿಸುತ್ತೀರಾ ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಕಳೆದ ನಾಲ್ಕೈದು ವರ್ಷಗಳಿಂದ ನಾನು ಕುಟುಂಬದವರ ಜೊತೆ ಎಲ್ಲಿಗೂ ಹೋಗಿರಲಿಲ್ಲ. ಈ ಹಿನ್ನೆಲೆಯಲ್ಲಿ ವಿದೇಶ ಪ್ರವಾಸ ಕೈಗೊಂಡಿದ್ದೆ ಎಂದು ಸ್ಪಷ್ಟನೆ ನೀಡಿದರು. ಕೆಲವು ಸಚಿವರು ಕುಟುಂಬದ ಜೊತೆ ವಿದೇಶಕ್ಕೆ ಹೋಗಿದ್ದರು. ಈ ವೇಳೆ ಬೆಂಗಳೂರಿನಲ್ಲೆ ಇದ್ದ ಕೆಲವರು ಒಟ್ಟಿಗೆ ಸೇರಿದ್ದಾರೆ. ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ಸಚಿವ ಸಂಪುಟ ಪುನರ್ ರಚನೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಮಾತುಗಳು ಕೇಳಿ ಬರುತ್ತಿದೆಯಲ್ಲ ಎಂದು ಕೇಳಿದಾಗ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಯಾವುದೇ ಬೆಳವಣಿಗೆ ನಡೆದಿಲ್ಲ. ಆದರೆ ಸಚಿವ ಸಂಪುಟ ಪುನರ್ ರಚನೆ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.



ನವದೆಹಲಿ ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿದರು.

### ಕರ್ನಾಟಕದಲ್ಲಿ ಗೃಹಲಕ್ಷ್ಮಿ, ದೆಹಲಿಯಲ್ಲಿ ಪ್ಯಾರಿ ದೀದಿ

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕರ್ನಾಟಕದ ಗೃಹಲಕ್ಷ್ಮಿ ಮಾದರಿಯಲ್ಲಿ ಪ್ಯಾರಿ ದೀದಿ ಯೋಜನೆ ಜಾರಿ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ಪ್ಯಾರಿ ದೀದಿ ಯೋಜನೆಯಡಿ ದೆಹಲಿಯ ಮನೆಯೊಡತಿಗೆ 2,500 ರೂಪಾಯಿ ನೀಡಲಾಗುವುದು. ಅಧಿಕಾರಕ್ಕೆ ಬಂದ ಮೊದಲ ದಿನವೇ ಈ ಯೋಜನೆ ಜಾರಿ ಮಾಡಲಾಗುವುದು. ಉಳಿದ ಯೋಜನೆಗಳನ್ನು ಕೆಲವೇ ದಿನಗಳಲ್ಲಿ ಘೋಷಣೆ ಮಾಡಲಾಗುವುದು ಎಂದರು. ಗ್ಯಾರಂಟಿ ಯೋಜನೆ ಕರ್ನಾಟಕದಲ್ಲಿ ಜಾರಿಗೊಳಿಸಿದಾಗ ಸರ್ಕಾರ ದಿವಾಳಿಯಾಗುತ್ತದೆ ಎಂದು ಸ್ವತಃ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೇ ಟೀಕೆ ಮಾಡಿದ್ದರು. ಆದರೆ ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳ ಚುನಾವಣೆಯಲ್ಲಿ ಕರ್ನಾಟಕದ ಗ್ಯಾರಂಟಿಯ ಮಾದರಿ ಯೋಜನೆಗಳನ್ನು ಘೋಷಣೆ ಮಾಡಿದರು. ಈ ಮೂಲಕ ನಮ್ಮ ಗ್ಯಾರಂಟಿಯನ್ನು ನಕಲು ಮಾಡಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಟೀಕಿಸಿದರು.

## ಭಾರತದ ಮೊದಲ ಬುಲೆಟ್ ಟ್ರೈನ್ ಶೀಘ್ರದಲ್ಲೇ ಆರಂಭ: ಪ್ರಧಾನಿ ಮೋದಿ



**ನವದೆಹಲಿ:** ಭಾರತದಲ್ಲಿ ಮೊದಲ ಬುಲೆಟ್ ರೈಲು ಶೀಘ್ರದಲ್ಲೇ ಓಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.

ಇಂದು ದೆಹಲಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಹಲವು ರೈಲು ಯೋಜನೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ತಮ್ಮ ಸರ್ಕಾರದ ಅವಧಿಯಲ್ಲಿ ಭಾರತೀಯ ರೈಲ್ವೆಯಲ್ಲಿ ಮೂಲಸೌಕರ್ಯ ಮತ್ತು ಸೇವೆಯಲ್ಲಿ ಕೈಗೊಂಡ ಗಮನಾರ್ಹ ಬದಲಾವಣೆಗಳನ್ನು ಎತ್ತಿ ತೋರಿಸಿದರು.

ಜಮ್ಮು ಸೇರಿದಂತೆ ದೇಶದ ವಿವಿಧ ರೈಲು ಯೋಜನೆಗಳನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು. ರಾಯಗಡ ರೈಲ್ವೆ ವಿಭಾಗದ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದರು ಮತ್ತು ತೆಲಂಗಾಣದ ಹೊಸ ಚಾರ್ಲಪಲ್ಲಿ ರೈಲ್ವೆ ಟರ್ಮಿನಲ್ ಅನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ತೆಲಂಗಾಣ, ಒಡಿಶಾ ಮತ್ತು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿಗಳು ಹಾಗೂ ಇತರ ಪ್ರಮುಖ ಗಣ್ಯರು ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಿದ್ದರು.


ದೂರದ ಪ್ರಯಾಣವನ್ನು ಕಡಿಮೆ ಸಮಯದಲ್ಲಿ ಪ್ರಯಾಣಿಸುವುದಕ್ಕೆ ಜನರು ಹೆಚ್ಚು ಮನ್ನಣೆ ನೀಡುತ್ತಿರುವಾಗ, ಹೆಚ್ಚಿನ ವೇಗದ ರೈಲು ಸೇವೆಗಳ ಬೇಡಿಕೆಯು ಹೆಚ್ಚುತ್ತಲೇ ಇದೆ ಎಂದು ಪ್ರಧಾನಿ ಮೋದಿ ಹೇಳಿದರು.

ವಂದೇ ಭಾರತ್ ರೈಲುಗಳ ವಿಸ್ತರಣೆಯನ್ನು ಉಲ್ಲೇಖಿಸಿದ ಪ್ರಧಾನಿ ಮೋದಿ, ಅಂತಹ 136ಕ್ಕೂ ಹೆಚ್ಚು ರೈಲುಗಳು ಈಗ ಭಾರತದಲ್ಲಿ 50ಕ್ಕೂ ಹೆಚ್ಚು ಮಾರ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದರು.

ವಂದೇ ಭಾರತ್ ಸ್ಲೀಪರ್ ರೈಲು ಗಂಟೆಗೆ 180 ಕಿಲೋ ಮೀಟರ್ ಗರಿಷ್ಠ ವೇಗವನ್ನು ಸಾಧಿಸಿದ ಇತ್ತೀಚಿನ ಯಶಸ್ವಿ ಪ್ರಯೋಗದ ಬಗ್ಗೆ ಹರ್ಷ ವ್ಯಕ್ತಪಡಿಸಿದ ಪ್ರಧಾನಿ, ಕಳೆದ ದಶಕದಲ್ಲಿ ರೈಲ್ವೆ ಕ್ಷೇತ್ರದಲ್ಲಿ ಭಾರಿ ಬದಲಾವಣೆಗಳಾಗಿದ್ದು, ಇದು ಐತಿಹಾಸಿಕ ಪರಿವರ್ತನೆಯಾಗಿದೆ. ಭಾರತದಲ್ಲಿ ಮೊದಲ ಬುಲೆಟ್ ರೈಲು ಓಡುವ ಸಮಯ ದೂರವಿಲ್ಲ ಎಂದು ಭರವಸೆ ನೀಡಿದರು.

ಮುಂಬೈ–ಅಹಮದಾಬಾದ್ ಹೈಸ್ಪೀಡ್ ರೈಲು ಕಾರಿಡಾರ್ ಕಾಮಗಾರಿ ವೇಗವಾಗಿ ನಡೆಯುತ್ತಿದ್ದು, 2026ರ ವೇಳೆಗೆ ಬುಲೆಟ್ ರೈಲು ಕಾರ್ಯಾಚರಣೆಯನ್ನು ಪ್ರಾರಂಭಿಸುವ ಗುರಿ ಹೊಂದಿದೆ ಎಂದರು.

## ಇಬ್ಬರು ಮಕ್ಕಳನ್ನು ಕೊಂದು ಟೆಕ್ಕಿ ದಂಪತಿ ಆತ್ಮಹತ್ಯೆ



**ಬೆಂಗಳೂರು:** ತಮ್ಮ ಇಬ್ಬರು ಮಕ್ಕಳನ್ನು ಹತ್ಯೆ ಮಾಡಿ ಟೆಕ್ಕಿ ದಂಪತಿ ಆತ್ಮಹತ್ಯೆಗೆ ಶರಣಾದ ಘಟನೆ ಬೆಂಗಳೂರಿನ ಸದಾಶಿವನಗರದ ಆರ್.ಎಂ.ವಿ ಎರಡನೇ ಹಂತದ ಟೆಂಪಲ್ ರಸ್ತೆಯಲ್ಲಿ ನಡೆದಿದೆ.

ಅನೂಪ್ (38), ರಾಖಿ(35), ದಂಪತಿ ತಮ್ಮ ಮಕ್ಕಳಾದ ಅನುಪ್ರಿಯಾ (5) ವರ್ಷ ಮತ್ತು ಪ್ರಿಯಾಂಶ್ (2) ಅವರನ್ನು ಕೊಂದು ತಾವೂ ಆತ್ಮಹತ್ಯೆಗೆ ಶರಣಾಗಿದ್ದಾರೆ. ಅನೂಪ್ ಉತ್ತರ ಪ್ರದೇಶ ಮೂಲದವರಾಗಿದ್ದು ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಕನ್ಸಲ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಇಂದು ಬೆಳಗ್ಗೆ ಮನೆಗೆ ಕೆಲಸದವರು ಬಂದಾಗ ಆತ್ಮಹತ್ಯೆ ಪ್ರಕರಣ ಬೆಳಕಿಗೆ ಬಂದಿದೆ.

ರಾತ್ರಿ ಇಬ್ಬರು ಮಕ್ಕಳನ್ನು ಹತ್ಯೆ ಮಾಡಿದ ಬಳಿಕ ದಂಪತಿ ಮನೆಯಲ್ಲೇ ನೇಣಿಗೆ ಶರಣಾಗಿದ್ದಾರೆ. ಘಟನೆಗೆ ಕಾರಣ ತಿಳಿದು ಬಂದಿಲ್ಲ. ಘಟನಾ ಸ್ಥಳಕ್ಕೆ ಸದಾಶಿವನಗರ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿದ್ದಾರೆ. ಅನೂಪ್ ಮನೆಯಲ್ಲಿ ಮೂರು ಜನ ಕೆಲಸ ಮಾಡುತ್ತಿದ್ದರು. ಅನುಪ್ರಿಯಾಗೆ ಆರೋಗ್ಯ ಸಮಸ್ಯೆ ಇತ್ತು. ಈ ವಿಚಾರಕ್ಕೆ ದಂಪತಿ ಬಹಳ ಬೇಸರದಲ್ಲಿದ್ದರು.

ಇಂದು ಬೆಳಗ್ಗೆ 11 ಗಂಟೆಗೆ ಪಾಂಡಿಚೇರಿಗೆ ಹೋಗಲಿದ್ದೇವೆ. ಬೇಗ ಕೆಲಸಕ್ಕೆ ಬನ್ನಿ ಎಂದು ಕೆಲಸದವರಿಗೆ ಅನೂಪ್ ಹೇಳಿದ್ದರು. ಹೀಗಾಗಿ ಇಂದು ಬೆಳಗ್ಗೆ ಕೆಲಸದವರು ಮನೆಗೆ ಬಂದಿದ್ದಾರೆ. ಭಾನುವಾರ ಸಹ ಪ್ಯಾಕಿಂಗ್ ಮಾಡಲು ಕೆಲಸದವರನ್ನು ಕರೆಸಿಕೊಂಡಿದ್ದರು.

ಮೂವರು ಕೆಲಸಗಾರರ ಪೈಕಿ ಇಬ್ಬರು ಅಡುಗೆಗೆ ನಿಯೋಜನೆಗೊಂಡಿದ್ದರೆ ಒಬ್ಬರು ಮಗು ನೋಡಿಕೊಳ್ಳಲು ಇದ್ದರು. ಮೂವರಿಗೂ ತಿಂಗಳಿಗೆ 15 ಸಾವಿರ ರೂ. ಸಂಬಳ ನೀಡುತ್ತಿದ್ದರು. ಟೆಕ್ಕಿ ಕುಟುಂಬ ಆರ್ಥಿಕವಾಗಿ ಸದೃಢವಾಗಿತ್ತು ಮೊದಲ ಮಗುವಿಗೆ ಮಾನಸಿಕ ತೊಂದರೆ ಇದ್ದ ಕಾರಣ ದಂಪತಿ ಬಹಳ ಕುಗ್ಗಿ ಹೋಗಿದ್ದರು. ನಿನ್ನೆ ರಾತ್ರಿ 10 ಗಂಟೆವರೆಗೂ ದಂಪತಿ ಖುಷಿಯಾಗಿಯೇ ಇದ್ದರು ಎಂದು ಕೆಲಸದಮು ತಿಳಿಸಿದ್ದಾರೆ.

### ಡಾ.ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಬಳಗದ ಕ್ಯಾಲೆಂಡರ್ ಬಿಡುಗಡೆ



ಡಾ.ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಬಳಗದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್, ಸೋಮಣ್ಣ, ಬಿ.ಎಸ್.ರವಿ, ಬಿ.ಎಸ್.ಮಹೇಶ, ಎಸ್.ರೇವಣ್ಣ, ಮಂಜೇಗೌಡ, ರವಿಕುಮಾರ್ ಇನ್ನಿತರರು ಇದ್ದಾರೆ.

### ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು,ಜ.6– ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ 2024–25ನೇ ಸಾಲಿನ ಆಯವ್ಯಯವನ್ನು ತಯಾರಿಸಲು ಮೈಸೂರು ನಗರದ ದೃಷ್ಟಿಯಿಂದ ಸದರಿ ಆಯವ್ಯಯದ ಬಗ್ಗೆ ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆಯಲು ಮೈಸೂರು ಮಹಾನಗರ ಪಾಲಿಕೆ ಪ್ರಾದೇಶಿಕ ಆಯುಕ್ತರು ಹಾಗೂ ಆಡಳಿತಾಧಿಕಾರಿ ಜಿ.ಲಕ್ಷ್ಮಿ ಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ಜ.9ರಂದು ಬೆಳಗ್ಗೆ 11 ಗಂಟೆಗೆ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ಸಮಾಲೋಚನಾ ಸಭೆಯನ್ನು ನಡೆಸಲು ತೀರ್ಮಾನಿಸಲಾಗಿದೆ. ಮೈಸೂರು ನಗರದ ನಾಗರಿಕರು ಮತ್ತು ಸಂಘಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯವಾದ ಸಲಹೆ ಹಾಗೂ ಸೂಚನೆಗಳನ್ನು ನೀಡಬಹುದು ಎಂದು ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗಾಣಿಗ ಸಮಾಜದಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು ಜಿಲ್ಲಾ ಗಾಣಿಗರ ಸಂಘದ ಕಾರ್ಯಕ್ರಮದಲ್ಲಿ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮೈಸೂರು,ಜ.6(ಎಂಟಿವೈ)–ಮೈಸೂರಿನ ದೇವರಾಜ ಮೊಹಲ್ಲಾದ ದಿವಾನ್ಸ್ ರಸ್ತೆಯಲ್ಲಿರುವ ಯಾದವ ಸಮುದಾಯ ಭವನದಲ್ಲಿ ಗಾಣಿಗ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಮುದಾಯದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ. ಹರೀಶ್‌ಗೌಡ ಮಾತನಾಡಿ, ಗಾಣಿಗ ಸಮುದಾಯ ಹಿಂದುಳಿದ ವರ್ಗಗಳಿಗೆ ಸೇರಿದ ಸಮುದಾಯವಾಗಿದ್ದು, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಇನ್ನಷ್ಟು ಪ್ರಗತಿ ಸಾಧಿಸಲು ಗಮನಹರಿಸಬೇಕು. ಸಮುದಾಯದ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವ ಮೂಲಕ ಸಾಧನೆ ಮಾಡಲು ಪ್ರೇರಣೆ ನೀಡಬೇಕು. ಸಮುದಾಯದ ವಿದ್ಯಾರ್ಥಿಗಳು ಸವಾಲುಗಳು ಎದುರಾದಾಗ ಅದನ್ನು ಮೆಟ್ಟಿ ನಿರ್ದಿಷ್ಟ ಗುರಿಯೊಂದಿಗೆ ಸಾಧನೆ ಮಾಡುವತ್ತ ಗಮನ ಕೇಂದ್ರೀಕರಿಸಿ ಪರಿಶ್ರಮದಿಂದ ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು.

ಮಾಜಿ ಮೇಯರ್ ಅನಂತ್ ಮಾತನಾಡಿ, ಗಾಣಿಗ ಸಮುದಾಯಕ್ಕೆ ತನ್ನದೇ ಆದ ಹಿನ್ನೆಲೆ ಇದೆ. ಆರಂಭದಿಂದಲೂ ಗಾಣಿಗ ಸಮುದಾಯ ತನ್ನತನವನ್ನು ಕಾಪಾಡಿಕೊಂಡು ಬರುತ್ತಿದ್ದು, ಸವಾಲುಗಳ ನಡುವೆಯೂ ವಿವಿಧ ಕ್ಷೇತ್ರಗಳಲ್ಲಿ ಸಮುದಾಯದ ಅನೇಕರು ಸಾಧನೆ ಮಾಡಿದ್ದಾರೆ. ಮುಂದಿನ ಪೀಳಿಗೆ ಇನ್ನಷ್ಟು ಸಾಧನೆ ಮಾಡುವ ಮೂಲಕ ಸಮುದಾಯದ ಘನತೆಯನ್ನು ಎತ್ತಿ ಹಿಡಿಯುವತ್ತ ಮುಂದಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಗಾಣಿಗರ ಸಂಘದ ಅಧ್ಯಕ್ಷ ಎಂ.ಸಿ.ಉಮೇಶ್ ವಹಿಸಿದ್ದರು. ನಗರಪಾಲಿಕೆ ಮಾಜಿ ಸದಸ್ಯ ಪ್ರದೀಪ್‌ಕುಮಾರ್ ಹಾಗೂ ಗಾಣಿಗರ ಸಮುದಾಯದ ಮುಖಂಡರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

## ದೇಶ - ವಿದೇಶ

### ವಿಮಾನದ ಟೈರ್ ಸ್ಫೋಟ: ಅದೃಷ್ಟವಶಾತ್ ಪ್ರಯಾಣಿಕರು ಪಾರು



**ಮೆಲ್ಬೋರ್ನ್:** ಮೆಲ್ಬೋರ್ನ್ ವಿಮಾನ ನಿಲ್ದಾಣದಲ್ಲಿ ಭಾರಿ ದುರಂತವೊಂದು ತಪ್ಪಿದೆ. ಸುಮಾರು 289 ಮಂದಿ ಪ್ರಯಾಣಿಕರನ್ನು ಹೊತ್ತು ಅಬುಧಾಬಿಗೆ ತೆರಳುತ್ತಿದ್ದ ಎತಿಹಾದ್ ಏರ್‌ವೇಸ್ ವಿಮಾನದ ಎರಡು ಟೈರ್‌ಗಳು ಸ್ಫೋಟಗೊಂಡ ಹಿನ್ನೆಲೆಯಲ್ಲಿ ಟೇಕಾಫ್ ಆಗದಂತೆ ನಿಲ್ಲಿಸಲಾಗಿದೆ. ಭಾನುವಾರ ರಾತ್ರಿ ಅಬುಧಾಬಿಗೆ ಹೋಗುತ್ತಿದ್ದ EY 461 ವಿಮಾನದ ಟೈರ್‌ಗಳು ಟೇಕ್‌ಆಫ್ ಆಗುವ ಕೆಲವೇ ಕ್ಷಣಗಳ ಮೊದಲು ಸ್ಫೋಟಗೊಂಡಿದ್ದವು. ಮೆಲ್ಬೋರ್ನ್ ವಿಮಾನ ನಿಲ್ದಾಣದಲ್ಲಿ ತುರ್ತು ಸೇವೆಗಳು ಬೋಯಿಂಗ್ 787 ವಿಮಾನವನ್ನು ಸುತ್ತುವರೆದಿದ್ದು ಸುರಕ್ಷತಾ ಕ್ರಮವಾಗಿ ಲ್ಯಾಂಡಿಂಗ್ ಗೇರ್ ಮೇಲೆ ರಕ್ಷಣಾತ್ಮಕ ಫೋಮ್ ಅನ್ನು ಇರಿಸಿದವು. ಎಲ್ಲಾ 289 ಪ್ರಯಾಣಿಕರನ್ನು ಸ್ಥಳಾಂತರಿಸಲಾಗಿದ್ದು ಅವರನ್ನು ಟರ್ಮಿನಲ್‌ಗೆ ಹಿಂತಿರುಗಿಸಲಾಯಿತು ಎಂದು ಏರ್‌ಲೈನ್ ದೃಢಪಡಿಸಿದೆ. ವಿಮಾನದ ಟೈರ್‌ಗಳಿಗೆ ಹಾನಿಯಾಗಿರುವ ಕಾರಣ ರನ್‌ವೇಯಿಂದ ವಿಮಾನವನ್ನು ತೆಗೆಯಲು ಸಾಧ್ಯವಾಗುತ್ತಿಲ್ಲ. ಪ್ರಯಾಣಿಕರನ್ನು ಸುರಕ್ಷಿತವಾಗಿ ಇಳಿಸಲಾಗಿದೆ. ನಮ್ಮ ತಂಡಗಳು ಸಾಧ್ಯವಾದಷ್ಟು ಬೇಗ ಅವರ ಮುಂದಿನ ಪ್ರಯಾಣವನ್ನು ಮುಂದುವರಿಸಲು ಅನುವು ಮಾಡಿಕೊಡಲು ಕೆಲಸ ಮಾಡುತ್ತಿವೆ.

### ವಿಧಾನಸಭೆಯಲ್ಲಿ ರಾಷ್ಟ್ರಗೀತೆಗೆ ಅವಮಾನ; ಹೊರನಡೆದ ತಮಿಳುನಾಡು ರಾಜ್ಯಪಾಲರು

**ಚೆನ್ನೈ:** ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಹಾಗೂ ಡಿಎಂಕೆ ಸರ್ಕಾರದ ನಡುವಿನ ಹಗ್ಗಜಗ್ಗಾಟ ಮತ್ತೆ ಮುಂದುವರೆದಿದೆ. ಇಂದು ಪ್ರಾರಂಭವಾದ ತಮಿಳುನಾಡು ವಿಧಾನಸಭೆಯ ಚಳಿಗಾಲದ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಬೇಕಿದ್ದ ರಾಜ್ಯಪಾಲ ಆರ್.ಎನ್.ರವಿ ಅವರು ಅಧಿವೇಶನದಲ್ಲಿ ರಾಷ್ಟ್ರಗೀತೆಗೆ ಅವಮಾನವಾಗಿದೆ ಎಂದು ತಮ್ಮ ಭಾಷಣ ಮಾಡದೆ ಅರ್ಧಕ್ಕೆ ವಾಪಸ್ ಆಗಿದ್ದಾರೆ. ಇದೇ ವೇಳೆ ವಿರೋಧ ಪಕ್ಷಗಳು ಸಭೆಯನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿವೆ.

ರಾಜಭವನದ ಕಚೇರಿಯ ಪ್ರಕಟಣೆಯ ಪ್ರಕಾರ, ರಾಜ್ಯಪಾಲರು ವಿಧಾನಸಭೆಗೆ ಆಗಮಿಸಿದ ನಂತರ ಸಾಂಪ್ರದಾಯಿಕವಾಗಿ ರಾಷ್ಟ್ರಗೀತೆ ನುಡಿಸಲಾಗುತ್ತದೆ. ಆದರೆ ಇಲ್ಲಿ ರಾಷ್ಟ್ರಗೀತೆಯ ಬದಲಿಗೆ ರಾಜ್ಯಗೀತೆ 'ತಮಿಳು ತಾಯಿ ವಜ್ತು' ಅನ್ನು ಮಾತ್ರವೇ ನುಡಿಸಲಾಗುತ್ತದೆ. ಇದಕ್ಕೆ ಪ್ರತಿಭಟಿಸಿ ವಿಧಾನಸಭೆಯಿಂದ ಹೊರ ನಡೆದರು ಎಂದು ಹೇಳಿದೆ. ರಾಷ್ಟ್ರಗೀತೆಯನ್ನು ಹಾಡಲು ಮುಖ್ಯಮಂತ್ರಿಗಳು ಹಾಗೂ ವಿಧಾನಸಭೆಯ ಸ್ಪೀಕರ್‌ಗೂ ರಾಜ್ಯಪಾಲರು ಸೂಚಿಸಿದರು. ಆದರೂ ನುಡಿಸಲಿಲ್ಲ ಎಂದು ರಾಜ್ಯಪಾಲರು ತೀವ್ರ ದುಃಖದಿಂದ ಸದನದಿಂದ ನಿರ್ಗಮಿಸಿದ್ದಾರೆ. ಸಂವಿಧಾನ, ರಾಷ್ಟ್ರಗೀತೆಗೆ ಇಂತಹ ನಿರ್ಲಜ್ಜ ಅಗೌರವ ಸರಿಯಲ್ಲ ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

### ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೋ ರಾಜೀನಾಮೆ



**ಒಟ್ಟಾವಾ:** ಖಲಿಸ್ತಾನಿ ಉಗ್ರ ಸಂಘಟನೆಯ ವಿಚಾರದಲ್ಲಿ ಭಾರತದೊಂದಿಗೆ ಪದೇ ಪದೇ ಕ್ಯಾತೆ ತೆಗೆಯುತ್ತಿದ್ದ ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೋ ಇಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಸ್ಥಳೀಯ ಕಾಲಮಾನ ಬೆಳಗ್ಗೆ ರೈಡೋ ಕಾಟೇಜ್ ನಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ರಾಜೀನಾಮೆ ಘೋಷಿಸಿದ್ದಾರೆ ಅಲ್ಲದೇ ಗವರ್ನರ್ ಜನರಲ್ ಅವರಿಗೆ ಸಂಸತ್ತನ್ನು ಮಾ.24ರ ವರೆಗೆ ಮುಂದೂಡುವಂತೆ ವಿನಂತಿಸಿದ್ದಾರೆ ಎಂದು ವರದಿಯಾಗಿದೆ.

ಪಕ್ಷದೊಳಗಿನ ಆಂತರಿಕ ಕದನಗಳಿಂದಾಗಿ ರಾಜೀನಾಮೆ ನೀಡುವ ನಿರ್ಧಾರ ಕೈಗೊಳ್ಳಲಾಯಿತು. ಕನ್ಸರ್ವೇಟಿವ್ ಪಕ್ಷದ ಮುಖ್ಯಸ್ಥ ಪಿಯರ್ ಪೊಯ್ಲಿವ್ರೆ ತಮ್ಮ ಉತ್ತರಾಧಿಕಾರಿಯಾಗಲು ಉತ್ಸಾಹಿಯಾಗಿದ್ದಾರೆ. ಆದ್ರೆ ಕೆನಡಾವನ್ನು ಮುನ್ನಡೆಸಲು ಆತ ಸರಿಯಾದ ವ್ಯಕ್ತಿಯಲ್ಲ ಎಂದು ಜಸ್ಟಿನ್ ಟ್ರುಡೋ ಹೇಳಿದ್ದಾರೆ.

ಟ್ರುಡೋ ಅವರು 2013 ರಲ್ಲಿ ಲಿಬರಲ್ ನಾಯಕರಾಗಿ ಅಧಿಕಾರ ವಹಿಸಿಕೊಂಡರು. ಅಕ್ಟೋಬರ್ ಅಂತ್ಯದಲ್ಲಿ ಕೆನಡಾದಲ್ಲಿ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ಲಿಬರಲ್ ಪಕ್ಷ ಹೀನಾಯವಾಗಿ ಸೋಲಲಿದೆ ಎಂದು ಸಮೀಕ್ಷೆಗಳು ಈಗಾಗಲೇ ಭವಿಷ್ಯ ನುಡಿದಿವೆ. ಇತ್ತೀಚಿನ ಚುನಾವಣೆಗಳಲ್ಲಿ ಲಿಬರಲ್ ಪಕ್ಷದ ಕಳಪೆ ಸಾಧನೆಗೆ ಟ್ರುಡೋ ಅವರ ನಾಯಕತ್ವವೇ ಕಾರಣ ಎಂದು ಸದಸ್ಯರು ಬಹಿರಂಗವಾಗಿಯೇ ಹೇಳಿದ್ದರು.

### ತೀವ್ರ ಚಳಿಯಿಂದ ಉಸಿರುಗಟ್ಟಿ ಒಂದೇ ಕುಟುಂಬದ ಐವರು ಸಾವು

**ಶ್ರೀನಗರ:** ತೀವ್ರ ಚಳಿಯಿಂದ ಮನೆಯಲ್ಲಿಯೇ ಉಸಿರುಗಟ್ಟಿ ಒಂದೇ ಕುಟುಂಬದ ಐವರು ಮೃತಪಟ್ಟಿರುವ ಘಟನೆ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ ಸಂಭವಿಸಿದೆ.

ಬಾರಾಮುಲ್ಲಾ ಜಿಲ್ಲೆಯ ಉರಿಯಿಂದ ಶ್ರೀನಗರ ಜಿಲ್ಲೆಯ ಪಂದ್ರಾಥಾನ್‌ಗೆ ಬಂದಿದ್ದ ದಂಪತಿ ಮತ್ತು ಅವರ 3 ಮಕ್ಕಳು ಸೇರಿದಂತೆ ಒಂದೇ ಕುಟುಂಬದ 5 ಸದಸ್ಯರು ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏಜಾಜ್ ಅಹ್ಮದ್ ಭಟ್ (38), ಅವರ ಪತ್ನಿ ಸಲೀಮಾ (32), ಮತ್ತು ಅವರ ಮೂವರು ಮಕ್ಕಳು–ಆರೀಬ್ (3), ಹವ್ಜಾ (18 ತಿಂಗಳು), ಮತ್ತು 1 ತಿಂಗಳ ಮಗು ಎಂದು ಗುರುತಿಸಲಾಗಿದೆ. ಮೃತರ ನಿಧನಕ್ಕೆ ಮುಖ್ಯಮಂತ್ರಿ ಓಮರ್ ಅಬ್ದುಲ್ ಸಂತಾಪ ಸೂಚಿಸಿದ್ದಾರೆ. ಇಂತಹ ದುರಂತ ಘಟನೆಗಳನ್ನು ತಡೆಗಟ್ಟಲು ಬಿಸಿ ಉಪಕರಣಗಳ ಸುರಕ್ಷಿತ ಬಳಕೆಯ ಕುರಿತು ಸರ್ಕಾರ ನೀಡಿರುವ ಸಲಹೆಗಳನ್ನು ಪಾಲಿಸುವ ಮಹತ್ವವನ್ನು ಒತ್ತಿ ಹೇಳಿದರು. ಚಳಿಗಾಲದ ವಿಪರೀತ ಚಳಿಯಲ್ಲಿ, ಜನರು ಕೆಲವೊಮ್ಮೆ ತಮ್ಮ ಕೊಠಡಿಗಳಲ್ಲಿ ಎಲ್‌ಪಿಜಿ ಹೀಟರ್‌ಗಳನ್ನು ವಿವೇಚನೆಯಿಲ್ಲದೆ ಬಳಸುತ್ತಾರೆ. ಈ ಅನಿಲ ಶಾಖೋತ್ಪಾದಕಗಳು ಕಾರ್ಬನ್ ಮಾನಾಕ್ಸೈಡ್ ಅನ್ನು ಉತ್ಪಾದಿಸುತ್ತವೆ. ಹಾಗಾಗಿ ಸಂಪೂರ್ಣವಾಗಿ ಮುಚ್ಚಿದ ಕೋಣೆಯಲ್ಲಿ ತಾಜಾ ಗಾಳಿ ಪ್ರವೇಶಿಸದ ಕಾರಣ ಅಂತಹ ಉಪಕರಣಗಳು ಅಪಾಯಕಾರಿಯಾಗುತ್ತವೆ ಎಂದು ಹೇಳಿದ್ದಾರೆ.

### ಪಾಕಿಸ್ತಾನದ ಸೈನಿಕರಿದ್ದ ಬಸ್ ಮೇಲೆ ಬಾಂಬ್ ದಾಳಿ; ನಾಲ್ವರು ಸಾವು



**ಕರಾಚಿ:** ಪಾಕಿಸ್ತಾನದ ಬಲೂಚಿಸ್ತಾನದ ಟರ್ಬತ್‌ನಲ್ಲಿ ಪಾಕಿಸ್ತಾನಿ ಸೈನಿಕರನ್ನು ಕರೆದೊಯ್ಯುತ್ತಿದ್ದ ಮಿಲಿಟರಿ ವಾಹನದ ಮೇಲೆ ಬಾಂಬ್ ಹಾಕಲಾಗಿದೆ. ಈ ದುರಂತ ನಡೆಯುವ ವೇಳೆ ಆ ವಾಹನದಲ್ಲಿ 48 ಸೈನಿಕರಿದ್ದರು. ಅವರಲ್ಲಿ ನಾಲ್ವರು ಬಾಂಬ್ ದಾಳಿಯಲ್ಲಿ ಸುಟ್ಟು ಕರಕಲಾಗಿದ್ದಾರೆ. ಉಳಿದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಈ ಘಟನೆ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಪಾಕಿಸ್ತಾನಿ ಸೈನಿಕರು ಮತ್ತು ಆಂಬುಲೆನ್ಸ್‌ಗಳು ಸ್ಥಳಕ್ಕೆ ಧಾವಿಸಿವೆ. ಟರ್ಬತ್ ಬಳಿಕ ಹೈವೇಯಲ್ಲೇ ಮಿಲಿಟರಿ ಬಸ್ ಮೇಲೆ ಬಾಂಬ್ ದಾಳಿ ನಡೆಸಲಾಗಿದೆ. ಇದರ ಪರಿಣಾಮವಾಗಿ ವಾಹನಕ್ಕೆ ಬೆಂಕಿ ಹೊತ್ತಿಕೊಂಡು ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ.

ಪೊಲೀಸರು ಮತ್ತು ಭದ್ರತಾ ಪಡೆಗಳು ಪ್ರದೇಶವನ್ನು ಸುತ್ತುವರಿದಿವೆ. ಗಾಯಗೊಂಡವರಲ್ಲಿ ಎಸ್‌ಎಸ್‌ಪಿ ಗಂಭೀರ ಅಪರಾಧ ವಿಭಾಗದ ಜೊಹೈಬ್ ಮೊಹ್ಸಿನ್ ಮತ್ತು ಕುಟುಂಬದ 6 ಸದಸ್ಯರು ಬಾಂಬ್ ಸ್ಫೋಟದ ಸಮಯದಲ್ಲಿ ಆ ಮಾರ್ಗದಲ್ಲಿ ಹಾದುಹೋಗುತ್ತಿದ್ದರು. ಈ ಬಾಂಬ್ ದಾಳಿ ಹಿಂದೆ ನಿಷೇಧಿತ ಬಲೂಚ್ ಲಿಬರೇಶನ್ ಆರ್ಮಿ ಕೈವಾಡವಿರುವ ಬಗ್ಗೆ ಅನುಮಾನ ವ್ಯಕ್ತವಾಗಿದೆ.

## ವೀರ ಯೋಧ ದಿವಿನ್ ಮನೆಗೆ ಶಾಸಕ ಪೊನ್ನಣ್ಣ ಭೇಟಿ



ವೀರ ಯೋಧ ದಿವಿನ್ ಮನೆಗೆ ಭೇಟಿ ನೀಡಿದ ಶಾಸಕ ಎ.ಎಸ್.ಪೊನ್ನಣ್ಣ ದಿವಿನ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಮಡಿಕೇರಿ, ಜ.6–ಜಮ್ಮು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಸೇನಾ ವಾಹನ ಕಂದಕಕ್ಕೆ ಉರುಳಿ ಬಿದ್ದು ಹುತಾತ್ಮರಾದ ಆಲೂರು ಸಿದ್ದಾಪುರದ ವೀರ ಯೋಧ ದಿವಿನ್ ಮನೆಗೆ ಶಾಸಕ ಎ.ಎಸ್.ಪೊನ್ನಣ್ಣ ಭೇಟಿ ನೀಡಿ, ದಿವಿನ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ನಂತರ ಶಾಸಕರು ಮೃತ ಯೋಧ ದಿವಿನ್ ತಾಯಿ ಜಲಜಾಕ್ಷಿ ಅವರಿಗೆ ಸಾಂತ್ವನ ಹೇಳಿದರು. ಯೋಧ ದಿವಿನ್ ಪುತ್ಥಳಿಯನ್ನು ಆಲೂರು ಸಿದ್ದಾಪುರ ಅಥವಾ ಕುಶಾಲನಗರದಲ್ಲಿ ಸ್ಥಾಪಿಸುವಂತೆ ತಾಯಿ ಜಲಜಾಕ್ಷಿ ಶಾಸಕರಿಗೆ ಮನವಿ ಮಾಡಿದರು.

ಈ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ವಹಿಸುವುದಾಗಿ ಶಾಸಕರು ಭರವಸೆ ನೀಡಿದರು. ಜೊತೆಗೆ ಕುಟುಂಬಕ್ಕೆ ಸರ್ಕಾರದಿಂದ ಅಗತ್ಯ ಸೌಲಭ್ಯ ಕೊಡಿಸುವುದಾಗಿ ತಿಳಿಸಿದರು.

ಈ ಸಂದರ್ಭ ಕಾಂಗ್ರೆಸ್ ಮುಖಂಡರಾದ ವಿ.ಪಿ.ಶಶಿಧರ್, ಕೆ.ಪಿ.ಚಂದ್ರಕಲಾ, ಬಿ.ಬಿ.ಸತೀಶ್, ಮಿಥುನ್‌ಗೌಡ, ಸೂರಜ್ ಹೊಸೂರು ಮತ್ತಿತರರು ಹಾಜರಿದ್ದರು.

## ಕುದ್ರೆಪಾಯದಲ್ಲಿ ಕಲೇರಿ ವಿಷ್ಣುಮೂರ್ತಿ ಒತ್ತೆಕೋಲ



ಚೆಂಬು ಗ್ರಾಮದ ಕುದ್ರೆಪಾಯದಲ್ಲಿ ಕಲೇರಿ ವಿಷ್ಣುಮೂರ್ತಿ ದೈವದ ಒತ್ತೆಕೋಲ ನಡೆಯಿತು.

**ಮಡಿಕೇರಿ:** ಚೆಂಬು ಗ್ರಾಮದ ಕುದ್ರೆಪಾಯದಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ನಡೆಯುವ ಕಲೇರಿ ಶ್ರೀ ಮಹಾ ವಿಷ್ಣು ಮೂರ್ತಿ ದೈವದ ಒತ್ತೆಕೋಲ ಭಕ್ತಿಯಿಂದ ಜರುಗಿತು.

ಗುಳಿಗ ದೈವದ ಕೋಲ, ಅಗ್ನಿ ಪ್ರವೇಶ, ಮಾರಿಕ್ಕಳ ಪ್ರವೇಶ, ಶ್ರೀ ರಕ್ತೇಶ್ವರಿ ಅಮ್ಮ, ಪಂಜುರ್ಲಿ, ಪಾಷಾಣ ಮೂರ್ತಿ ದೈವಗಳ ತಂಬಿಲ, ಹರಿಕೆ ಪ್ರಸಾದ ವಿತರಣೆ ಮತ್ತು ಅನ್ನಸಂತರ್ಪಣೆ ನಡೆಯಿತು. ಹೆಚ್ಚಿನ ಭಕ್ತರು ಒತ್ತೆಕೋಲಕ್ಕೆ ಸಾಕ್ಷಿಯಾದರು. ಇದೇ ವೇಳೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ನೃತ್ಯ ಪ್ರದರ್ಶನ ನಡೆಯಿತು.

## ಮಸೀದಿಯಲ್ಲಿ ಕಳ್ಳತನ ಮಾಡುತ್ತಿದ್ದವನ ಬಂಧನ



ಶೋಯಬ್

**ಕುಶಾಲನಗರ:** ಪಟ್ಟಣ ಠಾಣೆ ವ್ಯಾಪ್ತಿಯ ಇಂದಿರಾ ಬಡಾವಣೆಯ ಮಸೀದಿ ಹುಂಡಿ, ಧ್ವನಿ ವರ್ಧಕಕ್ಕೆ ಅಳವಡಿಸಿದ್ದ ಉಪಕರಣವನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ವಿರಾಜಪೇಟೆ ಸುಣ್ಣದ ಬೀದಿಯ ನಿವಾಸಿ ಮಹಮ್ಮದ್ ಶೋಯಬ್ (32) ಬಂಧಿತ ಆರೋಪಿ. ಈತ ಡಿ.19ರಂದು ಮಸೀದಿಯ ಹುಂಡಿಯಲ್ಲಿದ್ದ 3000 ರೂ., ಧ್ವನಿವರ್ಧಕಕ್ಕೆ ಅಳವಡಿಸಿದ್ದ ಆಂಪ್ಲಿಫೈರ್ ಮತ್ತು ಅದರ ಸಲಕಲರಣೆಗಳನ್ನು ಕಳ್ಳತನ ಮಾಡಿದ್ದ. ಈತ ಮಡಿಕೇರಿ ಹಾಗೂ ಪಿರಿಯಾಪಟ್ಟಣದ ಮಸೀದಿಗಳಲ್ಲಿ 2 ಆಂಪ್ಲಿಫೈರ್, ಡಿಜಿಟಲ್ ಎಕೋ ರಿವರ್ ಮಿಕ್ಸರ್ ಆ್ಯಂಡ್ ಮಾನಿಟರ್ ಹಾಗೂ ಮಡಿಕೇರಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಮಸೀದಿಯೊಂದರಿಂದ ಒಂದು ಆಂಪ್ಲಿಫೈರ್, ಸೌಂಡ್ ಮಿಕ್ಸರ್ ಉಪಕರಣಗಳನ್ನು ಕಳ್ಳತನ ಮಾಡಿರುವುದು ತನಿಖೆಯಲ್ಲಿ ತಿಳಿದು ಬಂದಿದೆ. 2 ಮೊಬೈಲ್ ಹಾಗೂ ನಗದನ್ನು ವಶಪಡಿಕೊಂಡಿರುವ ಕುಶಾಲನಗರ ಠಾಣೆ ಪೊಲೀಸರು, ಆರೋಪಿಯನ್ನು ನ್ಯಾಯಾಲಯ ವಶಕ್ಕೆ ನೀಡಿದ್ದಾರೆ.

ಕಟ್ಟೆಮಾಡು ಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ವಸ್ತ್ರಸಂಹಿತೆ ವಿವಾದ ಹಿನ್ನೆಲೆ

# ದೇವಾಲಯ ಸಮಿತಿಯಿಂದ ಡಿಸಿಗೆ ಸಭೆ ನಿರ್ಣಯದ ವರದಿ ಸಲ್ಲಿಕೆ

- ವಸ್ತ್ರಸಂಹಿತೆ ವಿವಾದದಲ್ಲಿ ಮೂಡದ ಒಮ್ಮತ
- ಸಮಸ್ಯೆ ಪರಿಹಾರಕ್ಕೆ ಫೆ.10ರವರೆಗೆ ಕಾಲಾವಕಾಶ



ಡಿಸಿ ವೆಂಕಟ್ ರಾಜಾ ಅವರಿಗೆ ಸಭೆ ನಿರ್ಣಯ ವರದಿ ಸಲ್ಲಿಸಲು ಆಗಮಿಸಿದ್ದ ಮೃತ್ಯುಂಜಯ ದೇವಾಲಯ ಸಮಿತಿ ಪ್ರಮುಖರು.

ಮಡಿಕೇರಿ, ಜ.6–ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ಸಂದರ್ಭ ವಸ್ತ್ರಸಂಹಿತೆ ಕುರಿತು ಉಂಟಾಗಿದ್ದ ವಿವಾದಕ್ಕೆ ಸಂಬಂಧಿಸಿದಂತೆ ನಡೆದ ದೇವಾಲಯ ಸಮಿತಿ ಸಭೆಯ ನಿರ್ಣಯಗಳ ವರದಿಯನ್ನು ಮೃತ್ಯುಂಜಯ ದೇವಾಲಯ ಸಮಿತಿಯ 7 ಪ್ರಮುಖರು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರಿಗೆ ಸೋಮವಾರ ಸಲ್ಲಿಸಿದರು.

ಜಿಲ್ಲಾಡಳಿತ ಸೂಚನೆ ಮೇರೆಗೆ ಭಾನುವಾರ ಮರಗೋಡು ವಿಎಸ್‌ಎಸ್‌ಎನ್ ಸಭಾಂಗಣದಲ್ಲಿ ಸಭೆ ನಡೆಸಿದ್ದ ಮೃತ್ಯುಂಜಯ ದೇವಾಲಯ ಸಮಿತಿ ಪ್ರಮುಖರು ಕೆಲ ನಿರ್ಣಯಗಳನ್ನು ಅಂಗೀಕರಿಸಿ ಸಭೆ ನಡಾವಳಿಗಳನ್ನು ಜಿಲ್ಲಾಧಿಕಾರಿಗೆ ಸಲ್ಲಿಸಿ, ಸಭೆಯಲ್ಲಿ ವಸ್ತಸಂಹಿತೆ ಕುರಿತು ಒಮ್ಮತ ಮೂಡದ ಬಗ್ಗೆ ವಿವರಿಸಿದರು.

ಈ ವೇಳೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ, ದೇವಾಲಯ ಸಮಿತಿ ಮಾತ್ರವಲ್ಲದೇ ಇಡೀ ಊರಿನ ಗ್ರಾಮಸ್ಥರನ್ನು ಒಳಗೊಂಡು ಸಭೆ ನಡೆಸಿ ನಿರ್ಧಾರಕ್ಕೆ ಬರುವಂತೆ ಸಲಹೆ ನೀಡಿದರು.

**ಹೆಚ್ಚುವರಿ ಕಾಲಾವಕಾಶ:** ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ, ಅಲ್ಪ ಅವಧಿಯಲ್ಲಿ ಸಭೆ ಸೇರಿ ಸೂಕ್ತ ನಿರ್ಧಾರ ಪ್ರಕಟಿಸಲು ಸಾಧ್ಯವಾಗದಿರುವ ಬಗ್ಗೆ ದೇವಾಲಯ ಸಮಿತಿ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿದೆ. ಮಾತ್ರವಲ್ಲದೇ, ಮತ್ತೊಮ್ಮೆ ಸಭೆ ನಡೆಸಿ ತೀರ್ಮಾನಿಸಲು ಫೆ.10ರವರೆಗೆ ಕಾಲಾವಕಾಶ ಕೋರಿದ್ದಾರೆ. ಆದ ಕಾರಣ ಶ್ರೀ ಮೃತ್ಯುಂಜಯ ದೇವಾಲಯ ಸಮಿತಿ ಕೋರಿಕೆ ಮೇರೆಗೆ ಹಾಗೂ ಸಮಸ್ಯೆ ಪರಿಹಾರಕ್ಕೆ ಹೆಚ್ಚುವರಿ ಕಾಲಾವಕಾಶ ನೀಡಲು ಜಿಲ್ಲಾಡಳಿತದಿಂದ ಸಮ್ಮತಿ ಸೂಚಿಸಲಾಗಿದೆ ಎಂದು ಹೇಳಿದರು.

ಈಗಾಗಲೇ ಕಟ್ಟೆಮಾಡು ವ್ಯಾಪ್ತಿಯಲ್ಲಿ ಜಾರಿಗೊಳಿಸಲಾಗಿರುವ ನಿಷೇಧಾಜ್ಞೆ ಕುರಿತು ಪೊಲೀಸ್ ಇಲಾಖೆ ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾಹಿತಿ ನೀಡಿದರು.

ಈ ಸಂದರ್ಭ ದೇವಾಲಯ ಸಮಿತಿ ಅಧ್ಯಕ್ಷ ಕಟ್ಟೆಮನೆ ಶಶಿ ಜನಾರ್ಧನ್, ಕಾರ್ಯದರ್ಶಿ ತೋರೇರ, ಕಾಶಿ ಕಾವೇರಪ್ಪ, ಪದಾಧಿಕಾರಿಗಳಾದ ಅಪ್ಪೆಯಂಡ್ರ ಮಣಿ ಮುತ್ತಪ್ಪ, ಪಿ.ಎಂ.ಬಾಲ, ಬಾಲಕೃಷ್ಣ, ಪುರುಷೋತ್ತಮ, ಎಂ.ಟಿ.ದೇವಪ್ಪ ಹಾಜರಿದ್ದರು.

**ಶಾಂತಿಸಭೆ:** ಹಿಂದೆ ಜಿಲ್ಲಾಡಳಿತ ನಡೆಸಿದ್ದ ಶಾಂತಿ ಸಭೆಯಲ್ಲಿ ಶ್ರೀ ಮೃತ್ಯುಂಜಯ ದೇವಾಲಯ ಸಮಿತಿ ಮತ್ತು ಎರಡೂ ಜನಾಂಗಗಳ ಪ್ರಮುಖರು ಪಾಲ್ಗೊಂಡು ಚರ್ಚಿಸಿದ್ದರು. ಈ ವೇಳೆ ದೇವಾಲಯ ನಿರ್ಮಾಣ ಸಂದರ್ಭ ಅಳವಡಿಸಿಕೊಂಡ ಬೈಲಾ ನಿಯಮಗಳ ಕುರಿತು ದೇವಾಲಯ ಆಡಳಿತ ಜಿಲ್ಲಾಧಿಕಾರಿ ನೇತೃತ್ವದಲ್ಲಿ ನಡೆದ ಶಾಂತಿಸಭೆ ಗಮನಕ್ಕೆ ತಂದಿದ್ದರು. ಇದೇ ವೇಳೆ ಸಮಸ್ಯೆ ಇತ್ಯರ್ಥಕ್ಕೆ 1 ವಾರ ಕಾಲಾವಕಾಶ ನೀಡುವಂತೆ ದೇವಾಲಯ ಸಮಿತಿ ಕೋರಿದ್ದರು. ಈ ಹಿನ್ನೆಲೆಯಲ್ಲಿ ಜ.6ರವರೆಗೆ ಕಾಲಾವಕಾಶ ನೀಡಲಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

## ಹತ್ಯೆ ಆರೋಪಿಗೆ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ಸಿಪಿಐ(ಎಂ) ಪ್ರತಿಭಟನೆ




ಚೆಂಬೆಬೆಳ್ಳೂರಲ್ಲಿ ಕೂಲಿ ಕಾರ್ಮಿಕ ಹತ್ಯೆಗೈದ ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಆಗ್ರಹಿಸಿ ಸಿಪಿಐ(ಎಂ) ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜ.6–ವಿರಾಜಪೇಟೆ ಬಳಿಯ ಚೆಂಬೆಬೆಳ್ಳೂರು ಗ್ರಾಮದಲ್ಲಿ ಕೂಲಿ ಕಾರ್ಮಿಕ ಪಣಿ ಎರವರ ಪೊನ್ನುನನ್ನು ಗುಂಡಿಕ್ಕಿ ಹತ್ಯೆಗೈದ ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು. ಮೃತ ಕಾರ್ಮಿಕನ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಬೇಕೆಂದು ಆಗ್ರಹಿಸಿ ಸಿಪಿಐ(ಎಂ) ಪಕ್ಷದ ವತಿಯಿಂದ ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಎದುರು ಸಮಾವೇಶಗೊಂಡ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು, ತೋಟದ ಕೂಲಿ ಕಾರ್ಮಿಕ ಪಣಿ ಎರವರ ಪೊನ್ನು ಎಂಬಾತನ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿರುವುದು ಅಮಾನುಷ ಕೃತ್ಯ. ಪ್ರಕರಣದ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಸಂತ್ರಸ್ತ ಕುಟುಂಬಕ್ಕೆ ಜಿಲ್ಲಾಡಳಿತ ಉದ್ಯೋಗ ಸೇರಿದಂತೆ ಎಲ್ಲಾ ಸೌಲಭ್ಯ ಕಲ್ಪಿಸಬೇಕು. ಆದಿವಾಸಿ ಕುಟುಂಬಗಳಿಗೆ ಸೂಕ್ತ ರಕ್ಷಣೆ ಹಾಗೂ ನಿವೇಶನ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಘೋಷಣೆ ಕೂಗಿದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಹೆಚ್.ಬಿ. ರಮೇಶ್ ಮಾತನಾಡಿ, ಚೆಂಬೆಬೆಳ್ಳೂರು ಗ್ರಾಮದಲ್ಲಿ ಕೂಲಿ ಕಾರ್ಮಿಕ ಪಣಿ ಎರವರ ಪೊನ್ನುವಿನ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಿರುವುದು ಖಂಡನೀಯ. ಇಂತಹ ಘಟನೆಗಳು ಜಿಲ್ಲೆಯಲ್ಲಿ ಮತ್ತೆ ಮರುಕಳಿಸಬಾರದು. ಮೃತ ಪೊನ್ನು ಅವರ ಪತ್ನಿಗೆ ಸರ್ಕಾರಿ ಉದ್ಯೋಗ ಸೇರಿದಂತೆ ಎಲ್ಲಾ ಸೌಲಭ್ಯ ಕಲ್ಪಿಸಬೇಕು. ಜಿಲ್ಲಾಡಳಿತ ಮತ್ತು ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಪಿ.ಆರ್.ಭರತ್, ಎನ್.ಡಿ. ಕುಟ್ಟಪ್ಪ, ಎ.ಸಿ.ಸಾಬು, ಪದ್ಮಿನಿ ಶ್ರೀಧರ್ ಮತ್ತಿತರರು ಪಾಲ್ಗೊಂಡಿದ್ದರು.

## ಬೊಳ್ತಂಡ ಸಿ.ಜಸ್ಮಿತಾಗೆ ಚಿನ್ನ ಪದಕ




ಚಿನ್ನ ಪದಕ ಪಡೆದ ಬಲಂಬೇರಿ ಗ್ರಾಮದ ಬೊಳ್ತಂಡ ಸಿ.ಜಸ್ಮಿತಾ.

ಮಡಿಕೇರಿ, ಜ.6–ಅಖಿಲ ಭಾರತ ಟೇಕ್ವಾನ್–ಡೋ ಅಸೋಸಿಯೇಷನ್ ಆಶ್ರಯದಲ್ಲಿ ನಡೆದ 27ನೇ ಎಐಟಿಎ ರಾಷ್ಟ್ರೀಯ ಐಟಿಎಫ್ ಟೇಕ್ವಾನ್–ಡೋ ಚಾಂಪಿಯನ್‌ಶಿಪ್‌ನಲ್ಲಿ ಮೂರ್ನಾಡು ಸಮೀಪದ ಬಲಂಬೇರಿ ಗ್ರಾಮದ ಬೊಳ್ತಂಡ ಸಿ.ಜಸ್ಮಿತಾ ಚಿನ್ನ ಹಾಗೂ ಕಂಚಿನ ಪದಕ ಪಡೆದಿದ್ದಾರೆ.

ಇತ್ತೀಚೆಗೆ ನವದೆಹಲಿಯ ರಾಜ್‌ಘಾಟ್‌ನ ಇಂದಿರಾ ಗಾಂಧಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಸ್ಟೇಡಿಯಂನಲ್ಲಿ ನಡೆದ 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಜಸ್ಮಿತಾ ಸಾಧನೆ ಮಾಡಿದ್ದಾರೆ. ಸ್ಪರಿಂಗ್ ವಿಭಾಗದಲ್ಲಿ ಪ್ರಥಮ ಹಾಗೂ ಸೆಲ್ಫ್‌ಡಿಫೆನ್ಸ್ ವಿಭಾಗದಲ್ಲಿ ಕಂಚಿನ ಪದಕ ಪಡೆದುಕೊಂಡಿದ್ದಾರೆ.

ಬೊಳ್ತಂಡ ಸಿ.ಜಸ್ಮಿತಾ ಬೆಂಗಳೂರಿನಲ್ಲಿ ನೆಲೆಸಿದ್ದು, ಮೂಲತಃ ಬಲಂಬೇರಿ ಗ್ರಾಮದ ಬೊಳ್ತಂಡ ಚಂಗಪ್ಪ ಹಾಗೂ ನಮಿತಾ(ತಾಮನೆ–ಗಿಜಿಗಂಡ) ದಂಪತಿ ಪುತ್ರಿಯಾಗಿದ್ದು, ಬೆಂಗಳೂರಿನ ಖಾಸಗಿ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಕಳೆದ ಒಂದೂವರೆ ವರ್ಷದಿಂದ ಗಂಗಾಧರ್ ಹಾಗೂ ಅನಿಲ್ ಎಂಬವರಿಂದ ಕರಾಟೆ ತರಬೇತಿ ಪಡೆಯುತ್ತಿದ್ದಾರೆ.



# ಜ.17ರಿಂದ ವೀರಶೈವ ಲಿಂಗಾಯತ ಬ್ಯುಸಿನೆಸ್ ಕಾನ್‌ಕ್ಲೇವ್

- ಸುತ್ತೂರು ಶ್ರೀಗಳ ಸಾನ್ನಿಧ್ಯದಲ್ಲಿ ಸಮಾವೇಶ
- ಮೈಸೂರಲ್ಲಿ 3 ದಿನ ವಿವಿಧ ವಿಚಾರ ಮಂಡನೆ



ಸುದ್ದಿಗೋಷ್ಠಿಯಲ್ಲಿ ಅಂತಾರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ ರಾಜ್ಯಾಧ್ಯಕ್ಷ ಕೆ.ಎಸ್.ಮಹದೇವಪ್ರಸಾದ್ ಮಾತನಾಡಿದರು.

ಚಾಮರಾಜನಗರ, ಜ.6–ಅಂತಾರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ (ಐಎಲ್‌ವೈಎಫ್) ವತಿಯಿಂದ ಮೈಸೂರಿನಲ್ಲಿ ಜ.17ರಿಂದ 19ರವರಗೆ 'ವೀರಶೈವ ಲಿಂಗಾಯತ ಗ್ಲೋಬಲ್ ಬ್ಯುಸಿನೆಸ್ ಕಾನ್‌ಕ್ಲೇವ್' ಆಯೋಜಿಸಲಾಗಿದೆ ಎಂದು ಅಂತಾರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ ರಾಜ್ಯಾಧ್ಯಕ್ಷ ಕೆ.ಎಸ್.ಮಹದೇವಪ್ರಸಾದ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಾ ವೀರಶೈವ ಲಿಂಗಾಯತ ಸಮುದಾಯದ ಉದ್ಯಮಿಗಳು ಹಾಗೂ ವೃತ್ತಿಪರರನ್ನು ಒಂದೇ ವೇದಿಕೆಗೆ ತರುವುದು, ವ್ಯಾಪಾರ ಚಟುವಟಿಕೆಗಳನ್ನು ಉತ್ತಮಗೊಳಿಸುವುದು ಸಮ್ಮೇಳನದ ಉದ್ದೇಶವಾಗಿದೆ. ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ವೀರಶೈವ ಲಿಂಗಾಯತ ಗ್ಲೋಬಲ್ ಬ್ಯುಸಿನೆಸ್ ಕಾನ್‌ಕ್ಲೇವ್ ಸಮಾವೇಶಕ್ಕೆ ಜ.17ರಂದು ಬೆಳಗ್ಗೆ 10.30ಕ್ಕೆ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಗುವುದು. ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಶಾಸಕರಾದ ಬಿ.ವೈ.ವಿಜಯೇಂದ್ರ, ಹೆಚ್.ಎಂ.ಗಣೇಶ್ ಪ್ರಸಾದ್, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಇತರರು ಭಾಗವಹಿಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಉದ್ಯಮಿ ಉಲ್ಲಾಸ್ ಕಾಮತ್ ಅವರು ಮೈಕ್ರೋ ಅಂಡ್ ಫ್ಯಾಮಿಲಿ ಬ್ಯುಸಿನೆಸ್ ಕುರಿತು ವಿಚಾರ ಮಂಡಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

18ರಂದು ಬೆಳಗ್ಗೆ 11.30 ರಿಂದ ಮಧ್ಯಾಹ್ನ 12.30ರವರಗೆ ವಿವಿಧ ತಜ್ಞ ವೈದ್ಯರಿಂದ ವಿಚಾರ ಮಂಡನೆ, 19ರಂದು ಬೆಳಗ್ಗೆ 11 ರಿಂದ ಸಂಜೆ 4ರವರಗೆ ಉದ್ಯಮಿಗಳು ವಿಚಾರ ಮಂಡಿಸಲಿದ್ದಾರೆ. 19ರಂದು ಸಂಜೆ 4.30ಕ್ಕೆ ಸಮಾವೇಶದ ಸಮಾರೋಪ ನಡೆಯಲಿದ್ದು, ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ, ಅರಣ್ಯ ಸಚಿವ ಪ್ರಕಾಶ್ ಖಂಡ್ರೆ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಶ್ರೀವತ್ಸ, ಹರೀಶ್‌ಗೌಡ, ಅಂತಾರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

ವೀರಶೈವ ಲಿಂಗಾಯತ ಗ್ಲೋಬಲ್ ಬ್ಯುಸಿನೆಸ್ ಕಾನ್‌ಕ್ಲೇವ್ ಸಮ್ಮೇಳನಾಧ್ಯಕ್ಷ ಪ್ರಶಾಂತ್ ಮಾತನಾಡಿ, ಮೂರು ವರ್ಷದ ಹಿಂದೆ ಬೆಂಗಳೂರು, ಕಳೆದ ವರ್ಷ ಹುಬ್ಬಳ್ಳಿ, ಈ ಬಾರಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸಮ್ಮೇಳನ ಆಯೋಜಿಸಲಾಗಿದೆ. 150ಕ್ಕೂ ಉದ್ಯಮಗಳ ಮಳಿಗೆ, ಆಹಾರ ಮೇಳ ಆಯೋಜಿಸಲಾಗಿದೆ. ನಟ ಡಾಲಿ ಧನಂಜಯ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮೂರು ದಿನಗಳ ಸಮ್ಮೇಳನದಲ್ಲಿ ಖ್ಯಾತ ಗಾಯಕರಾದ ರಾಜೇಶ್ ಕೃಷ್ಣನ್, ಅರ್ಚನಾ ಉಡುಪ, ಅನನ್ಯ ಭಟ್, ವಾಸುಕಿ ವೈಭವ್ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ತಿಳಿಸಿದರು.

ಮೈಸೂರು, ಚಾಮರಾಜನಗರ, ಮಂಡ್ಯ ಸೇರಿದಂತೆ ರಾಜ್ಯದ ವೀರಶೈವ ಲಿಂಗಾಯತ ಉದ್ಯಮಿಗಳು, ಹೊಸ ಉದ್ದಿಮೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮ್ಮೇಳನ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಅಂತಾರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ ಮೈಸೂರು, ಚಾಮರಾಜನಗರ ಜಿಲ್ಲಾ ಉಪಾಧ್ಯಕ್ಷ ಎಂಆರ್‌ಎಫ್ ಟೈರ್ ಮಹೇಶ್, ಕಾರ್ಯಕಾರಿಣಿ ಸದಸ್ಯರಾದ ಎ.ಎಸ್.ಪ್ರದೀಪ್, ಡಿ.ಎಸ್.ಗಿರೀಶ್, ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಎಂ.ಎಸ್. ನಂದೀಶ್ ಹಾಜರಿದ್ದರು.

## ಲಾರಿ ಚಕ್ರಕ್ಕೆ ಸಿಲುಕಿ ಸೋಲಿಗ ವ್ಯಕ್ತಿ ಸಾವು

ಪುಣಜನೂರು ಚೆಕ್‌ಪೋಸ್ಟ್‌ನಲ್ಲಿ ವಾಹನ ತಪಾಸಣೆ ವೇಳೆ ಘಟನೆ




ಪುಣಜನೂರು ಚೆಕ್‌ಪೋಸ್ಟ್ ಬಳಿ ಲಾರಿ ಚಕ್ರಕ್ಕೆ ವ್ಯಕ್ತಿ ಸಿಲುಕಿ ಮೃತಪಟ್ಟ ಸ್ಥಳವನ್ನು ಪೊಲೀಸರು ಪರಿಶೀಲಿಸಿದರು.

ಚಾಮರಾಜನಗರ, ಜ.6–ತಮಿಳುನಾಡು ಕಡೆಗೆ ಕರಿಕಲ್ಲು ತುಂಬಿಕೊಂಡು ಹೋಗುತ್ತಿದ್ದ ಲಾರಿಯ ಚಕ್ರಕ್ಕೆ ಸೋಲಿಗ ಸಮುದಾಯದ ವ್ಯಕ್ತಿ ಸಿಲುಕಿ ಮೃತಪಟ್ಟಿರುವ ಘಟನೆ ಸೋಮವಾರ ಪುಣಜನೂರು ಚೆಕ್‌ಪೋಸ್ಟ್‌ನ ರಾಷ್ಟ್ರೀಯ ಹೆದ್ದಾರಿ ಬಳಿ ನಡೆದಿದೆ.


ಪುಣಜನೂರು ಗ್ರಾಮದ ದಿ.ಕುಂಬೇಗೌಡ ಮಗ ಕೋಣೋರೆಗೌಡ (40) ಮೃತಪಟ್ಟ ವ್ಯಕ್ತಿ. ಈತ ಪುಣಜನೂರು ಚೆಕ್‌ಪೋಸ್ಟ್ ಬಳಿ ನಿಂತಿದ್ದು, ಈ ವೇಳೆ ಕರಿಕಲ್ಲುಗಳನ್ನು ತುಂಬಿಕೊಂಡ ಬಂದ ಲಾರಿಯನ್ನು ಅರಣ್ಯ ಹಾಗೂ ಪೊಲೀಸ್ ಸಿಬ್ಬಂದಿ ತಪಾಸಣೆ ಮಾಡಿದ್ದಾರೆ. ಬಳಿಕ ಚಾಲಕ ಹೋಗುವ ಧಾವಂತದಲ್ಲಿ ಕೋಣೋರೆಗೌಡ ನಿಂತಿರುವುದನ್ನು ಗಮನಿಸದೆ ಲಾರಿಯನ್ನು ಚಲಾಯಿಸಿದ್ದಾನೆ. ಪರಿಣಾಮ ಈತ ಲಾರಿ ಚಕ್ರಕ್ಕೆ ಸಿಲುಕಿ ಸಾವನ್ನಪ್ಪಿದ್ದಾನೆ.

ಮೃತ ವ್ಯಕ್ತಿಗೆ ತಾಯಿ, ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಸಾವಿನ ಸುದ್ದಿ ತಿಳಿದು ಸ್ಥಳಕ್ಕಾಮಿಸಿದ ಕುಟುಂಬಸ್ಥರ ರೋಧನ ಮುಗಿಲು ಮಟ್ಟಿತ್ತು. ಈ ಸಂಬಂಧ ಚಾಮರಾಜನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಫುಟ್‌ಪಾತ್ ಅಂಗಡಿಗಳಿಂದ ಅಪಘಾತ:** ಈ ಅಪಘಾತಕ್ಕೆ ಪುಣಜನೂರು ಚೆಕ್‌ಪೋಸ್ಟ್ ಬಳಿಯ ಹೆದ್ದಾರಿ ಫುಟ್‌ಪಾತ್ ಅಂಗಡಿಗಳೇ ಕಾರಣ. ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ ವೇಳೆ ಹೆಚ್ಚಿನ ವಾಹನಗಳ ನಿಲುಗಡೆಯಾಗುತ್ತವೆ. ರಸ್ತೆಬದಿಯಲ್ಲೇ ಅಂಗಡಿಗಳು ಇದ್ದು, ಹೀಗಾಗಿ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ತಿರುಗಾಡಲು ಜಾಗ ಇಲ್ಲಂತಾಗಿದೆ.

ಅಂಗಡಿಗಳ ಬಳಿಯೇ ಲಾರಿ, ಬಸ್‌ಗಳು ಇತರೆ ಭಾರೀ ವಾಹನಗಳು ನಿಲ್ಲುತ್ತಿವೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಪೊಲೀಸ್ ಅಧಿಕಾರಿಗಳು ಜಂಟಿಯಾಗಿ ಸರ್ವೇ ಮಾಡಿ ಫುಟ್‌ಪಾತ್ ಅಂಗಡಿಗಳನ್ನು ತೆರವುಗೊಳಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದರು.

## ಬಸ್ ದರ ಹೆಚ್ಚಳ ವಿರೋಧಿಸಿ ಪಂಜಿನ ಮೆರವಣಿಗೆ



ಬಸ್ ದರ ಹೆಚ್ಚಳ ವಿರೋಧಿಸಿ ಕರವೇ ಕಾರ್ಯಕರ್ತರು ಚಾ.ನಗರದಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

**ಚಾಮರಾಜನಗರ:** ಸಾರಿಗೆ ಸಂಸ್ಥೆ ಬಸ್ ದರ ಹೆಚ್ಚಳ ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಕುಮಾರ್ ಶೆಟ್ಟಿ ಬಣ) ಕಾರ್ಯಕರ್ತರು ನಗರದಲ್ಲಿ ಸೋಮವಾರ ಪಂಜಿನ ಮೆರವಣಿಗೆ ನಡೆಸಿದರು.

ಶ್ರೀ ಚಾಮರಾಜೇಶ್ವರ ಉದ್ಯಾನ ಮುಂಭಾಗ ಕರವೇ ತಾಲೂಕು ಅಧ್ಯಕ್ಷ ನವೀನ್ ಕ್ವಾಲಿಟಿ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಸರ್ಕಾರ, ಸಾರಿಗೆ ಸಚಿವರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರ ಬಸ್ ದರವನ್ನು ಶೇ.15 ರಷ್ಟು ಹೆಚ್ಚಿಸಿರುವುದರಿಂದ ಸಾರ್ವಜನಿಕರಿಗೆ ತೀವ್ರ ಹೊರೆಯಾಗಿದೆ ಈಗಾಗಲೇ ಎಲ್ಲಾ ದಿನಸಿ ಪದಾರ್ಥ, ಎಣ್ಣೆ, ಕಾಳುಗಳು, ಆಹಾರ ಪದಾರ್ಥಗಳು ತುಟ್ಟಿಯಾಗಿವೆ. ಡೀಸೆಲ್, ಪೆಟ್ರೋಲ್, ನೋಂದಣಿ ಮತ್ತು ಮುದ್ರಾಂಕ ಶುಲ್ಕಗಳನ್ನು ಹೆಚ್ಚಿಸಲಾಗಿದ್ದು, ಜನತೆಗೆ ತುಂಬಾ ತೊಂದರೆಯಾಗಿದೆ. ಕೂಡಲೇ ಬಸ್ ದರ ಹೆಚ್ಚಳವನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಕರವೇ ಜಿಲ್ಲಾ ಕಾರ್ಯಾಧ್ಯಕ್ಷ ಉಮ್ಮತ್ತೂರು ಚಂದ್ರು, ತಾಲೂಕು ಪ್ರಧಾನ ಕಾರ್ಯದರ್ಶಿ ಅರ್ಜುನ್, ಉಪಾಧ್ಯಕ್ಷ ರಾಮಸಮುದ್ರ ಬಾಬು, ಅವಿನಾಶ್, ಕಾರ್ಮಿಕ ಘಟಕ ಅಧ್ಯಕ್ಷ ಹರೀಶ್ ನಾಯಕ, ಟೌನ್ ಅಧ್ಯಕ್ಷ ಮಹೇಂದ್ರ, ಸಾಂಸ್ಕೃತಿಕ ಘಟಕ ಅಧ್ಯಕ್ಷ ಮನು, ಮಹಿಳಾ ಘಟಕ ಅಧ್ಯಕ್ಷೆ ಸುಬ್ಬಲಕ್ಷ್ಮಿ ಗೌರವಾಧ್ಯಕ್ಷೆ ಉಷಾ, ರೇಖಾ, ನಟರಾಜು, ಮಹದೇವಸ್ವಾಮಿ, ಗಣೇಶ್, ಸಂತೋಷ, ರಾಜೇಶ್, ರೂಪೇಶ್, ದೊರೆ ಇತರರಿದ್ದರು.

## ಜ.ಸುರೇಶ್‌ನಾಗ್‌ಗೆ ಗಾನ ಗಾರುಡಿಗ ಪ್ರಶಸ್ತಿ



**ಚಾಮರಾಜನಗರ:** ಬೆಳಕು ಸಾಹಿತ್ಯ, ಶೈಕ್ಷಣಿಕ, ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನೀಡುವ ರಾಷ್ಟ್ರ ಮಟ್ಟದ ಗಾನ ಗಾರುಡಿಗ ಪ್ರಶಸ್ತಿಗೆ ತಾಲೂಕಿನ ಹರದನಹಳ್ಳಿ ಜ.ಸುರೇಶ್‌ನಾಗ್ ಭಾಜನರಾಗಿದ್ದಾರೆ. ರಾಯಚೂರಿನ ರಂಗಮಂದಿರದಲ್ಲಿ ಬೆಳಕು ಸಾಹಿತ್ಯ, ಶೈಕ್ಷಣಿಕ, ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಜ.18ರಂದು ನಡೆಯುವ ರಾಷ್ಟ್ರ ಮಟ್ಟದ ಕನ್ನಡ ಕಲರವ ಸಮ್ಮೇಳನದಲ್ಲಿ ಸುರೇಶ್‌ನಾಗ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅವರು ಜಾನಪದ ಗಾಯನ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಗಾಗಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಗಜೀವನ್‌ರಾಂ ಭವನಕ್ಕೆ 15 ಲಕ್ಷ ಅನುದಾನ


ಕೊಳ್ಳೇಗಾಲ, ಜ.6–ನಗರಸಭಾ ವ್ಯಾಪ್ತಿಯ ಬಾಪು ನಗರ ಬಡಾವಣೆಯ ಡಾ.ಬಾಬು ಜಗಜೀವನ್ ರಾಂ ಸಮುದಾಯ ಭವನ ನಿರ್ಮಾಣದ ಮುಂದುವರಿದ ಕಾಮಗಾರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ವಿ.ಶ್ರೀನಿವಾಸ್ ಪ್ರಸಾದ್ ಸಂಸದರಾಗಿದ್ದಾಗ ಭವನ ನಿರ್ಮಾಣಕ್ಕೆ ಅನುದಾನ ನೀಡಿ ಸಹಕರಿಸಿದ್ದರು. ಬಳಿಕ ಭವನ ನಿರ್ಮಾಣ ಪೂರ್ಣಗೊಳಿಸಲು ಅನುದಾನದ ಕೊರತೆಯಿಂದ ಸ್ಥಗಿತವಾಗಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನೀಡಿದ್ದ ಭರವಸೆಯಂತೆ ಶಾಸಕರ ಅನುದಾನದಡಿ 10 ಲಕ್ಷ ರೂ. ಹಾಗೂ ವಿಧಾನ ಪರಿಷತ್ ಸದಸ್ಯರ ಅನುದಾನದಡಿ 5 ಲಕ್ಷ ರೂ. ಸೇರಿ ಒಟ್ಟು 15 ಲಕ್ಷ ರೂ. ಅನುದಾನ ನೀಡಲಾಗುವುದು. ಮುಂದಿನ ದಿನಗಳಲ್ಲಿ ಮತ್ತಷ್ಟು ಸೌಲಭ್ಯಗಳಿಗೆ ಹೆಚ್ಚಿನ ಅನುದಾನ ನೀಡಿ ಬಾಪುನಗರದ ಜನರಿಗೆ ಮೂಲ ಸೌಕರ್ಯ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ನಗರಸಭಾ ಅಧ್ಯಕ್ಷೆ ರೇಖಾ ರಮೇಶ್, ಉಪಾಧ್ಯಕ್ಷ ಎ.ಪಿ.ಶಂಕರ್, ಸದಸ್ಯರಾದ ನಾಗಸಂದ್ರಮ್ಮ, ಬಸ್ತಿಪುರ ಶಾಂತರಾಜು, ಧರಣೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್ ಇತರರಿದ್ದರು.



ಕೊಳ್ಳೇಗಾಲದ ಬಾಪುನಗರ ಬಡಾವಣೆಯಲ್ಲಿ ಡಾ.ಬಾಬು ಜಗಜೀವನ ರಾಂ ಸಮುದಾಯ ಭವನ ಮುಂದುವರೆದ ಕಾಮಗಾರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು.

## ಬಗರ್‌ಹುಕುಂ ಸಾಗುವಳಿ ಚೀಟಿ ವಿತರಣೆ



ಚಾಮರಾಜನಗರ ತಾಲೂಕು ಕಚೇರಿಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ ನಡೆಯಿತು.

ಚಾಮರಾಜನಗರ, ಜ.6–ತಾಲೂಕಿನ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸಭೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆಯಿತು.

ಸಭೆಯಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಮಾತನಾಡಿದ ಶಾಸಕರು, ಕ್ಷೇತ್ರದಲ್ಲಿ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗೆ 7626 ಅರ್ಜಿ ಬಂದಿವೆ. ಅದರಲ್ಲಿ 1802 ಅರ್ಜಿ ಬಾಕಿಯಿದ್ದು, ಕಳೆದ ಸಭೆಯಲ್ಲಿ 8 ಅರ್ಜಿ ಮಂಜೂರಾಗಿದ್ದು, ಇಂದಿನ ಸಭೆಯಲ್ಲಿ 13 ಅರ್ಜಿ ಮಂಜೂರಾಗಿವೆ. ಉಳಿದ ಅರ್ಜಿಗಳನ್ನು ಪರಿಶೀಲಿಸಿದರೆ 300 ಅರ್ಜಿ ಮಂಜೂರಾಗಬಹುದು. ಆಯ್ಕೆಯಾದ ಫಲಾನುಭವಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸಾಗುವಳಿ ಚೀಟಿ ವಿತರಿಸಲಾಗುವುದು ಎಂದರು.

ಸಭೆಯಲ್ಲಿ ತಹಸೀಲ್ದಾರ್ ಗಿರಿಜಾ, ಅಕ್ರಮ ಸಕ್ರಮ ಸಮಿತಿ ಸದಸ್ಯರಾದ ಮಹಾಲಿಂಗು, ರವಿಕುಮಾರ್, ಮಲ್ಲಿಕಾ ಚೆನ್ನೇಗೌಡ, ರಾಜಸ್ವ ನಿರೀಕ್ಷಕರಾದ ರಾಜಶೇಖರ, ಷಡಕ್ಷರಿ, ಗುರುಸಿದ್ದಪ್ಪ, ಗ್ರಾಮ ಲೆಕ್ಕಾಧಿಕಾರಿಗಳು ಹಾಜರಿದ್ದರು.

# ವಂಚನೆ ಪ್ರಕರಣದಲ್ಲಿ ಐಶ್ವರ್ಯಾ ಗೌಡ, ಅವರ ಪತಿ ಮತ್ತೆ ಬಂಧನ



**ಬೆಂಗಳೂರು:** ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ವಂಚನೆ ಪ್ರಕರಣದಲ್ಲಿ ಐಶ್ವರ್ಯಾ ಗೌಡ ಮತ್ತು ಅವರ ಪತಿ ಕೆ.ಎನ್. ಹರೀಶ್ ಅವರನ್ನು ಸೋಮವಾರ ಬೆಂಗಳೂರು ಪೊಲೀಸರು ಮತ್ತೆ ಬಂಧಿಸಿದ್ದಾರೆ. ಶಿಲ್ಪಾ ಗೌಡ ಎಂಬುವವರಿಂದ 430 ಗ್ರಾಂ ಚಿನ್ನ ಪಡೆದಿದ್ದ ಐಶ್ವರ್ಯಾ ಗೌಡ, ಅದರ ಹಣ ನೀಡದೆ ವಂಚಿಸಿದ್ದರು. ಹಣ ಕೇಳಿದ ಶಿಲ್ಪಾ ಗೌಡ ಅವರಿಗೆ ಧಮ್ಕಿ ಹಾಕಿರುವ ಆಡಿಯೋ ಇಂದು ಬೆಳಗ್ಗೆ ವೈರಲ್ ಆಗಿತ್ತು.

ಇದೀಗ ಶಿಲ್ಪಾ ಗೌಡ ಅವರು ನೀಡಿದ ದೂರಿನನ್ವಯ ಐಶ್ವರ್ಯಾ ಗೌಡ ಮತ್ತು ಅವರ ಪತಿಯನ್ನು ಆರ್ ಆರ್ ನಗರ ಪೊಲೀಸರು ಬಂಧಿಸಿದ್ದಾರೆ.

**ಚಿನ್ನದಂಗಡಿ ಮಾಲೀಕರಿಗೆ ವಂಚನೆ:** ಐಶ್ವರ್ಯಾ ಗೌಡ –ಹರೀಶ್‌ಗೆ ಜಾಮೀನು 430 ಗ್ರಾಂ ಚಿನ್ನದ ಬೆಲೆ 3.50 ಕೋಟಿಯಾಗಿದ್ದು, ಹಣ ನೀಡದ ಐಶ್ವರ್ಯಾ ಗೌಡ ವಿರುದ್ಧ ಶಿಲ್ಪಾ ಗೌಡ ಅವರು ಆರ್ ಆರ್ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮಾಜಿ ಸಂಸದ ಡಿ ಕೆ ಸುರೇಶ್ ಅವರ ತಂಗಿ ಎಂದು ಹೇಳಿಕೊಂಡು ಕೋಟ್ಯಾಂತರ ರೂಪಾಯಿ ವಂಚನೆ ಮಾಡಿರುವ ಪ್ರಕರಣ ರಾಜ್ಯದಲ್ಲಿ ಸಾಕಷ್ಟು ಸದ್ದು ಮಾಡುತ್ತಿದೆ. ಐಶ್ವರ್ಯ ಗೌಡ ಅವರು 8.41 ಕೋಟಿ ರೂಪಾಯಿ ಮೌಲ್ಯದ ಚಿನ್ನ ಖರೀದಿಸಿ ವಂಚನೆ ಮಾಡಿದ್ದಾರೆ ಎಂದು ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಶಾಪ್ ಮಾಲೀಕರು ದೂರು ನೀಡಿದ್ದರು. ಈ ದೂರಿನನ್ವಂಯ ಐಶ್ವರ್ಯಾ ಗೌಡ ಮತ್ತು ಪತಿ ಹರೀಶ್‌ನನ್ನು ಬಂಧಿಸಲಾಗಿತ್ತು. ಆದರೆ ಕೆಲದಿನಗಳ ಹಿಂದಷ್ಟೇ ಹೈಕೋರ್ಟ್ ಇವರಿಬ್ಬರಿಗೆ ಮಧ್ಯಂತರ ಜಾಮೀನು ನೀಡಿತ್ತು.

# ಮಾರ್ಚ್ 1ರಿಂದ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ

ಬೆಂಗಳೂರು: 16 ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮಾರ್ಚ್ 1 ರಿಂದ 8 ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಮುಖ್ಯಮಂತ್ರಿಯವರ ಗೃಹಕಚೇರಿ 'ಕೃಷ್ಣಾ'ದಲ್ಲಿ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ ಸಂಘಟನಾ ಸಮಿತಿಯ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಈ ವಿವರ ನೀಡಿದರು.

ಈ ಸಾಲಿನ ಚಲನ ಚಿತ್ರೋತ್ಸವದ ಥೀಮ್ 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಇರಲಿದೆ. ಕಳೆದ ಬಾರಿ 'ಸಾಮಾಜಿಕ ನ್ಯಾಯ' ಥೀಮ್ ಆಗಿತ್ತು. ಚಿತ್ರೋತ್ಸವಕ್ಕೆ 9 ಕೋಟಿ ಖರ್ಚು ಮಾಡಲಾಗುವುದು. 12 ಕೋಟಿ ಕೇಳಿದ್ದರು. 9 ಕೋಟಿ ಸಾಕು ಎಂದು ತೀರ್ಮಾನಿಸಲಾಯಿತು ಎಂದು ಅವರು ಹೇಳಿದರು. ಸುಮಾರು 60 ದೇಶಗಳು ಈ ಚಲನ ಚಿತ್ರೋತ್ಸವದಲ್ಲಿ ಭಾಗವಹಿಸಲಿದ್ದು, ಕನ್ನಡ ಸೇರಿ ವಿವಿಧ ಭಾಷೆಗಳ 200 ಚಲನ ಚಿತ್ರಗಳನ್ನು 13 ಚಿತ್ರಮಂದಿರಗಳಲ್ಲಿ 400 ಪ್ರದರ್ಶನಗೊಳ್ಳಲಿವೆ. ಬೆಂಗಳೂರು ಮತ್ತು ರಾಜ್ಯದ ನಾಗರಿಕರಿಗೆ ಅಂತರರಾಷ್ಟ್ರೀಯ ಚಲನಚಿತ್ರ ವೀಕ್ಷಿಸಲು, ಇದೊಂದು ಸುವರ್ಣ ಅವಕಾಶ ಎಂದು ಸಿದ್ದರಾಮಯ್ಯ ತಿಳಿಸಿದರು.

ಮಾರ್ಚ್ 1 ರಂದು ಚಲನ ಚಿತ್ರೋತ್ಸವ ಉದ್ಘಾಟನೆಗೊಳ್ಳಲಿದೆ. ಸೆಲೆಬ್ರಿಟಿ ಯಾರನ್ನು ಕರೆಸಬೇಕು ಎಂಬುದನ್ನು ಸಮಿತಿ ತೀರ್ಮಾನಿಸಲಿದೆ. ಈ ಉತ್ಸವಕ್ಕೆ ರಾಯಭಾರಿ ಯಾರು ಎನ್ನುವುದನ್ನೂ ಸಮಿತಿಯೇ ತೀರ್ಮಾನಿಸುತ್ತದೆ. ಸುಮಾರು ಒಂದು ಲಕ್ಷ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು.

## ವಾರ್ಷಿಕ ಕ್ರೀಡಾ ದಿನ




ಮೈಸೂರಿನ ಬನ್ನಿಮಂಟಪ ಲಿಟಲ್ ಏಂಜೆಲ್ಸ್ ಮಾಂಟೆಸ್ಸರಿಯಲ್ಲಿ ವಾರ್ಷಿಕ ಕ್ರೀಡಾ ದಿನ 'ಉಡಾನ್' ಸಂಭ್ರಮದಿಂದ ಆಚರಿಸಲಾಯಿತು. ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರಮೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರಿನ್ಸಿಪಾಲ್ ಡಾ. ಸುಲ್ತಾನಾ ಜಬೀನ್, ಸೆಂಟರ್ ಮ್ಯಾನೇಜರ್ ಅಸ್ಮಾ ತಹುರ ಇನ್ನಿತರರು ಪಾಲ್ಗೊಂಡಿದ್ದರು. ಇದೇ ವೇಳೆ ಮಕ್ಕಳು ನಾನಾ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಪೋಷಕರೂ ಅಧಿಕ ಸಂಖ್ಯೆಯಲ್ಲಿ ಹಾಜರಿದ್ದರು.

# ಅತುಲ್ ಆತ್ಮಹತ್ಯೆ ಪ್ರಕರಣ ರದ್ದು ಕೋರಿದ್ದ ಪತ್ನಿ ಮನವಿ ತಿರಸ್ಕರಿಸಿದ ಹೈಕೋರ್ಟ್



**ಬೆಂಗಳೂರು:** ಬೆಂಗಳೂರು ಟೆಕ್ಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ನಿ ನಿಕಿತಾ ಸಿಂಘಾನಿಯಾ ವಿರುದ್ಧ ದಾಖಲಾಗಿರುವ ಎಫ್ಐಆರ್ ರದ್ದುಗೊಳಿಸಲು ಕರ್ನಾಟಕ ಹೈಕೋರ್ಟ್ ಸೋಮವಾರ ನಿರಾಕರಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ನಿಕಿತಾ ಸಿಂಘಾನಿಯಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಅವರು, ಅರ್ಜಿದಾರರ ವಿರುದ್ಧ ದಾಖಲಿಸಿರುವ ದೂರು ಸಮರ್ಥನೀಯವಾಗಿದೆ. ಮೇಲ್ನೋಟಕ್ಕೆ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಅಂಶಗಳಿವೆ ಎಂದು ಹೇಳಿದ್ದಾರೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ವಿಚಾರಣಾಧೀನ ನ್ಯಾಯಾಲಯವು ಕಳೆದ ಶನಿವಾರ ಮೂವರು ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದೆ. ಆತ್ಮಹತ್ಯೆಗೆ ಪ್ರಚೋದನೆಯಡಿ ಪ್ರಕರಣ ದಾಖಲಿಸಲು ಯಾವುದೇ ಅಂಶಗಳು ಇಲ್ಲ. ಆರೋಪಿಗಳನ್ನು ಬಂಧಿಸುವುದಕ್ಕೆ ಆಧಾರಗಳನ್ನೂ ಪೊಲೀಸರು ನೀಡಿಲ್ಲ. ಹೀಗಾಗಿ, ಪ್ರಕರಣ ರದ್ದುಪಡಿಸಬೇಕು ಎಂದು ಕೋರಿದರು.

ಎಫ್ಐಆರ್ ಓದಿದರೆ ಆತ್ಮಹತ್ಯೆಗೆ ಪ್ರಚೋದನೆ ನೀಡಿರುವ ಎಲ್ಲ ಅಂಶಗಳು ಸ್ಪಷ್ಟವಾಗಿವೆ. ನನ್ನ ಪ್ರಕಾರ ಎಲ್ಲಾ ವಿವರಗಳನ್ನು ನೀಡಲಾಗಿದೆ. ಎಫ್ಐಆರ್‌ನಲ್ಲಿ ಇದಕ್ಕಿಂತ ಇನ್ನೂ ಹೆಚ್ಚಿನದನ್ನು ಏನು ಕೊಡಲಾಗುತ್ತದೆ ಎಂದು ಪೀಠ ಪ್ರಶ್ನಿಸಿತು. "ಅಪರಾಧದ ಪ್ರಾಥಮಿಕ ಅಂಶಗಳನ್ನು ದೂರಿನಲ್ಲಿ ಮಾಡಲಾಗಿದೆ. ಆದರೂ ತನಿಖೆ ಮಾಡಲು ನೀವು ಏಕೆ ಬಯಸುವುದಿಲ್ಲ" ಎಂದು ಪೀಠ ಸಿಂಘಾನಿಯಾ ಅವರನ್ನು ಪ್ರಶ್ನಿಸಿತು.

ಈ ಕುರಿತು ತನಿಖೆ ನಡೆಯುತ್ತಿದೆಯೇ ಏನೆಲ್ಲಾ ದಾಖಲೆಗಳನ್ನು ಸಂಗ್ರಹಿಸಲಾಗಿದೆ ಡೆತ್‌ನೋಟ್, ಆತ್ಮಹತ್ಯೆ ವಿಡಿಯೋ ಸಂಗ್ರಹಿಸಲಾಗಿದೆಯೇ ಎಂದು ಸರ್ಕಾರಿ ವಕೀಲರಿಗೆ ಪೀಠ ಪ್ರಶ್ನಿಸಿತು. ಈ ವೇಳೆ, ಸರ್ಕಾರಿ ವಕೀಲರು ತನಿಖೆ ಪ್ರಗತಿಯಲ್ಲಿದೆ ಎಂದರು. ಆಗ ಪೀಠವು ತನಿಖೆಯ ಸಂದರ್ಭದಲ್ಲಿ ಸಂಗ್ರಹಿಸಿರುವ ದಾಖಲೆಗಳನ್ನು ಸಲ್ಲಿಸಬೇಕು. ಜೊತೆಗೆ ಆಕ್ಷೇಪಣೆ ಸಲ್ಲಿಸಬೇಕು ಎಂದು ನಿರ್ದೇಶಿಸಿ, ವಿಚಾರಣೆಯನ್ನು ಜನವರಿ 21ಕ್ಕೆ ಮುಂದೂಡಿತು.

ಟೆಕ್ಕಿ ಅತುಲ್ ಸುಭಾಷ್ ಅವರು, ವಿಚ್ಛೇದನ ಇತ್ಯರ್ಥಕ್ಕಾಗಿ ಪತ್ನಿ ನಿಕಿತಾ ಸಿಂಘಾನಿಯಾ ಅವರು 3 ಕೋಟಿ ರೂಪಾಯಿ ಬೇಡಿಕೆ ಇಟ್ಟಿದ್ದಾರೆ ಮತ್ತು ಚಿತ್ರಹಿಂಸೆ ನೀಡಿದ್ದಾರೆ ಎಂದು ಆರೋಪಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

# ಮಾರಕಾಸ್ತ್ರಗಳಿಂದ ಕೊಚ್ಚಿ ಮಹಿಳೆಯ ಬರ್ಬರ ಹತ್ಯೆ

**ಹಾಸನ:** ಮಾರಕಾಸ್ತ್ರಗಳಿಂದ ಕೊಚ್ಚಿ ಮಹಿಳೆಯೊಬ್ಬಳನ್ನು ಬರ್ಬರವಾಗಿ ಹತ್ಯೆಗೈದ ಘಟನೆ ಸಕಲೇಶಪುರದ ಇಬ್ಬಡಿ ಕೊಣ್ಣೂರು ಗ್ರಾಮದ ಬಳಿ ನಡೆದಿದೆ.

ಕೊಲೆಯಾದ ಮಹಿಳೆಯನ್ನು ಅನಿತಾ (35) ಎಂದು ಗುರುತಿಸಲಾಗಿದೆ. ಭಾನುವಾರ ಬಾಕ್ಸ್‌ನಲ್ಲಿ ಊಟ ತುಂಬಿಕೊಂಡು ಗದ್ದೆ ಕೆಲಸಕ್ಕೆ ಮಹಿಳೆ ತೆರಳಿದ್ದಳು. ಆದರೆ ರಾತ್ರಿಯಾದರೂ ಆಕೆ ವಾಪಸ್ ಬಂದಿರಲಿಲ್ಲ. ಈ ಬಗ್ಗೆ ಮಹಿಳೆಯ ಪತಿ ಚಂದ್ರಶೇಖರ್ ಪೊಲೀಸರಿಗೆ ಮಾಹಿತಿ ನೀಡಿದ್ದ. ಬಳಿಕ ಹುಡುಕಾಟ ನಡೆಸಿದ್ದ. ಹುಡುಕಾಟ ನಡೆಸುತ್ತಿದ್ದ ವೇಳೆ ಹೊಳೆ ಸಾಲಿನಲ್ಲಿ ಅನಿತಾ ಮೃತದೇಹ ಪತ್ತೆಯಾಗಿತ್ತು. ಹನ್ನೆರಡು ವರ್ಷದ ಹಿಂದೆ ಇಬ್ಬಡಿ ಕೊಣ್ಣೂರು ಗ್ರಾಮದ ಚಂದ್ರಶೇಖರ್ ಹೆಬ್ಬಸಾಲೆ ಗ್ರಾಮದ ಅನಿತಾ ಜೊತೆ ಮದುವೆಯಾಗಿದ್ದ. ಅಕ್ರಮ ಸಂಬಂಧದ ವಿಚಾರಕ್ಕೆ ಪತ್ನಿಯನ್ನೇ ಚಂದ್ರಶೇಖರ್ ಕೊಲೆಗೈದಿರುವ ಶಂಕೆ ವ್ಯಕ್ತವಾಗಿದೆ

ಎರಡು ವರ್ಷ ಹಿಂದೆ ಜಮೀನು ವಿಚಾರವಾಗಿ ಒಡಹುಟ್ಟಿದ ಅಣ್ಣನ ಪತ್ನಿಯನ್ನೇ ಚಂದ್ರಶೇಖರ್ ಕೊಲೆಗೈದಿದ್ದ. ಸಕಲೇಶಪುರ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## 'ಕೈ'ಗೆ 60% ಕಮಿಷನ್ ಆರೋಪ

# ಹೆಚ್‌ಡಿಕೆಗೆ ಬಿಜೆಪಿ ಸಾತ್–ಸಿಎಂ ಸಚಿವರು ಟಕ್ಕರ್

**ಬೆಂಗಳೂರು:** ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೆಚ್‌ಡಿಕೆ ಸಿಡಿಸಿದ 60% ಕಮಿಷನ್ ಬಾಂಬ್ ಸಾಕಷ್ಟು ಸದ್ದು ಮಾಡಿದೆ. ಕಮಿಷನ್ ಆರೋಪ ವಿಚಾರದಲ್ಲಿ ಆಡಳಿತ ಮತ್ತು ವಿಪಕ್ಷಗಳ ನಡುವೆ ಜಟಾಪಟಿ ತೀವ್ರಗೊಂಡಿದೆ. ಬಿಜೆಪಿ ಕೂಡಾ ಜೆಡಿಎಸ್ ಜೊತೆ ಕಮಿಷನ್ ವಿರುದ್ಧ ಹೋರಾಟ ಕೈಗೆತ್ತಿಕೊಳ್ಳಲು ಮುಂದಾಗಿದೆ.

ಹಲವು ಹಗರಣಗಳ ಸುಳಿಯಲ್ಲಿ ಸಿಕ್ಕಿಕೊಂಡ ಸರ್ಕಾರಕ್ಕೆ ಈಗ ಕಮಿಷನ್ ಉರುಳು. ಕೇಂದ್ರ ಸಚಿವ ಹೆಚ್‌ಡಿಕೆ ನಿನ್ನೆ 60% ಕಮೀಷನ್ ಆರೋಪ ಮಾಡಿದ್ದರು. ಸಚಿವರು ನೇರವಾಗಿಯೇ ವಿಧಾನಸೌಧದಲ್ಲಿ ಕಮಿಷನ್ ಪಡೆಯುತ್ತಿದ್ದಾರೆ ಎಂದು ಆರೋಪಿಸಿದ್ದರು. ಹೆಚ್‌ಡಿಕೆ ಆರೋಪ ಈಗ ರಾಜ್ಯ ರಾಜಕಾರಣದಲ್ಲಿ ಕಿಚ್ಚು ಹಚ್ಚಿದೆ. ಈ ಬೆನ್ನಲ್ಲೇ ಬಿಜೆಪಿ ನಾಯಕರು ಅಖಾಡಕ್ಕಿಳಿದಿದ್ದಾರೆ.

ಹುಬ್ಬಳ್ಳಿಯಲ್ಲಿ ಮಾತನಾಡಿದ ಸಂಸದ ಬಸವರಾಜ ಬೊಮ್ಮಾಯಿ, ಕಾಂಗ್ರೆಸ್‌ನವರು ನಮ್ಮ ಮೇಲೆ 40% ಆರೋಪ ಮಾಡಿದಾಗ ಯಾವ ದಾಖಲೆಯನ್ನೂ ಕೊಡಲಿಲ್ಲ. ಇದುವರೆಗೂ ಕೊಟ್ಟಿಲ್ಲ. ಈಗ ಅವರ ಸರ್ಕಾರದ ಮೇಲೆ 60% ಆರೋಪ ಬಂದಾಕ್ಷಣ ದಾಖಲೆ ಕೇಳುತ್ತಿದ್ದಾರೆ. ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರ ತುಂಬಿತುಳುಕುತ್ತಿದೆ. ಏನೂ ಆಗಿಲ್ಲ ಎಂದು ಸಿಎಂ ಭ್ರಷ್ಟಾಚಾರ ಮುಚ್ಚಿಕೊಳ್ಳುವ ಪ್ರಯತ್ನ ಪಡುತ್ತಿದ್ದಾರೆ ಎಂದು ಕಿಡಿಕಾರಿದರು.

ಇನ್ನೂ ಬೆಂಗಳೂರಿನಲ್ಲಿ ಮಾತನಾಡಿದ ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವಥ ನಾರಾಯಣ, ಹೆಚ್‌ಡಿಕೆ ಆರೋಪ ಸಮರ್ಥಿಸಿಕೊಂಡರು. ಇದು 60% ಕಮಿಷನ್ ಸರ್ಕಾರ ಅಷ್ಟೇ ಅಲ್ಲ ಕಮಿಷನ್‌ನಲ್ಲಿ 100% ದಾಟಿರುವ ಸರ್ಕಾರ. ಎಲ್ಲ ಇಲಾಖೆಗಳಲ್ಲೂ ಸಚಿವರು ಕಮಿಷನ್ ದಂಧೆಗಿಳಿದಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಇನ್ನೂ ಹೆಚ್‌ಡಿಕೆ ಆರೋಪಕ್ಕೆ ಸಿಎಂ ಸಿದ್ದರಾಮಯ್ಯ ನಿನ್ನೆ, ದಾಖಲೆ ಕೊಡಲಿ ಎಂದು ಸವಾಲೆಸೆದಿದ್ದರು. ಈ ಬೆನ್ನಲ್ಲೇ ಸಚಿವ ಪ್ರಿಯಾಂಕ್ ಖರ್ಗೆ ಸಹ ಹೆಚ್‌ಡಿಕೆಗೆ ಇಂದು ಟಾಂಗ್ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಮಾತಾಡಿರುವ ಪ್ರಿಯಾಂಕ್ ಖರ್ಗೆ, ಕುಮಾರಸ್ವಾಮಿ ಅವರ ಬಳಿ 60% ಆರೋಪಕ್ಕೂ ಒಂದು ಪೆನ್‌ಡ್ರೈವ್ ಇರಬೇಕು. ಪೆನ್‌ಡ್ರೈವ್ ಬಿಡಲಿ ಯಾರು ಬೇಡ ಅಂತಾರೆ. ಜವಾಬ್ದಾರಿ ಸ್ಥಾನದಲ್ಲಿರುವವರು ದಾಖಲೆ ಇಟ್ಟು ಮಾತಾಡಬೇಕು. ಒಬ್ಬ ಮಾಜಿ ಮುಖ್ಯಮಂತ್ರಿ ಆಗಿ ಕೇಂದ್ರ ಸಚಿವರಾಗಿ ಹೀಗೆ ಬೀದಿಯಲ್ಲಿ ಹೋಗೋ ತರ ಮಾತನಾಡಿದರೆ ಏನು ಉತ್ತರ ಕೊಡೋಕೆ ಆಗುತ್ತದೆ ಎಂದು ಟಕ್ಕರ್ ಕೊಟ್ಟರು.

ಒಟ್ಟಿನಲ್ಲಿ ಸದ್ಯಕ್ಕೆ 60% ಕಮಿಷನ್ ಆರೋಪಾಸ್ತ್ರ ಸದ್ದು ಮಾಡ್ತಿದೆ. ಈ ಅಸ್ತ್ರವನ್ನೂ ಸರ್ಕಾರದ ವಿರುದ್ಧ ಪರಿಣಾಮಕಾರಿ ಪ್ರಯೋಗಕ್ಕೆ ಜೆಡಿಎಸ್ ಜೊತೆ ಬಿಜೆಪಿ ತಯಾರಿ ಮಾಡಿಕೊಳ್ತಿದೆ. ಆ ಮೂಲಕ 40% ಆರೋಪದ ಸೇಡಿಗೆ ಕೇಸರಿ ಪಡೆ ಮುಂದಾಗಿದೆ.

## 60% ಕಮಿಷನ್‌ಗೆ ದಾಖಲೆ ಕೇಳಿದ್ದ ಸಿದ್ದರಾಮಯ್ಯಗೆ ಕುಮಾರಸ್ವಾಮಿ ತಿರುಗೇಟು



ಬೆಂಗಳೂರು, ಜ. 6: ಆಧಾರವಿಲ್ಲದೆ ಆರೋಪದ ಮಾತೆಲ್ಲಿ ಬಂತು ಮಾನ್ಯ ಮುಖ್ಯಮಂತ್ರಿಗಳೇ ನಿಮ್ಮ ಪಕ್ಷದ ಪರವೇ ಇರುವ ಗುತ್ತಿಗೆದಾರರು, ತುಮಕೂರಿನ ನಿಮ್ಮ ಕಾಂಗ್ರೆಸ್ ಪಕ್ಷದ ಮುಖಂಡರೇ ಮಾಡಿದ ಆರೋಪ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ಮಾಡಿದ್ದಾರೆ. ಆ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಮತ್ತೆ ಕಿಡಿಕಾರಿರುವ ಅವರು, 60% ಕಮಿಷನ್ ವಿಚಾರವಾಗಿ ದಾಖಲೆ ಕೊಡಿ ಎಂದಿದ್ದ ಸಿಎಂ ಸಿದ್ದರಾಮಯ್ಯಗೆ ತಿರುಗೇಟು ನೀಡಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಹೆಚ್.ಡಿ.ಕುಮಾರಸ್ವಾಮಿ, ನಮ್ಮ ಪಕ್ಷದ ಸರಕಾರಕ್ಕಿಂತ ಹಿಂದಿನ ರಾಜ್ಯ ಬಿಜೆಪಿ ಸರಕಾರವೇ ವಾಸಿ ಇತ್ತು ಎಂದು ಅಲವತ್ತುಕೊಂಡಿದ್ದರು ನಿಮ್ಮ ಪಕ್ಷದ ಗುತ್ತಿಗೆದಾರರು! ಕಾಂಗ್ರೆಸ್ ಸರಕಾರದಲ್ಲೂ 40% ಕಮಿಷನ್ ಸುಲಿಗೆ ಮಾಡಲಾಗುತ್ತಿದೆ ಎಂದು ಅವರು ನೇರವಾಗಿ ಆರೋಪಿಸಿದ್ದರು. ಕಮೀಶನ್ ವ್ಯವಹಾರ ಇಲ್ಲ ಎಂದಾದರೆ, 'ಯಾಕಪ್ಪಾ ಹಾಗೆ ಹೇಳಿದಿರಿ' ಎಂದು ಅವರನ್ನೇ ಕರೆದು ಕೇಳಬೇಕಿತ್ತು. ಕೇಳಲಿಲ್ಲ ಯಾಕೆ ಎಂದು ಪ್ರಶ್ನಿಸಿದ್ದಾರೆ.

ಪ್ರತಿ ಆರೋಪಕ್ಕೂ ಈಗ ದಾಖಲೆ ಕೇಳುವ ನೀವು, ಬಿಜೆಪಿ ಸರಕಾರದ ಮೇಲೆ 40% ಕಮೀಶನ್ ಆರೋಪ ಮಾಡಿ, ಪುಟಗಟ್ಟಲೇ ಜಾಹೀರಾತು ಕೊಟ್ಟರಲ್ಲಾ.. ಆಗ ಎಷ್ಟು ದಾಖಲೆ ನೀಡಿದ್ದೀರಿ. ನಿಮ್ಮ ರಾಜಕೀಯ ಜೀವನದಲ್ಲಿ ಎಂದಾದರೂ ದಾಖಲೆ ಇಟ್ಟು ಆರೋಪ ಮಾಡಿದ್ದೀರಾ.

ದಾವಣಗೆರೆ ಗುತ್ತಿಗೆದಾರನೊಬ್ಬ ದಯಾಮರಣ ಕರುಣಿಸಿ ಎಂದು ನಿಮ್ಮ ಘನ ಸನ್ನಿಧಾನಕ್ಕೆ ಹಾಗೂ ಮಾನ್ಯ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ಅವರಿಗೆ ಬಾಕಿ ಹಣ ಕೊಡಿಸುತ್ತೀರೋ ಅಥವಾ ದಯಾಮರಣ ಕರುಣಿಸುತ್ತೀರೋ..? ಕಮಿಷನ್ ದುರಾಸೆ ಬಿಟ್ಟು ಮೊದಲು ಆ ಗುತ್ತಿಗೆದಾರನನ್ನು ರಕ್ಷಿಸಿ. 60% ಕಮಿಷನ್! ಮುಖ್ಯಮಂತ್ರಿ ಹಿಟ್ ಅಂಡ್ ರನ್!! ಎಂದು ವಾಗ್ದಾಳಿ ಮಾಡಿದ್ದಾರೆ.

ಇನ್ನು 60 ಪರ್ಸೆಂಟ್ ಆರೋಪವನ್ನೇ ದಾಳ ಮಾಡಿಕೊಂಡಿರುವ ಬಿಜೆಪಿ ನಾಯಕರು ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸುತ್ತಿದ್ದಾರೆ. ಮಾಜಿ ಸಚಿವ ಅಶ್ವತ್ಥ್ ನಾರಾಯಣ್, ಸಂಸದ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಸರ್ಕಾರದ ವಿರುದ್ಧ ಪರ್ಸಂಟೇಜ್ ಬಾಣ ಹೂಡಿದ್ದಾರೆ.

# ಮೈಸೂರು ಬಸವಬಳಗಗಳ ಒಕ್ಕೂಟ ನೂತನ ಅಧ್ಯಕ್ಷರಾಗಿ ಬಿ.ಕೆ.ನಾಗರಾಜು ಆಯ್ಕೆ

ಮೈಸೂರು,ಜ.6(ಎಸ್‌ಪಿಎನ್)–2025ನೇ ಸಾಲಿನ ಮೈಸೂರು ಬಸವ ಬಳಗಗಳ ಒಕ್ಕೂಟದ ನೂತನ ಅಧ್ಯಕ್ಷರಾಗಿ ಬಿ.ಕೆ.ನಾಗರಾಜು ಸರ್ವಾನುಮತದಿಂದ ಸೋಮವಾರ ಆಯ್ಕೆಯಾದರು.


ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಬಸವ ಬಳಗಗಳ ಒಕ್ಕೂಟದ ವತಿಯಿಂದ ಏರ್ಪಡಿಸಿದ್ದ ಬಸವ ಜಯಂತಿ ಕೃತಜ್ಞತಾ ಸಮಾರಂಭದಲ್ಲಿ ವೀರಶೈವ ಲಿಂಗಾಯತ ಮುಖಂಡರ ಸಮನ್ವಯ ಸಮಿತಿ ಸೂಚಿಸಿದ ಅಭ್ಯರ್ಥಿಯನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಮ್ಮುಖದಲ್ಲಿ ಘೋಷಿಸಲಾಯಿತು.

ನಂತರ ಬಸವ ಬಳಗಗಳ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷ ಎಂ.ಪ್ರದೀಪ್ ಕುಮಾರ್, ನೂತನ ಅಧ್ಯಕ್ಷ ಬಿ.ಕೆ.ನಾಗರಾಜು ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಹಿನಕಲ್ ಬಸವರಾಜು, ಪ್ರಧಾನ ಕಾರ್ಯದರ್ಶಿ ದೂರ ಶಿವಕುಮಾರ್, ಉಪಾಧ್ಯಕ್ಷ ನಟರಾಜ್, ಕಾರ್ಯದರ್ಶಿಗಳಾದ ಎನ್.ಜಿ.ಗಿರೀಶ್, ಚಿಕ್ಕಳ್ಳಿ ಕುಮಾರ್, ವೀರಶೈವ ಸ್ನೇಹ ಬಳಗದ ಅಧ್ಯಕ್ಷ ಪರಶಿವಪ್ಪ, ಉಪಾಧ್ಯಕ್ಷ ಮಹದೇವಪ್ಪ, ಕೋಶಾಧ್ಯಕ್ಷ ಸುರೇಶ್, ನಿರ್ದೇಶಕರಾದ ರವಿ, ಪ್ರಕಾಶ್, ಪ್ರಸಾದ್ ಬಾಬು, ಶ್ರೀಕಂಠಮೂರ್ತಿ, ಕ್ಯಾತನಹಳ್ಳಿ ಪ್ರಕಾಶ್, ಮಹೇಶ್, ಕನ್ನಡ ಪರ ಹೋರಾಟಗಾರ ಪ್ರತಿಧ್ವನಿ ಪ್ರಸಾದ್ ಉಪಸ್ಥಿತರಿದ್ದರು.



ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಮ್ಮುಖದಲ್ಲಿ ನೂತನ ಅಧ್ಯಕ್ಷ ಬಿ.ಕೆ.ನಾಗರಾಜು ಹಾಗೂ ನಿಕಟಪೂರ್ವ ಅಧ್ಯಕ್ಷ ಕೆ.ಪ್ರದೀಪ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

## ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ನಿಖಿಲ್ ಕುಮಾರಸ್ವಾಮಿ ಅಭಿಮಾನಿಗಳ ಬಳಗದ 2025ನೇ ವರ್ಷದ ಕ್ಯಾಲೆಂಡರ್ ಅನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಿಡುಗಡೆ ಮಾಡಿದರು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ. ರಾಮು, ಎಂ. ಬಾಲಕೃಷ್ಣ, ವರುಣ ಜೆಡಿಎಸ್ ಅಧ್ಯಕ್ಷ ಗಂಗಾಧರಗೌಡ, ಕುಮಾರ್ ಬೀಡನಹಳ್ಳಿ, ರಾಮಕೃಷ್ಣ, ಚಂದ್ರಶೇಖರ್, ಧರ್ಮಪಾಲ್‌ಗೌಡ, ಸುಬ್ಬಣ್ಣ, ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

# ಸಂಗೀತ ವಿವಿ ಭರತನಾಟ್ಯ ಪರೀಕ್ಷೆಯಲ್ಲಿ ನೃತ್ಯ ವಿದ್ಯಾಪೀಠದ ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆ

ಮೈಸೂರು, ಜ.6(ಎಸ್‌ಪಿಎನ್)– ಮೈಸೂರಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯವು ನಡೆಸಿದ ಭರತನಾಟ್ಯ ಪರೀಕ್ಷೆಯಲ್ಲಿ ವಿಜಯನಗರದಲ್ಲಿರುವ ನೃತ್ಯ ವಿದ್ಯಾಪೀಠದ ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಶೇ.100ರಷ್ಟು ಫಲಿತಾಂಶ ಪಡೆದಿದೆ.

ಭರತನಾಟ್ಯ ಜೂನಿಯರ್ ವಿಭಾಗದಲ್ಲಿ 40 ವಿದ್ಯಾರ್ಥಿಗಳಲ್ಲಿ ಸೀನಿಯರ್ ವಿಭಾಗದಲ್ಲಿ ಏಳು ವಿದ್ಯಾರ್ಥಿಗಳು, ವಿದ್ವತ್ ಪೂರ್ವದಲ್ಲಿ ಆರು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಎಲ್ಲ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಭರತನಾಟ್ಯ ಜೂನಿಯರ್ ವಿಭಾಗದಲ್ಲಿ 40 ವಿದ್ಯಾರ್ಥಿಗಳಲ್ಲಿ 31 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಎಂಟು ವಿದ್ಯಾರ್ಥಿಗಳು ಪ್ರಥಮ, ಒಬ್ಬರು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ. ವಿದ್ಯಾರ್ಥಿನಿ ಚೇತನಾ ಶೇ.94.25ಅಂಕಗಳನ್ನು ಪಡೆದಿದ್ದಾರೆ. ಭರತನಾಟ್ಯ ಸೀನಿಯರ್ ವಿಭಾಗದಲ್ಲಿ ಏಳು ವಿದ್ಯಾರ್ಥಿಗಳಲ್ಲಿ ಮೂವರು ಡಿಸ್ಟಿಂಕ್ಷನ್, ಮೂವರು ಪ್ರಥಮ, ಓರ್ವ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿ ಅನನ್ಯ ಸಜ್ಜನರ್ ಶೇ. 87.33ರಷ್ಟು ಅಂಕಗಳಿಸಿದ್ದಾರೆ.

ವಿದ್ವತ್ ಪೂರ್ವ ವಿಭಾಗದಲ್ಲಿ ಆರು ವಿದ್ಯಾರ್ಥಿಗಳಲ್ಲಿ ಮೂವರು ಡಿಸ್ಟಿಂಕ್ಷನ್, ಮೂವರು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ವಿದ್ಯಾರ್ಥಿನಿ ನಯನಾ ನಾಗರಾಜ್ ಶೇ.83.60 ಅಂಕಗಳನ್ನು ಪಡೆದಿದ್ದಾರೆ. ನೃತ್ಯ ವಿದ್ಯಾಪೀಠವು ಕಳೆದ 20 ವರ್ಷಗಳಿಂದ ಕಲಾ ಸೇವೆಯಲ್ಲಿ ನಿರತವಾಗಿದೆ ಎಂದು ಎಂದು ನೃತ್ಯವಿದ್ಯಾಪೀಠದ ನಿರ್ದೇಶಕಿ ವಿದುಷಿ ಸಿ.ಎನ್. ಅನಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕುಸಿತ

## ಎಂಟನೇ ತರಗತಿ ನಂತರ ಶಾಲೆ ತೊರೆಯುವವರ ಸಂಖ್ಯೆ ಹೆಚ್ಚಳ!

ಬೆಂಗಳೂರು,ಜ.6– ಕರ್ನಾಟಕದ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕುಸಿತವಾಗುತ್ತಿದೆ, ಎಂಟನೇ ತರಗತಿಯ ನಂತರ ಶಾಲೆ ತೊರೆಯುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವಾಲಯ ಬಿಡುಗಡೆ ಮಾಡಿದ 2023–24ನೇ ಸಾಲಿನ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ (ಯುಡೈಸ್) ವರದಿ ಹೇಳಿದೆ.

ಶಾಲೆ ತೊರೆಯುವವರ ಪ್ರಮಾಣ ಮೂರರಿಂದ ಐದನೇ ತರಗತಿಯ ನಡುವೆ ಶೇ 2, ಆರರಿಂದ ಎಂಟನೇ ತರಗತಿಯ ನಡುವೆ ಶೇ 2.7 ಹಾಗೂ 8ನೇ ತರಗತಿಯ ನಂತರ ಶೇ 18.7ರಷ್ಟಿದೆ. 2022–23ನೇ ಸಾಲಿಗೆ ಹೋಲಿಸಿದರೆ 4.72 ಲಕ್ಷ ದಾಖಲಾತಿ ಕಡಿಮೆಯಾಗಿದೆ. ಪೂರ್ವ ಪ್ರಾಥಮಿಕದಿಂದ 12ನೇ ತರಗತಿಯವರೆಗೆ ರಾಜ್ಯದ ಎಲ್ಲ ಶಾಲೆಗಳೂ ಸೇರಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 1,19,26,303 ಇದೆ.

ಸರ್ಕಾರಿ ಶಾಲೆಗಳಲ್ಲಿ 2023–24ನೇ ಸಾಲಿನಲ್ಲಿ 49,85,661 ದಾಖಲಾತಿ ಇದೆ. 2022–23ಕ್ಕೆ ಹೋಲಿಸಿದರೆ 3,41,560 ಕಡಿಮೆಯಾಗಿದೆ. ಖಾಸಗಿ ಶಾಲೆಗಳ ಪ್ರವೇಶದಲ್ಲಿಯೂ ಇಳಿಮುಖವಾಗಿದೆ. 2022–23ರಲ್ಲಿ 55,59,281 ವಿದ್ಯಾರ್ಥಿಗಳು ಇದ್ದರೆ, 2023–24ನೇ ಸಾಲಿನಲ್ಲಿ 54,80,677 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

**ಒಂದನೇ ತರಗತಿಗೆ ಪ್ರವೇಶದಲ್ಲಿ ಏರಿಕೆ:** ರಾಜ್ಯದ ಅಂಗನವಾಡಿ, ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಆರಂಭವಾದ ನಂತರ ಆಂಗ್ಲ ಮಾಧ್ಯಮ ಒಂದನೇ ತರಗತಿಗೆ ಪ್ರವೇಶದಲ್ಲಿ ಹೆಚ್ಚಳವಾಗುತ್ತಿದೆ. 2023–24ರಲ್ಲಿ 9,45,325 ಮಕ್ಕಳು ಒಂದನೇ ತರಗತಿಗೆ ಪ್ರವೇಶ ಪಡೆದಿದ್ದಾರೆ. ಅವರಲ್ಲಿ 3,91,940 ಮಕ್ಕಳು ಅಂಗನವಾಡಿಗಳಿಂದ ಬಂದಿದ್ದಾರೆ. ವರದಿ ಪ್ರಕಾರ ರಾಜ್ಯದಲ್ಲಿ 1,572 ಶಾಲೆಗಳಲ್ಲಿ ಕಾಯಂ ಶಿಕ್ಷಕರಿಲ್ಲ, 7,821 ಏಕ ಶಿಕ್ಷಕ ಶಾಲೆಗಳು. ಈ 2,74,814 ಮಕ್ಕಳು ದಾಖಲಾಗಿದ್ದಾರೆ. 1,078 ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಶೂನ್ಯವಾಗಿದೆ.

## ಜ.17ಕ್ಕೆ ರೋಟರಿ ಕದಂಬ ರಂಗ ಪ್ರಶಸ್ತಿ ಪ್ರದಾನ

ಮೈಸೂರು, ಜ.6(ಜಿಎ)–ರೋಟರಿ ಕದಂಬ ರಂಗ ಪ್ರಶಸ್ತಿ ಸಮಾರಂಭವನ್ನು ಜ.17ರಂದು ಮೈಸೂರಿನ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ್ ಕದಂಬ ಈ ವಿಷಯ ತಿಳಿಸಿ, ರಂಗ ಭೂಮಿಯಲ್ಲಿ ಸಾಧನೆ ಮಾಡಿರುವ ರಂಗಕರ್ಮಿಗಳಿಗೆ ರೋಟರಿ ಕದಂಬ ರಂಗ ಪ್ರಶಸ್ತಿ ಪ್ರದಾನ ಮಾಡುತ್ತಿದ್ದು, ಈ ಬಾರಿ ಯು.ಎಸ್.ರಾಮಣ್ಣ, ಅಶ್ವಥ್ ಕದಂಬ, ಎಸ್.ಧನಂಜಯ್ ಮತ್ತು ದಿಶಾ ರಮೇಶ್ ಅವರುಗಳಿಗೆ ಪ್ರದಾನ ಮಾಡಲಾಗುತ್ತಿದೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ನಟ ಮಂಡ್ಯ ರಮೇಶ್, ರೋಟರಿ ಉತ್ತರದ ಅಧ್ಯಕ್ಷ ಪಿ.ಪ್ರಭಾಕರ್ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಿ.ತಪ್ಪಣ್ಣ, ಡಿ.ನಾಗೇಂದ್ರ ಕುಮಾರ್ ಉಪಸ್ಥಿತರಿದ್ದರು.

# ಓದಿನ ಶೈಲಿಯಲ್ಲಿ ಬದಲಾವಣೆ ಕಂಡುಕೊಳ್ಳಲು ವಿದ್ಯಾರ್ಥಿಗಳಿಗೆ ಸಲಹೆ



ಮೈಸೂರು ಕುವೆಂಪುನಗರದ ಅನಾಥ ಸೇವಾಶ್ರಮ ಟ್ರಸ್ಟ್, ಎಂಎಎಸ್‌ವಿಎಸ್ ಗುರುಕುಲ ಪಿಯು ಕಾಲೇಜಿನ ವಾರ್ಷಿಕೋತ್ಸವ ಸಮಾರಂಭ

ಮೈಸೂರು,ಜ.6(ಎಸ್‌ಪಿಎನ್)– ಸಾಧನೆಗೆ ಪೂರಕ ಅಧ್ಯಯನ ಶೈಲಿಯನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು ಎಂದು ಅನಾಥ ಸೇವಾಶ್ರಮ ಟ್ರಸ್ಟ್ ವಿಶ್ವಸ್ಥ ಸಮಿತಿಯ ಉಪಾಧ್ಯಕ್ಷ ರಾಘವೇಂದ್ರ ಬಿ.ಪಾಟೀಲ ಹೇಳಿದರು.

ಮೈಸೂರು ಕುವೆಂಪುನಗರದ ಅನಾಥ ಸೇವಾಶ್ರಮ ಟ್ರಸ್ಟ್, ಎಂಎಎಸ್‌ವಿಎಸ್ ಗುರುಕುಲ ಪಿಯು ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾಧಕರ ಹಾದಿಯಲ್ಲಿ ವಿದ್ಯಾರ್ಥಿಗಳು ಸಾಗಿದಾಗ ಮಾತ್ರ ಯಶಸ್ಸು ಗಳಿಸಲು ಸಾಧ್ಯ ಎಂದರು.

ಪಿಯು ಶಿಕ್ಷಣದಲ್ಲಿ ಓದಿನ ಶೈಲಿಯ ಬದಲಾವಣೆ ಅನಿವಾರ್ಯ. ಅಗತ್ಯಕ್ಕೆ ಅನುಗುಣವಾಗಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾದ ಹಾದಿ, ಮಾಧ್ಯಮ ಹಾಗೂ ಮನಸ್ಸಿನ ಶಕ್ತಿ ಬಹಳ ಮುಖ್ಯವಾಗಿರುತ್ತದೆ. ಮನಸ್ಸಿನ ಶಕ್ತಿ ಪ್ರಬಲ ವಾಗಿದ್ದರೆ ಸಾಧನೆಯ ಹಾದಿ ಬಹಳ ಮುಖ್ಯ. ಈ ಸಮಯದಲ್ಲಿ ಸಾಕಷ್ಟು ಶ್ರಮದೊಂದಿಗೆ ಉತ್ತಮ ಫಲಿತಾಂಶ ಪಡೆಯುವಂತೆ ಕರೆ ನೀಡಿದರು.

ಕಾರ್ಯಕ್ರಮವನ್ನು ವಿಶ್ವಸ್ಥ ಸಮಿತಿಯ ಕಾರ್ಯದರ್ಶಿ ಎಸ್.ಕೆ.ಬಸವರಾಜನ್ ಉದ್ಘಾಟಿಸಿದರು. ಈ ವೇಳೆ ಕಾಲೇಜಿನ ವಾರ್ಷಿಕ ಸಂಚಿಕೆಯನ್ನು ಗಣ್ಯರು ಬಿಡುಗಡೆ ಮಾಡಿದರು. ಕಳೆದ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕರಿಸಲಾಯಿತು.

ಕಾಲೇಜಿನ ವಿದ್ಯಾರ್ಥಿಗಳು ಭಾರತೀಯ ಸಾಂಪ್ರಾಯಿಕ ಶೈಲಿಯ ನೃತ್ಯಗಳು, ಮಾರ್ಷಲ್ ಆರ್ಟ್ಸ್, ಯೋಗ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ಸಂಭ್ರಮಿಸಿದರು. ವೇದಿಕೆಯಲ್ಲಿ ವಿಶ್ವಸ್ಥ ಸಮಿತಿಯ ಶ್ರೀಕಂಠಮೂರ್ತಿ, ಎಲ್.ಎಸ್. ಶಿವರಾಮಯ್ಯ, ದ್ಯಾಮಪ್ಪ, ಶ್ರೀನಿವಾಸ, ಕಾಲೇಜಿನ ಪ್ರಾಂಶುಪಾಲ ಪ್ರೊ. ಪಿ.ಡಿ. ಕನ್ನೀಕರ್, ಉಪ ಪ್ರಾಂಶುಪಾಲೆ ಡಾ.ಬಿ.ಜಿ. ತನುಜ ಸೇರಿದಂತೆ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಪೋಷಕರು ಉಪಸ್ಥಿತರಿದ್ದರು.

# ಭಾಷಾ ದಾಖಲೀಕರಣ ಕುರಿತ ತರಬೇತಿ ಕಾರ್ಯಾಗಾರಕ್ಕೆ ಚಾಲನೆ



ಮೈಸೂರು, ಜ.6–ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ (ಭಾ.ಭಾ.ಸಂ.), ಭಾಷಾ ದಾಖಲೀಕರಣ ಕುರಿತ ತರಬೇತಿ ಕಾರ್ಯಾಗಾರ ಮತ್ತು ತೋಡ ಭಾಷಾ ಬಾಲಬೋಧೆಯ ಅಂತಿಮಗೊಳಿಸುವಿಕೆಯ ಕಮ್ಮಟಗಳ ಉದ್ಘಾಟನಾ ಸಮಾರಂಭವು ಸಂಸ್ಥೆಯ ಪ್ರಿವ್ಯೂ ಥಿಯೇಟರಲ್ಲಿ ಜರುಗಿತು.

ಅಧ್ಯಕ್ಷತೆ ವಹಿಸಿದ್ದ ಪ್ರಾಧ್ಯಾಪಕ ಶೈಲೇಂದ್ರ ಮೋಹನ್ ಅವರು ಭಾಷೆಯ ಬಗ್ಗೆ ಸಾರ್ವಜನಿಕರ ಮತ್ತು ಭಾಷಾಭಿಮಾನಿಗಳ ದೃಷ್ಟಿಕೋನಗಳ ಕುರಿತು ಮಾಡಿದರು. ಅವರು ಭಾಷಾ ದಾಖಲೀಕರಣದ ಉದ್ದೇಶಗಳ ಜೋಡಣೆಯನ್ನು 'ವಿಕಸಿತ ಭಾರತ'ದ ರಾಷ್ಟ್ರೀಯ ದೃಷ್ಟಿಕೋನ ಮತ್ತು ಭಾಷಾ ಅಭಿವೃದ್ಧಿಗೆ ಸುಧಾರಿತ ತಂತ್ರಜ್ಞಾನವನ್ನು ಉತ್ತೇಜಿಸುವಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಪಾತ್ರದ ಬಗ್ಗೆ ಚರ್ಚಿಸಿದರು. ಭಾಷಾ ದಾಖಲಾತಿಯಲ್ಲಿ ಔಪಚಾರಿಕ ಮತ್ತು ಕ್ರಿಯಾತ್ಮಕ ಭಾಷಾಶಾಸ್ತ್ರ ಎರಡನ್ನೂ ಸಂಯೋಜಿಸುವ ಪ್ರಾಮುಖ್ಯತೆಯನ್ನು ಪ್ರೊ ಮೋಹನ್ ಒತ್ತಿ ಹೇಳಿದರು.

ಪ್ರೊ.ಪಿ.ಆರ್.ಧರ್ಮೇಶ್ ಫರ್ನಾಂಡಿಸ್ ಅವರು ಭಾಷಾ ದಾಖಲೀಕರಣದ ಪ್ರಾಮುಖ್ಯತೆಯನ್ನು ಹಾಗೂ ಅದರ ಮೌಲ್ಯವನ್ನು ಶಿಬಿರಾರ್ಥಿಗಳಿಗೆ ವಿವರಿಸಿದರು. ಭಾಷಾ ದಾಖಲಾತಿಯ ಬಗ್ಗೆ ಅವರ ಸ್ವಂತ ಅನುಭವವನ್ನು ಹಂಚಿಕೊಳ್ಳುತ್ತಾ, ಅಂತಹ ಶೈಕ್ಷಣಿಕ ಉಪಕ್ರಮಗಳು ತಮ್ಮ ವೃತ್ತಿಜೀವನದ ಪಥವನ್ನು ಹೇಗೆ ಧನಾತ್ಮಕವಾಗಿ ಪ್ರಭಾವಿಸಿದೆ ಎಂಬುದನ್ನು ತಿಳಿಸಿದರು. ಈ ಕಾರ್ಯಾಗಾರವು ಭಾಷಾ ವೈವಿಧ್ಯತೆಯನ್ನು ಸಂರಕ್ಷಿಸಲು ಮಾತ್ರವಲ್ಲದೆ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸಲು ಸಹ ಅತ್ಯಗತ್ಯ ಎಂದು ಹೇಳಿದರು.

ರಾಷ್ಟ್ರದಾದ್ಯಂತ 17 ರಾಜ್ಯಗಳಿಂದ 65 ಶಿಬಿರಾರ್ಥಿಗಳು ಈ 15 ದಿನಗಳ ಕಾರ್ಯಾಗಾರದಲ್ಲಿ ಭಾಗವಹಿಸುತ್ತಿದ್ದಾರೆ. ಕಾರ್ಯಾಗಾರವು ಜ.21ರಂದು ಮುಕ್ತಾಯಗೊಳ್ಳಲಿದೆ.

ಈ ಕಮ್ಮಟದ ಜೊತೆ ಜೊತೆಗೆ ನೀಲಗಿರಿ ಬೆಟ್ಟಗಳಲ್ಲಿನ ಸಣ್ಣ ಸಮುದಾಯವು ಮಾತನಾಡುವ ತೋಡಾ ಭಾಷೆಯ ಪುನರುಜ್ಜೀವನ ಮತ್ತು ನಿರಂತರ ಬಳಕೆಗೆ ಅಗತ್ಯ ಸಂಪನ್ಮೂಲವಾದ ತೋಡ ಭಾಷಾ ಬಾಲಬೋಧೆಯ ಅಂತಿಮಗೊಳಿಸುವಿಕೆಯ ಆಯೋಜಿಸಲಾಗಿದೆ. ಒಂಬತ್ತು ತೋಡ ಭಾಷಾ ತಜ್ಞರು ಈ ಭಾಷಾ ಸಾಮಗ್ರಿಯನ್ನು ಅಂತಿಮಗೊಳಿಸುವಲ್ಲಿ ತೊಡಗಿಸಿಕೊಂಡಿದ್ದಾರೆ.

ನೆಲೆ ಇಲ್ಲದೇ ಸಂಕಷ್ಟಕ್ಕೆ ಸಿಲುಕಿದ್ದ

# ಹಂದಿಜೋಗಿ ಕುಟುಂಬಗಳು ವಿದ್ಯಾಪೀಠಕ್ಕೆ ಸ್ಥಳಾಂತರ

## ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು


ಪರಿಶಿಷ್ಟ ಜಾತಿ ಹಂದಿಜೋಗಿ ಸಮುದಾಯದ ಕುಟುಂಬವನ್ನು ತಹಸೀಲ್ದಾರ್ ಭೇಟಿ ಮಾಡಿ ಸಾಂತ್ವನ ಹೇಳಿದರು.

### ಮಾಜಿ ಸಚಿವರಿಂದ ಸಾಂತ್ವನ

ರಾಜ್ಯ ಬಿಜೆಪಿ ಉಪಾಧ್ಯಕ್ಷ ಹಾಗೂ ಮಾಜಿ ಸಚಿವ ಎನ್.ಮಹೇಶ್ ತಾಲೂಕಿನ ಹೊರಳವಾಡಿ ಹೊಸೂರು ಗ್ರಾಮದ ಹಂದಿಜೋಗಿ ಸಮುದಾಯದ ಕುಟುಂಬದವರನ್ನು ಭೇಟಿ ಮಾಡಿ ಹೊದಿಕೆಗಳನ್ನು ವಿತರಿಸಿ ಸಾಂತ್ವನ ಹೇಳಿದರು. ಬಳಿಕ ಮಾತನಾಡಿದ ಅವರು, ಕಳೆದ 6 ದಿನಗಳಿಂದ ಸಂತ್ರಸ್ಥರು ರಸ್ತೆಬದಿ ಮಲಗಿದ್ದರೂ ತಾಲೂಕು ಆಡಳಿತದ ಪರ್ಯಾಯ ಕ್ರಮ ಕೈಗೊಳ್ಳದಿರುವುದು ಖಂಡನೀಯ. ಕಾಂಗ್ರೆಸ್ ಸರ್ಕಾರ ಹಾಗೂ ತಾಲೂಕು ಆಡಳಿತ ನಿಷ್ಕ್ರಿಯವಾಗಿದೆಯೇ ಎಂದು ಈ ಸಂದರ್ಭ ಆಕ್ರೋಶ ವ್ಯಕ್ತಪಡಿಸಿರಲ್ಲದೆ ಈ ಕೂಡಲೇ ತಾಲೂಕು ಆಡಳಿತ ಸಂತ್ರಸ್ಥರಿಗೆ ಪರ್ಯಾಯ ಸೌಕರ್ಯ ಕಲ್ಪಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ನಂಜನಗೂಡು, ಜ.6– ತಾಲೂಕಿನ ಸಿಂಧುವಳ್ಳಿ ಗ್ರಾಮದ ಸರ್ವೇ ನಂ.392ರಲ್ಲಿ ತಾಲೂಕಿನ ವಸತಿ ರಹಿತ ಹಂದಿ ಜೋಗಿ ಸಮುದಾಯದ ಕುಟುಂಬಗಳಿಗೆ ನಿವೇಶನ ನೀಡಲು ಸ್ಥಳ ನಿಗದಿ ಮಾಡಲಾಗಿದ್ದು, ಇದೀಗ ಸಂಕಷ್ಟಕ್ಕೆ ಸಿಲುಕಿರುವ ಹೊರಳವಾಡಿ ಹೊಸೂರು ಗ್ರಾಮದ 2 ಹಂದಿಜೋಗಿ ಕುಟುಂಬಗಳನ್ನು ತಾತ್ಕಾಲಿಕವಾಗಿ ಗೋಳೂರು ಸಮೀಪದಲ್ಲಿರುವ ವಿದ್ಯಾಪೀಠಕ್ಕೆ ಸ್ಥಳಾಂತರಿಸಲು ತೀರ್ಮಾನಿಸಿದ್ದೇವೆ ಎಂದು ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ತಿಳಿಸಿದರು.

ಜಮೀನಿನ ಮಾಲೀಕ ಹೊರ ಹಾಕಿದ್ದರಿಂದ ಗುಡಿಸಲು ಕಳೆದುಕೊಂಡು ನೆಲೆ ಇಲ್ಲದೆ ಬೀದಿಗೆ ಬಿದ್ದಿದ್ದ ತಾಲೂಕಿನ ಹೊರಳವಾಡಿ ಹೊಸೂರು ಗ್ರಾಮದ ಹಂದಿಜೋಗಿ ಸಮುದಾಯದ ಎರಡು ಕುಟುಂಬಗಳನ್ನು ಸೋಮವಾರ ಅಧಿಕಾರಿಗಳೊಂದಿಗೆ ಭೇಟಿ ಮಾಡಿದ ತಹಸೀಲ್ದಾರ್ ಸ್ವಾಂತನ ಹೇಳಿದರು.

ಈ ವೇಳೆ ಮಾತನಾಡಿದ ಸಂತ್ರಸ್ತ ಕುಟುಂಬಗಳು ನ್ಯಾಯಾಲಯದ ಆದೇಶದ ಹೆಸರಿನಲ್ಲಿ ಜಮೀನಿನ ಮಾಲೀಕರು ನಮ್ಮ ಮೇಲೆ ದಬ್ಬಾಳಿಕೆ ನಡೆಸಿದ್ದು, ಅವರ ವಿರುದ್ಧ ದೂರು ದಾಖಲಿಸಬೇಕು ಹಾಗೂ ಸ್ಥಳೀಯವಾಗಿ ವಾಸ್ತವ್ಯ ಹೂಡಲು ವಸತಿ ಸೌಕರ್ಯ ಕಲ್ಪಿಸಬೇಕು ಎಂದು ಅಳಲು ತೋಡಿಕೊಂಡರು.

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಮಾತನಾಡಿ, ಈಗಾಗಲೇ ತಾಲೂಕಿನ ಗೋಳೂರು ಗ್ರಾಮದ ಬಳಿಯ ವಿದ್ಯಾ ಪೀಠದ ಕೌಶಲಾಭಿವೃದ್ಧಿ ಇಲಾಖೆಗೆ ಸೇರಿದ ಜಾಗದಲ್ಲಿ ಸಂತ್ರಸ್ತ ಹಂದಿಜೋಗಿ ಕುಟುಂಬಕ್ಕೆ ತಾತ್ಕಾಲಿಕ ನೆಲೆ ಒದಗಿಸಿ ಸ್ಥಳಾಂತರಿಸಲಾಗುವುದು. ಅತಿ ಶೀಘ್ರ ಅವರಿಗೆ ತಾಲೂಕಿನ ಸಿಂಧುವಳ್ಳಿ ಗ್ರಾಮದ ಸರ್ವೇ ನಂ.392ರಲ್ಲಿ ತಾಲೂಕಿನ ವಸತಿ ರಹಿತ ಹಂದಿಜೋಗಿ ಕುಟುಂಬಗಳಿಗೆ ಎಲ್ಲಾ ಸೌಲಭ್ಯಗಳುಳ್ಳ ವಸತಿ ವ್ಯವಸ್ಥೆ ಕಲ್ಪಿಸಿ ಹಂಚಿಕೆ ಮಾಡಲಾಗುವುದು. ಜೊತೆಗೆ ರಾಜೀವ್ ಗಾಂಧಿ ವಸತಿ ಯೋಜನೆ ಅಡಿ ಮನೆ ನಿರ್ಮಿಸಿಕೊಡಲು ಕ್ರಮ ವಹಿಸಲಾಗುವುದು ಎಂದರು.

ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಭೀಮರಾವ್ ವಡ್ಡಾರ್ ಮಾತನಾಡಿ, ಸಂತ್ರಸ್ತ ಹಂದಿಜೋಗಿ ಕುಟುಂಬವನ್ನು ಸ್ಥಳಾಂತರಿಸಿ ಅವರಿಗೆ 1 ತಿಂಗಳ ಪಡಿತರ ಸೇರಿದಂತೆ ಅಡುಗೆ ಸಾಮಗ್ರಿಗಳನ್ನು ವಿತರಿಸಲಾಗುವುದು ಎಂದರು. ಈ ಸಂದರ್ಭ ತಾಪಂ ಇಓ ಜೆರಾಲ್ಡ್ ರಾಜೇಶ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಉಪಸ್ಥಿತರಿದ್ದರು.

# ಕನ್ನಡ ಭಾಷೆ ರಕ್ಷಣೆಗೆ ವಿಶೇಷ ಕಾನೂನು ಅಗತ್ಯ

ಕುವೆಂಪು ಜಯಂತಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್


ಗ್ರಂಥಪಾಲಕ ಸತೀಶ್, ಕವಿ ಗಣೇಶ್, ಭರತನಾಟ್ಯ ಪ್ರವೀಣೆ ಕುಮಾರಿ ಸಿಂಚನ ಅವರನ್ನು ಸನ್ಮಾನಿಸಲಾಯಿತು.

ಹುಣಸೂರು, ಜ.6– ಅಂದಿನಿಂದಲೂ ನಮ್ಮೊಂದಿಗೆ ಉತ್ತರ ಕರ್ನಾಟಕದ ಕನ್ನಡಿಗರು ಕನ್ನಡ ಭಾಷೆಗೆ ಒತ್ತು ನೀಡಿದ್ದಾರೆ. ಅದೇ ರೀತಿ ಕನ್ನಡ ಭಾಷೆ ರಕ್ಷಣೆಗೆ ವಿಶೇಷ ಕಾನೂನು ಅಗತ್ಯವಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ತಿಳಿಸಿದರು.

ನಗರದ ತಾಲೂಕು ಗ್ರಂಥಾಲಯದ ಆವರಣದಲ್ಲಿ ರಾಷ್ಟ್ರಕವಿ ಕುವೆಂಪು ಅವರ 120ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಕುವೆಂಪು ಅವರು ಕನ್ನಡ ನಾಡು, ನುಡಿಗೆ ಒತ್ತು ನೀಡಿ ಸಮಗ್ರ ಸಾಹಿತ್ಯದ ಮೂಲಕ ಕನ್ನಡ ಕಟ್ಟುವ ಕೆಲಸ ಮಾಡಿದ್ದರು. ಆದ್ದರಿಂದಲೇ ಮೊದಲ ಜ್ಞಾನಪೀಠ ಪ್ರಶಸ್ತಿ ಗೌರವ ದೊರೆತು ಕನ್ನಡ ಭಾಷೆ ವಿಶ್ವ ಮಟ್ಟದಲ್ಲಿ ಗುರುತಿಸಲು ಸಾಧ್ಯವಾಯಿತು ಎಂದರು. ಕುವೆಂಪು ಅವರು ಸಾಹಿತ್ಯದ ಮೂಲಕ ಸಮಾಜ ಅಂಕು ಡೊಂಕುಗಳನ್ನು ತಿದ್ದಿ, ವಿಚಾರಧಾರೆಯನ್ನು ಸಮರ್ಥವಾಗಿ ಮಂಡಿಸುವ ನಿಟ್ಟಿನಲ್ಲಿ ಸಾರ್ವಕಾಲೀಕ ವ್ಯಕ್ತಿಯಾಗಿ ನಿಂತರು. ಜಾತಿಯಿಂದ ದೂರ ವಿದ್ದು, ವಿಶ್ವ ಮಾನವ ಸಂದೇಶಗಳನ್ನು ಸಾರಿ ಶೂದ್ರ ಕವಿಯಾಗಿ ರೈತರ ಪರ ಧ್ವನಿಯಾಗಿದ್ದ ಅವರನ್ನು ಪಡೆದ ನಾವೇ ಧನ್ಯರು ಎಂದರು.

ಕವಿ, ಸಾಹಿತಿ ಜೆ.ಮಹಾದೇವ್ ಮಾತನಾಡಿ, ಕನ್ನಡ ಭಾಷೆ ಹಾಗೂ ಸಾಹಿತ್ಯದ ಅಭಿವ್ಯಕ್ತಿ ಸಾಧ್ಯತೆಗಳನ್ನು ವಿಶ್ವಮಾನ್ಯವಾಗಿಸಿ ಕನ್ನಡ ಸಾಹಿತ್ಯವನ್ನು ತನ್ನ ಕಾವ್ಯ ಪ್ರತಿಭೆಯಿಂದ ಶ್ರೀಮಂತಗೊಳಿಸಿದ ಕುವೆಂಪು ಅವರು ಕನ್ನಡ ಸಾರಸತ್ವ ಲೋಕದ ವಿರಾಟ್ ಪ್ರತಿಭೆ ಎಂದು ಬಣ್ಣಿಸಿದರು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಕ್ಕಳ ಸಾಹಿತ್ಯದಿಂದ ಮಹಾಕಾವ್ಯದವರೆಗೂ ತನ್ನ ಕಾವ್ಯ ಪ್ರತಿಭೆ ಹಾಗೂ ವಸ್ತು ವೈವಿಧ್ಯಗಳ ಮೂಲಕ ಕನ್ನಡದ ಸಾರಸತ್ವ ಲೋಕವನ್ನು ಬೆಳಗಿ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೊಸ ಮನ್ವಂತರಕ್ಕೆ ಭಾಷ್ಯ ಬರೆದ ಕುವೆಂಪು ಕನ್ನಡದ ಸಾಕ್ಷಿಪ್ರಜ್ಞೆಯಾಗಿ ಯುಗದಗಲ ಜಗದಗಲ ಶಾಶ್ವತ ಸ್ಥಾನ ಸಂಪಾದಿಸಿದ್ದಾರೆ ಎಂದು ವಿಶ್ಲೇಷಿಸಿದರು.

ವಿಶ್ವಮಾನವ ತತ್ವದ ಮೂಲಕ ಮನುಷ್ಯತ್ವದ ಪರಿಕಲ್ಪನೆಗೆ ಹೊಸ ವ್ಯಾಖ್ಯಾನ ಬರೆದ ಕುವೆಂಪು ತಮ್ಮ ಕೃತಿಗಳಲ್ಲಿ ಮನುಜ ಮತ, ವಿಶ್ವಪಥ, ಸರ್ವೋದಯ, ಸಮನ್ವಯ ಹಾಗೂ ಪೂರ್ಣದೃಷ್ಟಿ ಎಂಬ ಪಂಚಮಂತ್ರಗಳ ಮೂಲಕ ಮನುಷ್ಯ ಘನತೆಯ ಮಹತ್ವವನ್ನು ಸಾರಿ ಕಾಲಾತೀತ, ದೇಶಾತೀತ ವ್ಯಕ್ತಿತ್ವವಾಗಿ ನಮ್ಮ ಪ್ರಜ್ಞೆಯನ್ನು ನಿತ್ಯವೂ ಬೆಳಗುತ್ತಿದ್ದಾರೆ ಎಂದು ಬಣ್ಣಿಸಿದರು.

ಮೌಢ್ಯತೆ ವಿರುದ್ಧದ ವೈಚಾರಿಕ ಪ್ರಜ್ಞೆ, ಸರ್ವರಲ್ಲೂ ಸಮಾನತೆ, ನೊಂದವರ, ಶೋಷಿತರ ಪ್ರೀತಿ, ಸರ್ವರ ಏಳಿಗೆ, ಸಮಷ್ಟಿ ಪ್ರಜ್ಞೆಯಲ್ಲಿ ನಂಬಿಕೆ, ನೆಲ, ಜಲ, ಭಾಷೆ, ಪರಂಪರೆ, ರಾಷ್ಟ್ರೀಯ ಭಾವೈಕ್ಯ, ಕಟ್ಟುವ ಸಹನೆ ಇವೆಲ್ಲವೂ ಕುವೆಂಪು ಅವರ ಸಾಹಿತ್ಯಕ ಕೃತಿಗಳ ಗಟ್ಟಿ ದನಿಯಾಗಿ ನವ ಸಮಾಜ, ಸಮ ಸಮಾಜದ ನಿರ್ಮಾಣಕ್ಕೆ ಪೂರಕವಾದ ಆಶಯಗಳಾಗಿದ್ದವು ಎಂದು ಅಭಿಪ್ರಾಯಿಸಿದರು.

ತಾಲೂಕು ಕಸಾಪ ಅಧ್ಯಕ್ಷ ಹೆಚ್.ಕೆ. ಮಹದೇವ್ ಮಾತನಾಡಿದರು. ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಸೋಮಶೇಖರ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣ ಕುಮಾರ್, ಜಿಲ್ಲಾ ಕಸಾಪ ಉಪಾಧ್ಯಕ್ಷ ಎಸ್.ಜಯರಾಮ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಲೋಕೇಶ್, ತ್ರಿನೇಶ್, ಖಜಾಂಚಿ ಕೆ.ನಂಜುಂಡಸ್ವಾಮಿ, ವಾಸಕಿ, ಕುಮಾರ್, ಗಂಗಾಧರ್, ಶ್ರೀನಿವಾಸ್, ರಂಗ ಕಲಾವಿದ ಕುಮಾರ್ ಅರಸೇಗೌಡ ಇದ್ದರು.

## ಬಿಜೆಪಿ ತೊರೆದು ಜೆಡಿಎಸ್ ಸೇರ್ಪಡೆ


ಹೆಚ್.ಡಿ.ಕೋಟೆಯ ಜೆಡಿಎಸ್ ಕಚೇರಿಯಲ್ಲಿ ಮುಖಂಡರಾದ ಶಾಂತಿಪುರ ಎನ್.ಟಿ. ಜವರೇಗೌಡ, ಪುಟ್ಟಚೆನ್ನಮ್ಮ, ಸಿಗರಾಜು, ಶಿವಣ್ಣೇಗೌಡ, ರಾಜಣ್ಣ ಸೇರಿದಂತೆ ಇತರರು ಬಿಜೆಪಿ ತೊರೆದು ಜೆಡಿಎಸ್ ಸೇರ್ಪಡೆಯಾದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಎಂ.ರಾಜೇಂದ್ರ, ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ, ಮುಖಂಡರಾದ ನರಸಿಂಹೇಗೌಡ, ನಿಂಗೇಗೌಡ, ಪಟೇಲ್ ರಾಜೇಗೌಡ, ಶಿವಕುಮಾರ್, ಮಾದೇಗೌಡ, ಭೈರೇಗೌಡ, ಶಿವಾರಾಜುಗೌಡ, ಮಹೇಶ್ ಗೌಡ, ನಾಗೇಗೌಡ, ಓಕೆ ಮಹೇಂದ್ರ, ದೇವರಾಜೇಗೌಡ, ರಾಜಣ್ಣ, ಮಹೇಶ, ರಂಗೇಗೌಡ, ಶಿವಮೂರ್ತಿ ಇನ್ನಿತರರಿದ್ದರು.

## ಕೋಟೆ ಕೃಷಿಕ ಸಮಾಜಕ್ಕೆ ಆಯ್ಕೆ


ಹೆಚ್.ಡಿ.ಕೋಟೆ ತಾಲೂಕಿನ ಕೃಷಿಕ ಸಮಾಜದ ಅಧ್ಯಕ್ಷರಾಗಿ ಎ.ಜೆ.ಕಾಳೇಗೌಡ, ಉಪಾಧ್ಯಕ್ಷರಾಗಿ ಆರ್.ಗುರುಸ್ವಾಮಿ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿ ಜಯರಾಮೇಗೌಡ, ಖಜಾಂಚಿ ದೊಡ್ಡನೀಲಪ್ಪ, ಜಿಲ್ಲಾ ಪ್ರತಿನಿಧಿ ಆರ್.ಜೆ.ಸುರೇಶ್, ನಿರ್ದೇಶಕರಾಗಿ ಕೆಂಡಗಣ್ಣೇಗೌಡ, ಶಿವಸ್ವಾಮಿ, ಓಕೆ ಮಹೇಂದ್ರ, ಟಿ.ವೆಂಕಟೇಶ್, ಗೌಡೇಗೌಡ, ರಾಜೇಶ್, ಎ.ಎಸ್.ಸೋಮೇಶ್, ಎಸ್.ಗುರುಸ್ವಾಮಿ, ಸಿ.ಎನ್.ಸೋಮೇಶ್, ರಾಮಚಂದ್ರ ಆಯ್ಕೆಯಾಗಿದ್ದಾರೆ.

## ಕನ್ನಹಳ್ಳಿಯಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ


ಮೂಗೂರು ಸಮೀಪದ ಕನ್ನಹಳ್ಳಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಯನ್ನು ಗ್ರಾಮದ ಶಾಲಾ ಮಕ್ಕಳು ಅನಾವರಣಗೊಳಿಸಿದರು. ಈ ವೇಳೆ ಡಾ.ಬಿ.ಆರ್.ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು, ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಕೇಂದ್ರ ಸಚಿವ ಅಮಿತ್ ಶಾ ವಿರುದ್ಧ ಪ್ರತಿಭಟನೆ

ನಂಜನಗೂಡು, ಜ.6– ಅಂಬೇಡ್ಕರ್ ಬಗ್ಗೆ ಅವಹೇಳಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ತಾಲೂಕಿನ ಕವಲಂದೆ ಗ್ರಾಮದ ರಾಷ್ಟ್ರೀಯ ಹೆದ್ದಾರಿ ಬಳಿ ಕವಲಂದೆ, ಹರವೆ ಹೋಬಳಿಗಳ ದಲಿತ ಸಂಘಟನೆ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಅಮಿತ್ ಶಾ ಪ್ರತಿಕೃತಿ ದಹಿಸಿ, ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.


ಕವಲಂದೆ ಗ್ರಾಮದ ಬಳಿ ಅಮಿತ್ ಶಾ ಪ್ರತಿಕೃತಿ ದಹಿಸಿ, ರಸ್ತೆತಡೆ ನಡೆಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಸತ್ತ ಮೇಲೆ ನಮಗೆ ಸ್ವರ್ಗ ಸಿಗುವುದು ಬೇಡ. ಬದುಕಿರುವಾಗಲೇ ನಮಗೆ ಅಂಬೇಡ್ಕರ್ ಸಂವಿಧಾನದ ಮೂಲಕ ಸ್ವರ್ಗವನ್ನೇ ನೀಡಿದ್ದಾರೆ. ಅಂಬೇಡ್ಕರ್ ಬರೆದಿರುವ ಸಂವಿಧಾನ ದಿಂದಲೇ ಕೇಂದ್ರ ಗೃಹ ಸಚಿವರಾಗಿರುವ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು. ಅಮಿತ್ ಶಾ, ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದು ಖಂಡನೀಯ. ಅವರನ್ನು ದೇಶದಿಂದ ಗಡಿಪಾರು ಮಾಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ರಾಜ್ಯ ಬಂದ್‌ಗೆ ಕರೆ ನೀಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಅಂಬೇಡ್ಕರ್ ಅವರು ಬರಿ ಹೆಸರಲ್ಲ. ನಮ್ಮೆಲ್ಲರ ಉಸಿರಾಗಿದ್ದಾರೆ. ಸಂವಿಧಾನದ ಅಡಿಯಲ್ಲಿ ಕೇಂದ್ರ ಗೃಹ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿ ಇಂದು ಬಾಬಾ ಸಾಹೇಬರ ಬಗ್ಗೆ ಹಗುರವಾಗಿ ಮಾತನಾಡುತ್ತಿದ್ದಾರೆ. ಅಮಿತ್ ಶಾ, ಅಂಬೇಡ್ಕರ್ ಅವರ ಬಗ್ಗೆ ಮಾತನಾಡುವಾಗ ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು. ಕಾನೂನನ್ನು ಗೌರವಿಸಬೇಕಾದವರೇ ಈ ರೀತಿ ಮಾತನಾಡುತ್ತಾರೆ ಎಂದರೆ ಅವರ ಮನ ಸ್ಥಿತಿ ಹೇಗಿದೆ ಎಂದು ತಿಳಿಯುತ್ತದೆ. ಅಂಬೇಡ್ಕರ್ ಅವರು ಬರೆದ ಸಂವಿಧಾನ ದಿಂದ ಮಹಿಳೆಯರು, ಸಾಮಾನ್ಯ ಪ್ರಜೆಗಳು ಕೂಡ ರಾಷ್ಟ್ರಪತಿ, ಪ್ರಧಾನಮಂತ್ರಿ, ಮುಖ್ಯಮಂತ್ರಿ, ಅಧಿಕಾರಿಗಳಾಗಲು ಸಾಧ್ಯವಾಯಿತು. ಪ್ರಧಾನಿ ಮೋದಿ ಅವರಿಗೆ ಸಂವಿಧಾನ ಮತ್ತು ಅಂಬೇಡ್ಕರ್ ಮೇಲೆ ಗೌರವ ಇದ್ದರೆ, ಗೃಹ ಸಚಿವ ಅಮಿತ್ ಶಾ ಅವರನ್ನು ಕೂಡಲೇ ಸಚಿವ ಸಂಪುಟ ದಿಂದ ವಜಾಗೊಳಿಸಿ ದೇಶದಿಂದ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘಟನೆಗಳ ಅಧ್ಯಕ್ಷ ಮುಕ್ಕಡಹಳ್ಳಿ ರವಿ ಕುಮಾರ್, ಮಾಜಿ ಮೇಯರ್ ಪುರುಷೋತಮ್ ಕೆ.ನವೀನ್ ಕೆರೆಹಳ್ಳಿ, ರೇವಣ್ಣ, ಕೆಂಪರಾಜು, ಹರವೆ ಉದಯ ಕುಮಾರ್, ಅಜಯ್ ಶಂಭು, ರಾಜ್ ಕುಮಾರ್, ಮಧುಸೂದನ್ ಉಪಸ್ಥಿತರಿದ್ದರು.

## ಕಾರ್ಯಕ್ರಮಕ್ಕೆ ಬಿ.ವೈ.ವಿಜಯೇಂದ್ರಗೆ ಆಹ್ವಾನ


ವಿಜಯೇಂದ್ರ ಅವರನ್ನು ಆಹ್ವಾನಿಸಲಾಯಿತು.

ತಿ.ನರಸೀಪುರ, ಜ6– ತಾಲೂಕಿನ ಬಿಳಿಗೆರೆ ಹುಂಡಿಯಲ್ಲಿ ನೂತನವಾಗಿ ನಿರ್ಮಿಸಿರುವ ದಾಸೋಹ ಮಠದ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸುವಂತೆ ಬಿಜೆಪಿ ರಾಜ್ಯಾಧ್ಯಕ್ಷರೂ ಆದ ಶಾಸಕ ಬಿ.ವೈ. ವಿಜಯೇಂದ್ರ ಯಡಿಯೂರಪ್ಪ ಅವರನ್ನು ಬಿಳಿಗೆರೆಹುಂಡಿ ಶ್ರೀಗುರು ಮಲ್ಲೇಶ್ವರ ದಾಸೋಹ ಮಠದ ಪೀಠಾಧ್ಯಕ್ಷ ಗುರುಸ್ವಾಮೀಜಿ ಆಹ್ವಾನಿಸಿದರು.

ಬೆಂಗಳೂರಿನಲ್ಲಿ ವಿಜಯೇಂದ್ರ ಅವರನ್ನು ಭೇಟಿ ಮಾಡಿದ ಮುಖಂಡರು ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿದರು. ಈ ವೇಳೆ ಅಖಿಲ ಭಾರತ ವೀರಶೈವ ಮಹಾಸಭಾ ಉಪಾಧ್ಯಕ್ಷರೂ ಆದ ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಡೈರಿ ಅಧ್ಯಕ್ಷ ಡಿ.ಎಲ್.ಮಹದೇವಪ್ಪ, ಕಸಬಾ ಪಿಎಸಿಎಸ್ ಅಧ್ಯಕ್ಷ ಡನಾಯಕನಪುರ ಮಲ್ಲಣ್ಣ, ಕಿರಗಸೂರು ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ಬಿ.ಶಿವರಾಜು, ಬಸವರಾಜಪ್ಪ, ಮಹಾಲಿಂಗಸ್ವಾಮಿ, ಜೆಎಸ್‌ಎಸ್ ನಟರಾಜು, ಮಹದೇವಸ್ವಾಮಿ ಹಾಜರಿದ್ದರು.

## ಕ್ಯಾಲೆಂಡರ್ ಬಿಡುಗಡೆ


ಮೈಸೂರು ತಾಲೂಕು ಸೋಮೇಶ್ವರಪುರ ವಿಶ್ವ ಋಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್‌ನ ನೂತನ ವರ್ಷದ ಕ್ಯಾಲೆಂಡರ್ ಅನ್ನು ತಿ.ನರಸೀಪುರದ ಕಬಿನಿ ಅತಿಥಿ ಗೃಹದಲ್ಲಿ ರಾಜ್ಯ ಜೆಡಿಎಸ್ ಮಾಧ್ಯಮ ವಕ್ತಾರ ತಾಯೂರು ಪ್ರಕಾಶ್ ಬಿಡುಗಡೆ ಮಾಡಿದರು. ಈ ವೇಳೆ ಟ್ರಸ್ಟ್ ನಿರ್ದೇಶಕ ವಾಲ್ಮೀಕಿ ನಿಂಗರಾಜು, ಸೂರಹಳ್ಳಿ ಮಹದೇವ ನಾಯಕ, ಯಡದೊರೆ ದೇವರಾಜು, ಮಹರ್ಷಿ ವಾಲ್ಮೀಕಿ ಚಾರಿಟಬಲ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್ ಹಾಜರಿದ್ದರು.


ನಂಜನಗೂಡು ತಾಲೂಕಿನ ಹುಲ್ಲಹಳ್ಳಿಯಲ್ಲಿ ರಾಜ್ಯ ಗೆಜ್ಜಿಗಾರರ ರಕ್ಷಣಾ ಸಮಿತಿಯ ನೂತನ ಕ್ಯಾಲೆಂಡರ್ ಅನ್ನು ಎಸ್‌ಐ ಚೇತನ್ ಕುಮಾರ್ ಬಿಡುಗಡೆಗೊಳಿಸಿದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷ ಹೆಚ್.ಪಿ.ಲೋಕೇಶ್, ಎಎಸ್‌ಐ ಪ್ರಕಾಶ್, ಹೋಬಳಿ ಘಟಕದ ಅಧ್ಯಕ್ಷ ಸಿದ್ದಪ್ಪಾಜಿ, ಉಪಾಧ್ಯಕ್ಷ ಮಲ್ಲಿಕಾರ್ಜುನ, ಗೌರವಾಧ್ಯಕ್ಷ ಮಲಶೆಟ್ಟಿ ಶಿವರಾಜು, ಚನ್ನಶೆಟ್ಟಿ, ಸಿದ್ದಶೆಟ್ಟಿ, ಶಿವನಂಜಶೆಟ್ಟಿ, ಪ್ರಧಾನ ಕಾರ್ಯದರ್ಶಿ ಶಿವಮಲ್ಲು, ಸಂಘಟನೆ ಕಾರ್ಯದರ್ಶಿ ಕಾಳಪ್ಪ, ಖಜಾಂಚಿ ಮಲ್ಲಿಕಾರ್ಜುನಸ್ವಾಮಿ, ಮಲ್ಲೇಶ್, ಪ್ರಕಾಶ್, ರಂಗಸ್ವಾಮಿ, ಶಿವಕುಮಾರ್, ನರಸಿಂಹ ಶೆಟ್ಟಿ ಇನ್ನಿತರರಿದ್ದರು.


ಕೆ.ಆರ್.ನಗರ ತಾಲೂಕಿನ ಚೀರ್ನಹಳ್ಳಿಯಲ್ಲಿ ಕಾಂಗ್ರೆಸ್ ಮುಖಂಡ ಸಿ.ಟಿ.ಶಿವರಾಜು ಹೊರ ತಂದಿರುವ ಕ್ಯಾಲೆಂಡರ್ ಅನ್ನು ಶಾಸಕ ಡಿ.ರವಿಶಂಕರ್ ಬಿಡುಗಡೆ ಮಾಡಿದರು. ಈ ವೇಳೆ ಚಂದಗಾಲು ಗ್ರಾಪಂ ಅಧ್ಯಕ್ಷೆ ನೇತ್ರಾವತಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ರೈತ ಮುಖಂಡ ಸಿ.ಬಿ.ಶ್ರೀನಿವಾಸ್, ಮುಖಂಡರಾದ ಕುಮಾರ್, ಪ್ರಕಾಶ್, ಮಹದೇವ್, ರಮೇಶ್, ಧನರಾಜು, ರಾಜೇಗೌಡ ಸೇರಿದಂತೆ ಇನ್ನಿತರರಿದ್ದರು.

# ಪೋಷಕರು ತಮ್ಮ ಮಕ್ಕಳನ್ನು ಇತರರೊಂದಿಗೆ ಹೋಲಿಸಬೇಡಿ

ಜಿಲ್ಲಾ ಪತ್ರಕರ್ತ ಸಂಘದ ಅಧ್ಯಕ್ಷ ಕೆ.ದೀಪಕ್

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.



ಸರಗೂರು, ಜ.6– ಪೋಷಕರು ತಮ್ಮ ಮಕ್ಕಳನ್ನು ಇತರ ವಿದ್ಯಾರ್ಥಿಗಳೊಂದಿಗೆ ಹೋಲಿಕೆ ಮಾಡುವುದು ಸರಿಯಲ್ಲ. ಇದರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಖಿನ್ನತೆ ಭಾವನೆ ಮೂಡಿ ಅವರ ಬೆಳವಣಿಗೆ ಮೇಲೆ ಪರಿಣಾಮ ಬೀಳಲಿದೆ ಎಂದು ಜಿಲ್ಲಾ ಪತ್ರಕರ್ತ ಸಂಘದ ಅಧ್ಯಕ್ಷ ಕೆ.ದೀಪಕ್ ತಿಳಿಸಿದರು.

ಪಟ್ಟಣದ ಪ್ರಗತಿ ವಿದ್ಯಾಸಂಸ್ಥೆಯ 17ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರು ತಮ್ಮ ಇಂದಿನ ದಿನವನ್ನು ಮಕ್ಕಳಿಗಾಗಿ ತ್ಯಾಗ ಮಾಡಿದರೆ, ಮಕ್ಕಳು ಉತ್ತಮ ಭವಿಷ್ಯ ಹೊಂದಲು ಸಾಧ್ಯವಾಗುತ್ತದೆ. ನಿಮ್ಮಿಷ್ಟದ ಪ್ರಕಾರ ಮಕ್ಕಳನ್ನು ರೂಪಿಸುವ ಬದಲು ಅವರಿಗೆ ಯಾವ ವಿಷಯದಲ್ಲಿ ಆಸಕ್ತಿ ಹೆಚ್ಚು ಎನ್ನುವುದನ್ನು ಗಮನಿಸಿ ಅವರ ಭವಿಷ್ಯ ರೂಪಿಸಬೇಕು. ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪೋಷಕರು ಮತ್ತು ಶಿಕ್ಷಕರ ನಡುವೆ ನಿರಂತರ ಸಂಪರ್ಕ ಅಗತ್ಯ ಎಂದರು.

ತಹಸೀಲ್ದಾರ್ ಮೋಹನ್ ಕುಮಾರಿ ಮಾತನಾಡಿ, ನೀವು ಮಕ್ಕಳನ್ನು ಹೇಗೆ ಬೆಳೆಸುತ್ತೀರಿ. ಅವರಿಗೆ ಯಾವ ರೀತಿ ಮಾರ್ಗದರ್ಶನ ನೀಡುತ್ತೀರಿ ಎಂಬುದರ ಮೇಲೆ ಅವರ ಭವಿಷ್ಯ ಅಡಗಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಭವಿಷ್ಯ ರೂಪಿಸಿಕೊಳ್ಳಬೇಕಾದರೆ ಸತತ ಪರಿಶ್ರಮ ಅಗತ್ಯ ಎಂದರು.

ಇದೇ ವೇಳೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಅಲ್ಲದೇ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪ್ರಗತಿ ವಿದ್ಯಾಸಂಸ್ಥೆ ಸಂಸ್ಥಾಪಕ ಧರ್ಮದರ್ಶಿ ಬಿ.ರಾಜಮ್ಮ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಧರ್ಮದರ್ಶಿ ಹೆಚ್.ಎಲ್. ಶಶಿಧರ್, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯ ಚಲುವಕೃಷ್ಣ, ಶಾಲಾ ಸಲಹೆಗಾರರಾದ ಮಹದೇವು, ಜೆ.ಪಿ.ಶಿವರಾಜ್, ಎಂ.ಕೆಂಡಗಣ್ಣಸ್ವಾಮಿ, ನಾಗಣ್ಣ, ಡಾ.ಸುರೇಶ್, ನಟರಾಜು, ಎಂ.ಸಿ.ರಂಜನಿ, ಹೆಚ್.ಎಲ್.ಶಶಿಧರ್ ಡಾ.ಇಂದಿರಾ, ಉಮೇಶ್, ಕಾರ್ಯದರ್ಶಿ ಪಳನಿಸ್ವಾಮಿ, ಮುಖ್ಯೋಪಾಧ್ಯಾಯರಾದ ಸತೀಶ್, ಮಂಜುಳಾ ಸೇರಿದಂತೆ ಇನ್ನಿತರರಿದ್ದರು.

# ವಿಶ್ವ ರೈತ ದಿನವನ್ನು ಸರ್ಕಾರದಿಂದ ಆಚರಿಸಲಿ

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಈ.ರಾಜು ಆಗ್ರಹ


ವಿಶ್ವ ರೈತ ದಿನಾಚರಣೆಯಲ್ಲಿ ಪ್ರಗತಿ ಪರ ರೈತರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜ.6– ನೆತ್ತಿ ಸುಡುವ ಬಿಸಿಲನ್ನು ಲೆಕ್ಕಿಸದೆ ದುಡಿಯುವ ಮೂಲಕ ಜಗತ್ತಿಗೆ ಆಹಾರ ಪೂರೈಸುತ್ತಿರುವ ರೈತ ದಿನವನ್ನು ಮುಂದೆ ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸಬೇಕು. ರೈತರ ಸಮಸ್ಯೆಗಳ ಪರಿಹಾರಕ್ಕೆ ಹೋರಾಡುವ ರೈತ ನಾಯಕರನ್ನು ಸರ್ಕಾರ ಗುರುತಿಸಿ ವಾರ್ಷಿಕ ಪುರಸ್ಕಾರ ಸನ್ಮಾನಗಳನ್ನು ನೀಡಿ ಗೌರವಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಈ.ರಾಜು ಆಗ್ರಹಿಸಿದರು.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಹಮ್ಮಿಕೊಂಡಿದ್ದ ವಿಶ್ವ ರೈತ ದಿನಾಚರಣೆಯಲ್ಲಿ ಮಾತನಾಡಿದ ಅವರು, ಧರ್ಮ, ಜಾತಿಗೊಬ್ಬ ಗಣ್ಯರು ಮತ್ತು ಮಹಾನ್ ವ್ಯಕ್ತಿಗಳ ಹೆಸರಿನಲ್ಲಿ ಜಯಂತಿಗಳನ್ನು ಆಚರಿಸುವ ಸರ್ಕಾರ ಮುಂದಿನ ವರ್ಷದಿಂದ ರೈತ ದಿನವನ್ನು ಸರ್ಕಾರಿ ಕಾರ್ಯಕ್ರಮವಾಗಿ ಘೋಷಣೆ ಮಾಡಬೇಕು. ರೈತರ ಪರ ಧ್ವನಿ ಎತ್ತಿ, ಬದುಕಿನ ಆಯುಷ್ಯವನ್ನು ಕಳೆದುಕೊಂಡು ಮುಪ್ಪಾಗುತ್ತಿರುವ ರೈತ ನಾಯಕರಿಗೆ ಚೈತನ್ಯ ತುಂಬಲು, ಅವರ ಹೋರಾಟಕ್ಕೆ ಸ್ಫೂರ್ತಿ ನೀಡಲು ರಾಜ್ಯೋತ್ಸವ ಸೇರಿದಂತೆ ಇನ್ನಿತರ ವಾರ್ಷಿಕ ಪ್ರಶಸ್ತಿ, ಸನ್ಮಾನಗಳಿಗೆ ರೈತ ನಾಯಕರು ಮತ್ತು ಮುಖಂಡರನ್ನು ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿದರು.

ಶ್ರಮಿಕ ವರ್ಗವಾಗಿರುವ ರೈತರು ಹಗಲಿರುಳು ದುಡಿಯುತ್ತಿರುವುದರಿಂದಲೇ ಜಗತ್ತಿನ ಜನಸಂಖ್ಯೆಗೆ ಆಹಾರ ಉತ್ಪಾದನೆ ಸಾಧ್ಯವಾಗಿದೆ. ಹಾಗಾಗಿ ರೈತ ದಿನ ಆಚರಣೆ ನಾಡು, ದೇಶಕಷ್ಟೇ ಸೀಮಿತವಲ್ಲ. ವಿಶ್ವ ಮಟ್ಟದಲ್ಲಿ ಆಚರಣೆಯಾಗಬೇಕು. ತಾಲೂಕಿನವರೇ ಆದ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರಂತಹ ಧೀಮಂತ ರೈತ ನಾಯಕರ ಹೋರಾಟ ನಮ್ಮಂತಹ ರೈತ ಮುಖಂಡರಿಗೆ ಪ್ರೇರಣೆಯಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವ ರೈತ ದಿನಾಚರಣೆ ಕಾರ್ಯಕ್ರಮ ಆಯೋಜಿಸಿ, ರೈತರನ್ನು ಗೌರವಿಸುವ ಕಾರ್ಯವನ್ನು ರೈತ ಸಂಘದಿಂದ ಮಾಡಿದ್ದೇವೆ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಇತ್ತೀಚಗೆ ನಿಧನರಾದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಬಿ.ಸಿ. ಬಯ್ಯಾರೆಡ್ಡಿ, ತಾಲೂಕಿನ ಹಿರಿಯ ಮುಖಂಡ ಬೂದಹಳ್ಳಿ ಶಿವಣ್ಣ ಹಾಗೂ ಸಾಮಾಜಿಕ, ವೈಚಾರಿಕ ಚಿಂತಕ ಮುಜಾಫರ್ ಅಸಾದಿ ಅವರಿಗೆ ಕೆಲವು ನಿಮಿಷಗಳ ಮೌನಾಚರಣೆ ಮೂಲಕ ಸಂತಾಪ ಸೂಚಿಸಲಾಯಿತು. ತಾಲೂಕಿನ ರೈತ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಹಿರಿಯ ರೈತ ಮುಖಂಡರನ್ನು ಸನ್ಮಾನಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ರೈತ ಸಂಘದ ತಾಲೂಕು ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ ಮಾತನಾಡಿದರು. ರೈತ ಮುಖಂಡರಾದ ಕೇತುಪುರ ರಾಮಚಂದ್ರೇಗೌಡ, ಕೆಂಪೇಗೌಡ, ಯಾಚೇನಹಳ್ಳಿ ಶಿವಣ್ಣ, ಬೆನಕನಹಳ್ಳಿ ಶಿವರುದ್ರಪ್ಪ, ಕಳ್ಳಿಪುರ ನಾರಾಯಣ, ಚನ್ನಬಸಪ್ಪ, ಮರಿಶೆಟ್ಟಿ, ಹಲವಾರ ಮಹದೇವಸ್ವಾಮಿ, ಮಾರಿಯಾಚಾರ್, ಶಿವಣ್ಣ, ಕೆಂಚಪ್ಪ, ರಾಜಶೇಖರ, ಸಣ್ಣಪ್ಪ, ಹೂವಯ್ಯ, ನಟರಾಜು, ದೇವರಾಜಪ್ಪ, ಚಿದರವಳ್ಳಿ ನಾಗೇಂದ್ರ ಇತರರಿದ್ದರು.

## ನಿಧನ



### ಮರಿಸ್ವಾಮಿ

ಮೂಗೂರು, ಜ.6– ಗ್ರಾಮದ ಅಂಬೇಡ್ಕರ್ ಕಾಲೋನಿ ನಿವಾಸಿ ಎಂ.ಎಸ್.ಮರಿಸ್ವಾಮಿ(55) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಹೆಚ್.ಆರ್.ರಾಮೇಗೌಡ



ಹಿರೀಕ್ಯಾತನಹಳ್ಳಿ, ಜ.6– ಗ್ರಾಮದ ನಿವೃತ್ತ ಅಬಕಾರಿ ನಿರೀಕ್ಷಕ ಹೆಚ್.ಆರ್.ರಾಮೇಗೌಡ(85) ಸೋಮವಾರ ಮುಂಜಾನೆ ನಿಧನರಾದರು. ಮೃತರು ಗ್ರಾಪಂ ಮಾಜಿ ಸದಸ್ಯ ಹೆಚ್.ಆರ್. ಮಹೇಶ್ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ 1 ಗಂಟೆಗೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಮಂಗಳವಾರ 7 ಜನವರಿ 2025

# ಮೈಸೂರು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಣೆಗೆ ಕ್ರಮ ವಹಿಸಿ

## ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಡಿಸಿ ಲಕ್ಷ್ಮೀಕಾಂತ್ ರೆಡ್ಡಿ ಸೂಚನೆ

ಮೈಸೂರು,ಜ.6(ಎಂಟಿವೈ)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯ ಫಲಿತಾಂಶ ಸುಧಾರಿಸುವುದರೊಂದಿಗೆ ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ವೃದ್ಧಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೂಚಿಸಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸಲು ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ವಲಯ ಹಾಗೂ ತಾಲೂಕುಗಳ ಬಿಇಓಗಳು ತಮ್ಮ ವ್ಯಾಪ್ತಿಯಲ್ಲಿರುವ ಶಾಲೆಗಳ ಮಾಹಿತಿ, ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳ ಸಂಖ್ಯೆ, ಕಲಿಕಾ ಸಾಮರ್ಥ್ಯ ಹೆಚ್ಚಿಸಲು ಕೈಗೊಂಡಿರುವ ಕ್ರಮ ಕುರಿತಂತೆ ಮಾಹಿತಿ ನೀಡಿದರು. ಅಲ್ಲದೆ, ಮಕ್ಕಳನ್ನು ಪರೀಕ್ಷೆಗೆ ಸಜ್ಜುಗೊಳಿಸಲು ವಿಶೇಷ ತರಗತಿ, ಗುಂಪು ಅಧ್ಯಯನ(ಗ್ರೂಪ್ ಸ್ಟಡೀಸ್) ಸೇರಿದಂತೆ ಇನ್ನಿತರ ಚಟುವಟಿಕೆ ನಡೆಸುತ್ತಿರುವುದಾಗಿ ತಿಳಿಸಿದರು.



ಮೈಸೂರು ಜಿ.ಪಂ. ಸಭಾಂಗಣದಲ್ಲಿ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಿಸುವ ಸಂಬಂಧ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸೋಮವಾರ ಜಿಲ್ಲೆಯ ಸರ್ಕಾರಿ ಶಾಲಾ ಮುಖ್ಯ ಶಿಕ್ಷಕರ ಸಭೆ ನಡೆಸಿದರು.

ಡಿಡಿಪಿಐ ಜವರೇಗೌಡ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ 276 ಸರ್ಕಾರಿ ಶಾಲೆಗಳು ಸೇರಿದಂತೆ 688 ಪ್ರೌಢಶಾಲೆಗಳಲ್ಲಿ ಈ ಬಾರಿ 39,132 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದಾರೆ. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಿಸಲು ಎಲ್ಲಾ ಶಾಲೆಗಳಲ್ಲೂ ವಿಶೇಷ ತರಗತಿ ಆಯೋಜಿಸುವುದು, ವಿಷಯವಾರು ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ವಿಷಯ ತಜ್ಞರಿಂದ ತರಗತಿ ನಡೆಸುವಂತೆ ಸೂಚನೆ ನೀಡಲಾಗಿದ್ದು, ಈಗಾಗಲೇ ಎಲ್ಲಾ ಶಾಲೆಗಳಲ್ಲೂ ವಿಶೇಷ ತರಗತಿಗಳು ನಡೆಯುತ್ತಿವೆ ಎಂದು ಮಾಹಿತಿ ನೀಡಿದರು.

ಬಿಇಓ ಹಾಗೂ ಮುಖ್ಯ ಶಿಕ್ಷಕರು ನೀಡಿದ ಮಾಹಿತಿಯನ್ನು ಅವಲೋಕಿಸಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಮಾತನಾಡಿ, ಈ ಬಾರಿ ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ ಆಗಲೇಬೇಕು. ಅದಕ್ಕಾಗಿ ಶಾಲೆಗಳಲ್ಲಿ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿರುವ 233 ಸರ್ಕಾರಿ ಶಾಲೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಬುಡಕಟ್ಟು ಇಲಾಖೆ ವತಿಯಿಂದ ನಡೆಯುತ್ತಿರುವ 48 ಶಾಲೆಗಳಲ್ಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಜ್ಜುಗೊಳಿಸಬೇಕು. ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಆ ವಿದ್ಯಾರ್ಥಿಗಳಿಗೆ ಯಾವ ವಿಷಯದಲ್ಲಿ ಹೆಚ್ಚಿನ ಕಾಳಜಿ ನೀಡಬೇಕಾಗಿದೆ ಎಂದು ಶಾಲಾ ಶಿಕ್ಷಕರು ಗುರುತಿಸಬೇಕು. ವಿಷಯವಾರು ತಜ್ಞರಿಂದ ಮಕ್ಕಳಿಗೆ ಸುಲಭವಾಗಿ ಕಲಿಕಾ ಸಾಮರ್ಥ್ಯ ವೃದ್ಧಿಸುವ ಹಾಗೂ ತರಗತಿಯಲ್ಲಿ ಕಲಿತದ್ದನ್ನು ಮನನ ಮಾಡುವ ವಿಧಾನವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿರುವ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ.75ಕ್ಕಿಂತ ಮೇಲ್ಪಟ್ಟು ಬರಬೇಕು. ಶಿಕ್ಷಕರ ಕೊರತೆ ಇದ್ದರೆ, ಅದನ್ನು ಸರಿದೂಗಿಸಲು ಕ್ರಮ ಕೈಗೊಳ್ಳಬೇಕು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಚಾರ್ಟ್ ಮೂಲಕ ಕಲಿಕೆ ಬಗ್ಗೆ ಆಸಕ್ತಿ ಮೂಡಿಸಬೇಕು. ಮುಂದಿನ ವಾರದಲ್ಲಿ ಕಳೆದ ವರ್ಷ ಶೇ.70ಕ್ಕಿಂತ ಕಡಿಮೆ ಫಲಿತಾಂಶ ಬಂದ ಶಾಲಾ ಮುಖ್ಯ ಶಿಕ್ಷಕರ ಸಭೆ ಕರೆಯಲಾಗುವುದು. ಅಷ್ಟರೊಳಗೆ ಎಲ್ಲಾ ಶಾಲೆಗಳಲ್ಲೂ ಸಿದ್ಧತೆ ಮಾಡಿಕೊಳ್ಳಬೇಕು. ಪರೀಕ್ಷೆ ಸಮೀಪಿಸುತ್ತಿರುವುದರಿಂದ 8 ವಾರಗಳ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿ, ಅದಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಿಇಓ ಕೆ.ಎಂ.ಗಾಯತ್ರಿ, ಡಯಟ್ ಪ್ರಾಂಶುಪಾಲ ನಾಗರಾಜಯ್ಯ ಉಪಸ್ಥಿತರಿದ್ದರು. ಸಭೆಯಲ್ಲಿ ಮೈಸೂರು ಉತ್ತರ, ಮೈಸೂರು ಗ್ರಾಮಾಂತರ, ಮೈಸೂರು ದಕ್ಷಿಣ, ಹೆಚ್.ಡಿ.ಕೋಟೆ, ಹುಣಸೂರು, ಕೆಆರ್.ನಗರ, ನಂಜನಗೂಡು, ಪಿರಿಯಾಪಟ್ಟಣ, ತಿ.ನರಸೀಪುರದ ಬಿಇಓ ಹಾಗೂ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು ಪಾಲ್ಗೊಂಡಿದ್ದರು.

# ಜಿಎಸ್‌ಟಿ ಬಗ್ಗೆ ಜಾಗೃತಿ




ಜಿಎಸ್‌ಟಿ ಅರಿವು ಕಾರ್ಯಾಗಾರದಲ್ಲಿ ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಚೇರಿಯ ಆಯುಕ್ತ ಪಿ.ಪರಮೇಶ್ವರ ಗೌಡ ಮಾತನಾಡಿದರು.

ಮೈಸೂರು, ಜ.6(ಎಸ್‌ಪಿಎನ್)– 2017–18ರಿಂದ 2019–20ನೇ ಸಾಲಿಗೆ ಜಾರಿಗೆ ತಂದಿರುವ ಕರ ಸಮಾಧಾನ ಯೋಜನೆ (ಆಮ್ನೆಸ್ಟಿ ಸ್ಕೀಮ್)ಅಡಿ 16(4)ಕಲಂನಲ್ಲಿ ತರಲಾಗಿರುವ ಕ್ಲೇಮು ಮಾಡಲಾದ ಹೂಡುವಳಿ ತೆರಿಗೆ ಬಗ್ಗೆ ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಚೇರಿಯ ಆಯುಕ್ತ ಪಿ.ಪರಮೇಶ್ವರ ಗೌಡ ಜಾಗೃತಿ ಮೂಡಿಸಿದರು.

ಮೈಸೂರು ಹೋಟೆಲ್ ದಿ.ಪ್ರೆಸಿಡೆಂಟ್‌ನಲ್ಲಿ ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆಗಳ ಇಲಾಖೆ, ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಚೇರಿ ಹಾಗೂ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸಹಯೋಗದೊಂದಿಗೆ ಜಿಎಸ್‌ಟಿ ಅರಿವು ಕಾರ್ಯಾಗಾರದಲ್ಲಿ ಭಾಗವಹಿಸಿ ಜಾಗೃತಿ ಮೂಡಿಸಿದರು.

ಜಿಎಸ್‌ಟಿಯಲ್ಲಿನ ಇತ್ತೀಚಿನ ಕಾನೂನು ಬದಲಾವಣೆ ಬಗ್ಗೆ ಸಂಪೂರ್ಣ ನೀಡಿ, ಜಿಎಸ್‌ಟಿ ತೆರಿಗೆ ವಂಚಿಸಲು ಪ್ರಯತ್ನಿಸಲು ಸಾಧ್ಯವಿಲ್ಲ ಎಂದು ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಎಲ್ಲಾ ಉದ್ಯಮಿಗಳಿಗೆ ಮಾಹಿತಿ ನೀಡಿದರು. ಈ ವೇಳೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು, ಉಪಾಧ್ಯಕ್ಷ ಆರ್.ಆನಂದ್, ಕಾರ್ಯದರ್ಶಿ ಎ.ಕೆ.ಶಿವಾಜಿರಾವ್, ಎಸ್.ಅಚ್ಯುತ ಸೇರಿದಂತೆ ಇತರರಿದ್ದರು.

## ದರ್ಶನ್, ಗ್ಯಾಂಗ್‌ಗೆ ಮತ್ತೆ ಶಾಕ್

# ಜಾಮೀನು ರದ್ದು ಕೋರಿ ಸುಪ್ರೀಂಗೆ ಮೇಲ್ಮನವಿ ಸಲ್ಲಿಕೆ

ಬೆಂಗಳೂರು: ಸದ್ಯ ಜಾಮೀನಿನ ಮೇಲೆ ಹೊರಗಿರುವ ಕೊಲೆ ಆರೋಪಿ, ನಟ ದರ್ಶನ್ ಮತ್ತು ಗ್ಯಾಂಗ್‌ಗೆ ಮತ್ತೆ ಸಂಕಷ್ಟ ಎದುರಾಗಿದೆ ದರ್ಶನ್ ಸೇರಿ ಇತರ 7 ಆರೋಪಿಗಳ ಜಾಮೀನು ರದ್ದು ಕೋರಿ ಸುಪ್ರೀಂಕೋರ್ಟ್‌ಗೆ ಪೊಲೀಸರು ಮೇಲ್ಮನವಿ ಸಲ್ಲಿಸಿದ್ದಾರೆ.



ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಇಂದು ಪೊಲೀಸರು ಅರ್ಜಿ ಸಲ್ಲಿಕೆ ಮಾಡಿದ್ದಾರೆ. ಸುಪ್ರೀಂ ಕೋರ್ಟ್ ವಕೀಲ ಅನಿಲ್ ಸಿ ನಿಶಾನಿಯಿಂದ ಅರ್ಜಿ ಸಲ್ಲಿಕೆಯಾಗಿದ್ದು, ನಟ ದರ್ಶನ್, ಪವಿತ್ರ ಗೌಡ, ಲಕ್ಷ್ಮಣ್, ಪ್ರದೂಶ್, ನಾಗರಾಜು, ಅನುಕುಮಾರ್ ಹಾಗೂ ಜಗದೀಶ್ ಆರೋಪಿಗಳ ಜಾಮೀನು ರದ್ದು ಮಾಡುವಂತೆ ಮನವಿ ಮಾಡಿದ್ದಾರೆ.

ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಜೂ.11 ರಂದು ನಟ ದರ್ಶನ್ ಸೇರಿ ಹಲವರು ಬಂಧನಕ್ಕೊಳಗಾಗಿ ದ್ದರು. ಕಳೆದ ಡಿಸೆಂಬರ್ 13ರಂದು ರಾಜ್ಯ ಹೈಕೋರ್ಟ್ ದರ್ಶನ್ ಸೇರಿ 7 ಆರೋಪಿಗಳಿಗೂ ಜಾಮೀನು ಮಂಜೂರು ಮಾಡಿತ್ತು.

**ಜಾಮೀನು ಸಿಕ್ಕಿದ್ದು ಹೇಗೆ:** ಜಾಮೀನು ಮೊದಲ ನಿಯಮ. ಆರೋಪಿಗಳಿಗೆ ಯಾವುದೇ ಅಪರಾಧಿಕ ಹಿನ್ನೆಲೆ ಇಲ್ಲ. ಆರೋಪಿಗಳು 6 ತಿಂಗಳಿನಿಂದ ಜೈಲಿನಲ್ಲಿ ಇದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ಈಗಾಗಲೇ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ. ಬಂಧನ ಮಾಡುವಾಗ ನಿಯಮಗಳ ಪಾಲನೆ ಆಗಿಲ್ಲ. ಬಂಧನ ವೇಳೆ ಆರೋಪಿಗೆ ಬಂಧನದ ಕಾರಣ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟ ಆದೇಶವಿದೆ ಆದರೆ ಈ ಪ್ರಕರಣದಲ್ಲಿ ಪೊಲೀಸರು ಗ್ರೌಂಡ್ಸ್ ಆಫ್ ಅರೆಸ್ಟ್ ಪಾಲಿಸಿಲ್ಲ ಆರೋಪಿಗಳ ನಿರ್ದಿಷ್ಟ ಪಾತ್ರದ ಬಗ್ಗೆ ಸ್ಪಷ್ಟ ಉಲ್ಲೇಖವಿಲ್ಲ. ಪ್ರತ್ಯಕ್ಷದರ್ಶಿಗಳ ಹೇಳಿಕೆಯಲ್ಲೂ ವ್ಯತ್ಯಾಸ ಕಂಡು ಬಂದಿದೆ ಎಂದು ಅಭಿಪ್ರಾಯಪಟ್ಟು ಹೈಕೋರ್ಟ್ ಜಾಮೀನು ಮಂಜೂರು ಮಾಡಿತು.

# ಮೈಸೂರಲ್ಲಿ 'ಸಿಲ್ಕ್ ಫ್ಯಾಬ್' ಮೇಳಕ್ಕೆ ಚಾಲನೆ

## ದೇಶದ ಹದಿನೇಳಕ್ಕೂ ಅಧಿಕ ರಾಜ್ಯಗಳ ಸುಮಾರು 60ಕ್ಕೂ ಹೆಚ್ಚು ನೇಕಾರರು; ಕುಶಲಕರ್ಮಿಗಳಿಂದ ಕೈಮಗ್ಗ ಉತ್ಪನ್ನ ಪ್ರದರ್ಶನ, ಮಾರಾಟ

ಮೈಸೂರು, ಜ.6(ಎಸ್‌ಪಿಎನ್)–'ಸಿಲ್ಕ್ ಫ್ಯಾಬ್' ಮೇಳದಲ್ಲಿ ದೇಶದ ಹದಿನೇಳಕ್ಕೂ ಹೆಚ್ಚು ರಾಜ್ಯಗಳಿಂದ ಸುಮಾರು 60ಕ್ಕೂ ಹೆಚ್ಚು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳು ತಯಾರಿಸಿರುವ ಬಗೆ ಬಗೆಯ ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಮೈಸೂರು ಜಿಪಂ ಸಿಇಓ ಕೆ.ಎಂ. ಗಾಯಿತ್ರಿ ಸೋಮವಾರ ಚಾಲನೆ ನೀಡಿದರು.

ಮೈಸೂರು ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್ ಆವರಣದಲ್ಲಿ ನವದೆಹಲಿಯ ಕೇಂದ್ರ ಜವಳಿ ಮಂತ್ರಾಲಯದ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಇಂದಿ(ಸೋಮವಾರ)ನಿಂದ ಜ.18ರವರೆಗೆ ನಡೆಯುವ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಮೇಳದಲ್ಲಿ ಸಾವಿರ ರೂ.ಗಳಿಂದ 20 ಸಾವಿರ ರೂ.ಗಳವರೆಗೆ ರೇಷ್ಮೆ ಸೀರೆಗಳು, ಕಾಟನ್ ಸೀರೆಗಳು, ನೆಲಹೊದಿಕೆಗಳು, ಬೆಡ್‌ಶೀಟ್‌ಗಳು, ಪರಿಶುದ್ಧ ಕಾಂಜಿವರಂ ಸೀರೆಗಳು, ಪ್ರದರ್ಶನದಲ್ಲಿ ಕಾಣಬಹುದು ಹಾಗೂ ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ವಸ್ತುಗಳ ಮಾರಾಟಕ್ಕೂ ಲಭ್ಯವಿದೆ ಎಂದರಲ್ಲದೆ, ಕೈಮಗ್ಗ ನೇಕಾರರು, ನೇಕಾರ ಸಹಕಾರ ಸಂಘಗಳು ತಯಾರು ಮಾಡುತ್ತಿರುವ ಕೈಮಗ್ಗ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಈ ಪ್ರದರ್ಶನ ಆಯೋಜಿಸಲಾಗಿದೆ ಎಂದರು.

ಕೈಮಗ್ಗ ಉತ್ಪನ್ನಗಳು ನಶಿಸಿಹೋಗದಂತೆ, ಮುಂದಿನ ಪೀಳಿಗೆಗೂ ಉಳಿಸಿಕೊಂಡು ಹೋಗಲು ಈ ಮೇಳ ಪ್ರಯೋಜನಕಾರಿಯಾಗಿದೆ. ಅಲ್ಲದೆ, ಈ ವೃತ್ತಿಯನ್ನು ಅವಲಂಬಿಸಿ ಜೀವನ ನಿರ್ವಹಣೆ ಮಾಡುತ್ತಿರುವ ನೇಕಾರರ ಕುಟುಂಬಗಳಿಗೆ ಒಂದೇ ಸೂರಿನಡಿ ತಾವು ತಯಾರು ಮಾಡಿದ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಬಿಹಾರ್ ಮತ್ತು ಜಾರ್ಖಂಡ್ ರಾಜ್ಯದ ತಸ್ಸರ್ ಸೀರೆಗಳು, ಪಶ್ಚಿಮ ಬಂಗಾಳದ ಕಾಂತಾ ಸೀರೆ, ಬಲಚುರಿ ಸೀರೆ, ಭುಟಿಕ್ ಸೀರೆ, ಕಾಟನ್ ಸೀರೆಗಳು, ಉತ್ತರ ಪ್ರದೇಶ ರಾಜ್ಯದ ಬನಾರಸ್ ಸಿಲ್ಕ್ ಸೀರೆಗಳು, ಚಿಕನ್ ಎಂಬ್ರಾಯಿಡರಿ ಸೀರೆಗಳು, ಮಧ್ಯ ಪ್ರದೇಶದ ಚಂದೇರಿ ಮಹೇಶ್ವರಿ ಸಿಲ್ಕ್ ಸೀರೆಗಳು, ಒರಿಸ್ಸಾ ರಾಜ್ಯದ ಸಂಬಲ್ಪುರಿ ಸೀರೆ, ಇಕ್ಕತ್ ಸೀರೆಗಳು, ಬೋಂಕಾಯಿ ಸೀರೆ, ಕಾಶ್ಮೀರದ ಪಶ್ಮೀನಾ ಶಾಲ್‌ಗಳು ದೊರೆಯಲಿವೆ ಎಂದರು.



ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ಮಳಿಗೆಗಳಿಗೆ ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಸೋಮವಾರ ಭೇಟಿ ನೀಡಿ, ವೀಕ್ಷಿಸಿದರು.

> ಸಿಲ್ಕ್ ಫ್ಯಾಬ್' ಮೇಳ ಸೋಮವಾರದಿಂದ ಜ.18ರವರೆಗೆ ಬೆಳಗ್ಗೆ 11ರಿಂದ ರಾತ್ರಿ 8.30ರವರೆಗೆ ಗ್ರಾಹಕರಿಗೆ ಲಭ್ಯವಿದ್ದು, ಉಚಿತ ಪ್ರವೇಶ ಇರಲಿದೆ.

ಆಂಧ್ರಪ್ರದೇಶದ ಗೊದ್ವಲ್, ಕಲವ್ಕಾರಿ ಸೀರೆಗಳು, ಪೋಚಂಪಲ್ಲಿ ಸೀರೆಗಳು, ಛತ್ತೀಸ್‌ಗಢ್ ರಾಜ್ಯದ ಸೀರೆಗಳು, ಹರಿಯಾಣದ ಫರ್ನಿಸಿಂಗ್ ಉತ್ಪನ್ನಗಳು, ಮಣಿಪುರ ರಾಜ್ಯದ ಸ್ಟೋಲ್ ಮತ್ತು ಬೆಡ್‌ಶೀಟ್, ಮಹಾರಾಷ್ಟ್ರ ಮತ್ತು ರಾಜಸ್ಥಾನ ಸೀರೆಗಳು ಮತ್ತು ಡ್ರೆಸ್ ಮೆಟೀರಿಯಲ್ಸ್, ಅಸ್ಸಾಂ ರಾಜ್ಯದ ರೇಷ್ಮೆ ಸೀರೆಗಳು ಮತ್ತು ಡ್ರೆಸ್ ಮೆಟೀರಿಯಲ್‌ಗಳು ಹಾಗೂ ಕರಕುಶಲ ಕರ್ಮಿಗಳು ತಯಾರು ಮಾಡಿರುವ ಕರಕುಶಲ ವಸ್ತುಗಳು ಒಂದೇ ಸೂರಿನಡಿ ಮೈಸೂರಿನ ಗ್ರಾಹಕರು, ಪ್ರವಾಸಿಗರಿಗೆ ದೊರೆಯಲಿವೆ ಎಂದು ತಿಳಿಸಿದರು.

ಈ ವೇಳೆ ಬೆಂಗಳೂರು ಎನ್‌ಹೆಚ್‌ಡಿಸಿ ಪ್ರಾಂತೀಯ ಕಚೇರಿಯ ಹಿರಿಯ ವ್ಯವಸ್ಥಾಪಕ ಅಭಯ್ ಟಂಡನ್, ಸಹಾಯಕ ವ್ಯವಸ್ಥಾಪಕ ವಿಜಯ ಉಪಾರಿ, ಸಹಾಯಕ ವ್ಯವಸ್ಥಾಪಕ ಸಿ.ನಾಚಿಮುತ್ತು, ಜೆಎಸ್‌ಎಸ್ ಅರ್ಬನ್ ಹಾತ್‌ನ ಸಂಯೋಜನಾಧಿಕಾರಿ ಎ.ರಾಕೇಶ್ ರೈ, ಯೋಜನಾಧಿಕಾರಿ ಎಂ.ಶಿವಾನಂದ ಸ್ವಾಮಿ, ಸುಂದರಪ್ಪ ಉಪಸ್ಥಿತರಿದ್ದರು.

# ಚೇಂಬರ್ಸ್ ಆಫ್ ಕಾಮರ್ಸ್ ಬಂದ್‌ಗೆ ನೈತಿಕ ಬೆಂಬಲ

ಮೈಸೂರು, ಜ.6(ಎಸ್‌ಪಿಎನ್)–ಡಾ.ಬಿ.ಆರ್.ಅಂಬೇಡ್ಕರ್ ಅಭಿಮಾನಿ ಬಳಗ ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಮಂಗಳವಾರ ಮೈಸೂರು ಬಂದ್‌ಗೆ ಕರೆ ಕೊಟ್ಟ ಹಿನ್ನೆಲೆಯಲ್ಲಿ, ಈ ಬಂದ್‌ಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ನೈತಿಕ ಬೆಂಬಲ ಘೋಷಿಸಿದೆ. ನಾಡಿನ ಜಲ, ನೆಲ, ಗಡಿ, ಭಾಷೆ ಮತ್ತು ಸಂಸ್ಕೃತಿ, ನಾಗರಿಕತೆ ವಿಷಯಗಳಿಗೆ ತೊಂದರೆಯಾದಲ್ಲಿ ಅಂತಹ ಹೋರಾಟಗಳಿಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಸದಾ ಮುಂಚೂಣಿಯಲ್ಲಿರುತ್ತದೆ ಎಂದು ಜಿಲ್ಲಾಧ್ಯಕ್ಷ ಕೆ.ಬಿ.ಲಿಂಗರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ವರ್ತಮಾನದ ಸಮಸ್ಯೆಗಳು ನಾಟಕದ ರೂಪ ಪಡೆಯಬೇಕು

## ದೇಸಿರಂಗ ನಾಟಕೋತ್ಸವ ಉದ್ಘಾಟಿಸಿದ ಲೇಖಕ ನಾ.ದಿವಾಕರ್ ಅಭಿಮತ

ಮೈಸೂರು,ಜ.6(ಪಿಎಂ)– ವರ್ತಮಾನದಲ್ಲಿ ಜನಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳು ನಾಟಕದ ರೂಪ ಪಡೆಯಬೇಕು ಎಂದು ಲೇಖಕ ನಾ.ದಿವಾಕರ್ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ ಎರಡು ದಿನಗಳ ದೇಸಿರಂಗ ನಾಟಕೋತ್ಸವಕ್ಕೆ (ಜ.6 ಮತ್ತು 8) ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಸಮಾಜ ಸಾಗುತ್ತಿರುವ ದಿಕ್ಕನ್ನು ನೋಡಿದರೆ ಸಮಾಜಕ್ಕೆ ಸೂಕ್ಷ್ಮತೆಯನ್ನು ತಿಳಿಸಲು ರಂಗಭೂಮಿ ಪರಿಣಾಮಕಾರಿ ಸಂವಹನ ಮಾಧ್ಯಮವಾಗಲಿದೆ. ಪ್ರತಿಷ್ಠಿತ ಸಾಹಿತ್ಯ ಎನ್ನುವುದು ಮೌನವಾಗಿದೆ. ಮತ್ತೊಂದು ವಿಧದಲ್ಲಿ ಬರುತ್ತಿರುವ ಸಾಹಿತ್ಯ ಜನಕ್ಕೆ ತಲುಪುತ್ತಿಲ್ಲ. ಕಾರಣ ಅವುಗಳಿಗೆ ಸೂಕ್ತ ಮಾರುಕಟ್ಟೆ ದೊರೆಯುತ್ತಿಲ್ಲ. ಪುಸ್ತಕಗಳಿಗೆ ಖರೀದಿ ಮಾಡಲಾಗದಷ್ಟು ದುಬಾರಿ ಬೆಲೆ ನಿಗದಿ ಮಾಡಲಾಗುತ್ತಿದೆ. ಈ ರೀತಿ ಹಲವಾರು ಮಾರುಕಟ್ಟೆ ಆಯಾಮಗಳು ಸಾಹಿತ್ಯದಲ್ಲೂ ಸೇರಿಕೊಂಡಿದ್ದು, ಇಂತಹ ಸನ್ನಿವೇಶದಲ್ಲಿ ಜನರನ್ನು ತಲುಪುವಂತಹ ಸುಲಭ ಮಾಧ್ಯಮ ರಂಗಭೂಮಿ ಎಂದು ತಿಳಿಸಿದರು.



ಕಿರುರಂಗ ಮಂದಿರದಲ್ಲಿ ನಾಟಕೋತ್ಸವಕ್ಕೆ ಚಾಲನೆ ನೀಡಿ ನಾ.ದಿವಾಕರ್ ಮಾತನಾಡಿದರು.

ರಂಗಭೂಮಿಯಲ್ಲಿ ಪ್ರಯೋಗಕ್ಕೆ ಅವಕಾಶವಿದ್ದು, ಒಂದು ಕಥೆಯನ್ನು ರಂಗ ವಿನ್ಯಾಸಕ್ಕೆ ಪೂರಕವಾಗಿ ಬದಲಿಸಿಕೊಳ್ಳುವ ಸ್ವಾಯತ್ತತೆ ಇದೆ. ಹಾಗಾಗಿ ಪುರಾಣ ಸೇರಿದಂತೆ ಯಾವುದೇ ಕಥೆಗಳನ್ನು ಸಮಕಾಲೀನಗೊಳಿಸಬಹುದು. ಆ ಮೂಲಕ ಸಮಕಾಲೀನ ಸಮಸ್ಯೆಗಳನ್ನು ಬಿಂಬಿಸಲು ರಂಗಭೂಮಿಗೆ ಅವಕಾಶವಿದೆ. ಮೈಸೂರಿನಲ್ಲಿ ಆ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಆದರೆ ಇನ್ನೂ ಬಹಳ ದೂರ ಕ್ರಮಿಸಬೇಕಿದೆ ಎಂದರು.

ರಂಗ ಪ್ರಯೋಗಗಳನ್ನು ಬೇರೆ ಬೇರೆ ರೀತಿಯಲ್ಲಿ ಮಾಡುತ್ತಿದ್ದರೂ ವಸ್ತು ವಿಷಯದಲ್ಲಿ ಪ್ರಯೋಗಗಳು ಕಡಿಮೆ. ಉದಾಹರಣೆಗೆ 70ರ ದಶಕದಲ್ಲಿ ಹೆಚ್ಚು ಕಾಡುತ್ತಿದ್ದ ವರದಕ್ಷಿಣೆ ಸಮಸ್ಯೆ ಮೊದಲಾದವು ಇಂದಿಗೂ ನಾಟಕಗಳಲ್ಲಿ ತುಂಬ ಚೆನ್ನಾಗಿ ಬಿಂಬಿತವಾಗುತ್ತಿವೆ. ಆದರೆ ಪ್ರಸ್ತುತದ ಸಮಸ್ಯೆಗಳು ನಾಟಕ ರೂಪದಲ್ಲಿ ಬರಬೇಕಿರುವ ಅಗತ್ಯ ಹೆಚ್ಚಿದೆ. ಈ ನಿಟ್ಟಿನಲ್ಲಿ ನಾಟಕಕಾರರು ಇನ್ನು ಹೆಚ್ಚಿನ ಸೃಜನಶೀಲ ನಾಟಕಗಳನ್ನು ಬರೆಯುವ ಮೂಲಕ ವರ್ತಮಾನದ ಸಮಸ್ಯೆಗಳನ್ನು ನಾಟಕಗಳಲ್ಲಿ ಬಿಂಬಿಸಬೇಕಿದೆ ಎಂದು ತಿಳಿಸಿದರು.

ಕೋವಿಡ್ ಸಂದರ್ಭದಲ್ಲಿನ ಜನರ ಪರದಾಟ, ಡಿಜಿಟಲ್ ಯುಗದಲ್ಲಿ ಯುವ ಜನರು ಎದುರಿಸುತ್ತಿರುವ ಸಮಸ್ಯೆಗಳು ನಾಟಕಗಳಾಗಬೇಕಿದೆ. ಇಂದು ಮಹಿಳೆಯರ ಮೇಲಿನ ದೌರ್ಜನ್ಯ ರೂಪಾಂತರಗೊಂಡಿದ್ದು, ಇಂತಹ ದೌರ್ಜನ್ಯವನ್ನು ಒಪ್ಪಿಕೊಳ್ಳುವಂತಹ ಸಮಾಜವೊಂದು ನಮ್ಮ ನಡುವೆ ಇದೆ. ಇದನ್ನು ನಾಟಕದಲ್ಲಿ ಅನಾವರಣಗೊಳಿಸುವ ಅಗತ್ಯವಿದೆ. ಈ ರೀತಿಯ ವಸ್ತು ವಿಷಯದಲ್ಲಿ ಪ್ರಯೋಗಗಳು ಇನ್ನೂ ಹೆಚ್ಚು ಆಗಬೇಕಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಟ್ರಸ್ಟ್ ಅಧ್ಯಕ್ಷ ಕೃಷ್ಣಜನಮನ ಮಾತನಾಡಿ, ನಮ್ಮ ಟ್ರಸ್ಟ್‌ನಿಂದ 25 ದಿನಗಳ ರಂಗ ತರಬೇತಿ ಶಿಬಿರ ನಡೆಸಲಾಗಿದ್ದು, ಇದರಲ್ಲಿ ಭಾಗವಹಿಸಿದ್ದ 8 ವರ್ಷ ಮೇಲ್ಪಟ್ಟ 40 ಮಂದಿಯನ್ನು ಎರಡು ತಂಡಗಳಾಗಿ ಮಾಡಿ, ನಾಟಕೋತ್ಸವದಲ್ಲಿ ತಲಾ ಒಂದು ನಾಟಕ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಇಂದು ಪ್ರದರ್ಶನಗೊಳ್ಳುವ ನಾಟಕದಲ್ಲಿ ಒಬ್ಬರ ಹೊರತಾಗಿ ಉಳಿದವರೆಲ್ಲಾ ಇದೇ ಮೊದಲ ಬಾರಿಗೆ ಪ್ರದರ್ಶನ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಬಳಿಕ ಪ್ರೊ.ಲಿಂಗದೇವರು ಹಳೆಮನೆ ರಚನೆಯ 'ಅಕ್ಕ' ನಾಟಕ ಪ್ರದರ್ಶನಗೊಂಡಿತು. ಈ ನಾಟಕ ಅಕ್ಕಮಹಾದೇವಿ ಅವರ ಬದುಕು ಮತ್ತು ಆದರ್ಶಗಳನ್ನು ಅನಾವರಣಗೊಳಿಸಿತು. ಜ.8ರಂದು 'ಯಾನ' ನಾಟಕ ಪ್ರದರ್ಶನಗೊಳ್ಳಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ರಂಗನಿರ್ದೇಶಕ ಡಿ.ನಾಗೇಂದ್ರ ಕುಮಾರ್ ಮತ್ತಿತರರು ಹಾಜರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಐಡೆಂಟಿಟಿ (ತ) + ಐಡೆಂಟಿಟಿ (ಮ) | 2+2 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಯುಐ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ವನವಾಸ್ (ಹಿಂ) | 3 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಗನ ಅಂಡ್ ರೋಜಸ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಯುಐ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ವಿಡುದಲೈ–2(ತ) | 4 ಪ್ರದರ್ಶನಗಳು |
| **ಸಂಗಂ** | |
| ಮ್ಯಾಕ್ಸ್(ಕ) | 4 ಪ್ರದರ್ಶನಗಳು |
| **ಲಿಡೋ** | |
| ಲಕ್ಕಿ ಭಾಸ್ಕರ್ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಬೇಬಿಜಾನ್ (ಹಿ) | 4 ಪ್ರದರ್ಶನಗಳು |
| **ಪ್ರಭಾ** | |
| ಗನ್ ಅಂಡ್ ರೋಜಸ್(ಕ) + ಪುಷ್ಪ–2 (ಕ) | 2+2 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ. |
| ಸ್ಕ್ರೀನ್ 2 | ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೋ (ಹಿಂ): ರಾ.7ಕ್ಕೆ, ಮಾರ್ಕೋ (ಮ): ರಾ.10.10ಕ್ಕೆ. |
| ಸ್ಕ್ರೀನ್ 3 | ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ. |
| ಸ್ಕ್ರೀನ್ 4 | ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ. |

### ಐನಾಕ್ಸ್ ಮೂವೀಸ್
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ. |
| ಸ್ಕ್ರೀನ್ 2 | ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ. |
| ಸ್ಕ್ರೀನ್ 3 | ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ. |
| ಸ್ಕ್ರೀನ್ 4 | ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ರಾಜ್ಯ ಬಜೆಟ್ 2025: ಸಿದ್ಧತೆ ಆರಂಭಿಸಿದ ಸಿಎಂ ಸಿದ್ದರಾಮಯ್ಯ, ಬಜೆಟ್ ಗಾತ್ರ 4ಲಕ್ಷ ಕೋಟಿ ರೂಪಾಯಿಗೆ ಏರಿಕೆ ನಿರೀಕ್ಷೆ..!

ಬೆಂಗಳೂರು: 2025–26ನೇ ಸಾಲಿನ ಬಜೆಟ್ ಅನ್ನು ಹಣಕಾಸು ಇಲಾಖೆಯ ಜವಾಬ್ದಾರಿಯನ್ನೂ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 14 ರಂದು ಮಂಡಿಸಲಿದ್ದು, ಇದು ಸಿದ್ದರಾಮಯ್ಯ ಅವರ 16ನೇ ದಾಖಲೆಯ ಬಜೆಟ್ ಮಂಡನೆಯಾಗಿರಲಿದೆ,

ರಾಜ್ಯದಲ್ಲಿ ಜುಲೈ 2023ರಲ್ಲಿ 14ನೇ ಬಜೆಟ್ ಮಂಡಿಸಿದಾಗಲೇ ಅತಿ ಹೆಚ್ಚು ಬಜೆಟ್ ಮಂಡಿಸಿದ ದಾಖಲೆ ಸಿದ್ದರಾಮಯ್ಯ ಅವರ ಹೆಸರಿನಲ್ಲಿದೆ. 2024–25ನೇ ಸಾಲಿನ ಬಜೆಟ್ ಅನ್ನು ಫೆಬ್ರವರಿ ತಿಂಗಳಲ್ಲಿ ಮಂಡಿಸಿದ್ದರು. ಇದು ಅವರ 15ನೇ ಬಜೆಟ್ ಆಗಿತ್ತು

ಕರ್ನಾಟಕದ ಮಾಜಿ ರಾಜ್ಯಪಾಲರೂ ಆಗಿರುವ ಗುಜರಾತ್‌ನ ಮಾಜಿ ಆರ್ಥಿಕ ಸಚಿವ ವಜೂಬಾಯಿ ವಾಲಾ ಅವರು 18 ಬಾರಿ ಬಜೆಟ್ ಮಂಡಿಸುವ ಮೂಲಕ ದೇಶದಲ್ಲೇ ದಾಖಲೆ ನಿರ್ಮಿಸಿದ್ದಾರೆ. ಈ ದಾಖಲೆಯನ್ನು ಮುರಿಯಬೇಕೆಂದರೆ ಸಿದ್ದರಾಮಯ್ಯ ಅವರು ಇನ್ನೂ ಎರಡು ಬಜೆಟ್‌ಗಳನ್ನು ಮಂಡಿಸಬೇಕಾಗುತ್ತದೆ.

ಸಿದ್ದರಾಮಯ್ಯ ಅವರ 16ನೇ ಬಜೆಟ್ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬಜೆಟ್ ಗಾತ್ರ 4 ಲಕ್ಷ ಕೋಟಿ ರೂ.ಗಳನ್ನು ದಾಟಲಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಬಜೆಟ್ ಮಂಡನೆಗೆ ದಿನಗಣನೆ ಆರಂಭವಾಗಿದ್ದು. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಸೋಮವಾರದಿಂದ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿ, ಸಿದ್ಧತೆಗಳನ್ನು ಆರಂಭಿಸಲಿದ್ದಾರೆಂದು ತಿಳಿದುಬಂದಿದೆ.

ಈ ಸಭೆಗಳು ಬಜೆಟ್ ಮಂಡನೆಗೆ ಅಡಿಪಾಯ ಹಾಕಲಿದೆ. ಮುಖ್ಯಮಂತ್ರಿಗಳು ಸಮಾಜ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಆಹಾರ ಮತ್ತು ನಾಗರಿಕ ಸರಬರಾಜು, ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇರಿದಂತೆ ಪ್ರಮುಖ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

ಈ ಸಭೆಗಳು ಮುಖ್ಯಮಂತ್ರಿಗಳಿಗೆ ನಿರ್ಣಾಯಕವಾಗಿವೆ, ಏಕೆಂದರೆ ಮುಖ್ಯಮಂತ್ರಿಗಳು ಬೇಡಿಕೆಗಳನ್ನು ಸಮತೋಲನಗೊಳಿಸುವ ಸವಾಲಿನ ಕೆಲಸವನ್ನು ನಿಭಾಯಿಸಬೇಕಿದೆ. ಗ್ಯಾರಂಟಿ ಯೋಜನೆಗಳ ಒತ್ತಡ ಜೊತೆಗೆ ಅಭಿವೃದ್ಧಿಗೆ ಹಾಗೂ ಬೇಡಿಕೆಗಳಿಗೂ ಮುಖ್ಯಮಂತ್ರಿಗಳು ಆದ್ಯತೆ ನೀಡಬೇಕಿದೆ. ಮುಂದಿನ ದಿನಗಳಲ್ಲಿ ನಡೆಯುವ ಈ ಸಭೆಗಳು ಮತ್ತು ಬಜೆಟ್ ಪೂರ್ವ ಸಭೆಗಳು ರಾಜ್ಯದ ಆರ್ಥಿಕ ಕಾರ್ಯಕ್ಷಮತೆಯನ್ನು ಪರಿಶೀಲಿಸಲಿವೆ. ಆದಾಯ ಉತ್ಪಾದನೆಯನ್ನು ನಿರ್ಣಯಿಸುತ್ತವೆ ಮತ್ತು ಹಿಂದಿನ ವರ್ಷದಿಂದ ಹಣಕಾಸಿನ ಅಂತರವನ್ನು ಗುರುತಿಸಲಿವೆ.

ಸಭೆಯಲ್ಲಿ ಆದಾಯ ಉತ್ಪಾದನೆ ಮತ್ತು ತೆರಿಗೆ ತಂತ್ರಗಳನ್ನು ರೂಪಿಸಲಿದ್ದು, ತಜ್ಞರ ಅಭಿಪ್ರಾಯವನ್ನೂ ಮುಖ್ಯಮಂತ್ರಿಗಳು ಸಂಗ್ರಹಿಸಲಿದ್ದಾರೆ. ಈ ಕಾರ್ಯತಂತ್ರಗಳ ಮಧ್ಯೆ, ಸರ್ಕಾರವು ಗ್ಯಾರಂಟಿ ಯೋಜನೆಗಳ ನಿರ್ವಹಿಸುವುದು, ಪ್ರಮುಖ ಮೂಲಸೌಕರ್ಯ ಯೋಜನೆಗಳನ್ನು ಪೂರ್ಣಗೊಳಿಸುವುದು, ಬೆಳೆಯುತ್ತಿರುವ ಸಾಲದ ಹೊರೆಯನ್ನು ನಿರ್ವಹಿಸುವುದು ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ನಿಧಿಯ ಪರಿಣಾಮಕಾರಿ ಹಂಚಿಕೆಯನ್ನು ಖಚಿತಪಡಿಸಿಕೊಳ್ಳುವುದು ಸೇರಿದಂತೆ ಇತರೆ ವಿಚಾರಗಳ ಕುರಿತಂತೆಯೂ ತಂತ್ರಗಳನ್ನು ರೂಪಿಸುವುದರತ್ತ ಗಮನಹರಿಸಲಿದೆ.

# ರಾಜ್ಯದ ಪ್ರತಿಯೊಬ್ಬರೂ ಕನ್ನಡ ರಾಜ್ಯೋತ್ಸವ ಆಚರಿಸುವಂತಾಗಬೇಕು

**ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಮತ**



ಕನ್ನಡ ರಾಜ್ಯೋತ್ಸವ ಹಾಗೂ ಕುವೆಂಪು ಜಯಂತಿ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಜ.6(ಎಸ್‌ಪಿಎನ್)– ಕನ್ನಡ ರಾಜ್ಯೋತ್ಸವವನ್ನು ಬರೀ ಹೋರಾಟಗಾರರು ಆಚರಿಸುವುದಲ್ಲ. ಬದಲಾಗಿ, ಕರ್ನಾಟಕದ ಪ್ರತಿಯೊಬ್ಬ ಪ್ರಜೆಯೂ ಆಚರಿಸುವಂತಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟರು.

ಮೈಸೂರು ವಿವೇಕಾನಂದ ನಗರದ ವಿವೇಕಾನಂದ ವೃತ್ತದಲ್ಲಿ ಕರ್ನಾಟಕ ಸೇನಾ ಪಡೆ ವತಿಯಿಂದ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ, ಕುವೆಂಪು ಜಯಂತಿ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಕರ್ನಾಟಕ ಏಕೀಕರಣಕ್ಕಾಗಿ ಹಲವು ಮಹಾನೀಯರು ಹೋರಾಟ ನಡೆಸಿದ್ದರು. ಇದರ ಫಲವಾಗಿ ಭಾಷಾವಾರು ಪ್ರಾಂತ್ಯ ರಚನೆಯಾದಾಗ ಕನ್ನಡ ಮಾತನಾಡುವ ಜನರಿಗೆ ಮೈಸೂರು ರಾಜ್ಯ ಸ್ಥಾಪನೆಯಾಯಿತು. ತದನಂತರ 1973ರಲ್ಲಿ ಕರ್ನಾಟಕ ಎಂದು ಮರು ನಾಮಕರಣವಾಯಿತು ಎಂದು ತಿಳಿಸಿದರು.

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಿ, ಕನ್ನಡ ಮಾತನಾಡುವವರನ್ನು ಪ್ರೋತ್ಸಾಹಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ವಿವಿಧ ಕ್ಷೇತ್ರದ ಸಾಧಕರಾದ ಎಪಿಎನ್ ಪ್ರಾಪರ್ಟಿಸ್‌ನ ಪಾಲುದಾರ ಎ.ಪಿ.ನಾಗೇಶ್, ಕರ್ನಾಟಕ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ರಮೇಶ್, ಉದ್ಯಮಿ ಕೆ.ಎನ್.ಧನ್ಯಕುಮಾರ್, ಗೀತಾಂಜಲಿ ಎಜುಕೇಶನ್ ಟ್ರಸ್ಟ್ ಮತ್ತು ಮಹಾತ್ಮ ಗಾಂಧಿ ಬಿಎಡ್ ಕಾಲೇಜಿನ ಅಧ್ಯಕ್ಷ ಟಿ.ಜೆ.ಆದಿಶೇಷಗೌಡ, ಬಿಜೆಪಿ ಮುಖಂಡರಾದ ಶ್ರೀಮತಿ ಸುಮಿತ್ರ ರಮೇಶ್, ಮೈಸೂರು ದೇವರಾಜ ಮಾರುಕಟ್ಟೆ ಅಧ್ಯಕ್ಷ ಕೆ.ದಿನೇಶ್, ರಾಜ್ಯ ಸರ್ಕಾರಿ 'ಡಿ' ಗ್ರೂಪ್ ನೌಕರರ ಸಂಘದ ಅಧ್ಯಕ್ಷ ಡಾ.ಸಿ. ವೆಂಕಟೇಶ್, ಧಾರ್ಮಿಕ ಕ್ಷೇತ್ರದ ಶ್ರೀಶ ಭಟ್, ಹಿರಿಯ ಪತ್ರಕರ್ತ ಬಿ.ರಾಘವೇಂದ್ರ, ದಿ ಮೈಸೂರ್ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್. ಅರವಿಂದ್, ಕನ್ನಡ ಪರ ಹೋರಾಟಗಾರ ಬಿ.ಎ. ಶಿವಶಂಕರ್, ವೀರಗಾಸೆ ಕಲಾವಿದ ಅಂಬಳೆ ಶಿವಣ್ಣ ಅವರಿಗೆ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ, ಗಂಗಾಧರ್ ಸಿಹಿ ವಿತರಿಸಿದರು. ಬಿಜೆಪಿ ಮುಖಂಡ ಸಿ.ವೈ.ಶಿವೇಗೌಡ, ಬಡ ವಿದ್ಯಾರ್ಥಿಗಳಿಗೆ ಬಟ್ಟೆ, ಪುಸ್ತಕ ಸಾಮಗ್ರಿಗಳನ್ನು ವಿತರಣೆ ಮಾಡಿದರು. ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವೇದಿಕೆಯಲ್ಲಿ ಕರ್ನಾಟಕ ಸೇನಾ ಪಡೆಯ ರಾಜ್ಯಾಧ್ಯಕ್ಷ ಚಾ.ರಾಂ.ಶ್ರೀನಿವಾಸ ಗೌಡ, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಲಯ ಉಪಾಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್, ಹನುಮಂತಯ್ಯ, ಪ್ರಭುಶಂಕರ, ವಿಜಯೇಂದ್ರ, ರವಿನಾಯಕ, ವರಕೂಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ಮೊಗಣ್ಣಾಚಾರ್, ನೇಹ, ಭಾಗ್ಯಮ್ಮ, ಪ್ರಜೀಶ್, ಅಂಬಾ ಅರಸ್, ನರಸಿಂಹೇಗೌಡ, ಪ್ರಭಾಕರ್, ಮಲ್ಲೇಶ್, ಮಹದೇವ ಸ್ವಾಮಿಗೌಡ, ಗೀತಾಗೌಡ, ನಾರಾಯಣಗೌಡ, ಬಿ.ಟಿ.ಬಸವರಾಜು, ಪ್ರಕಾಶ್, ಲಕ್ಷ್ಮೀ, ಭಾಗ್ಯಮ್ಮ ಮಲ್ಲೇಶ್, ಶಿವ ರಾಮೇಗೌಡ, ಎಳನೀರು ರಾಮಣ್ಣ, ದರ್ಶನ್ ಗೌಡ ಸೇರಿದಂತೆ ಇತರರಿದ್ದರು.

# ಕರ್ನಾಟಕ, ಕೇರಳದ ಸಿಂಡಿಕೇಟ್ ಮೂಲಕ ಹಣ ಸಂಗ್ರಹಿಸುತ್ತಿದ್ದ ಪಿಎಫ್‌ಐ ಉಗ್ರ ಬಂಧನ

ನವದೆಹಲಿ, ಜ.6– ಕರ್ನಾಟಕ ಹಾಗೂ ಕೇರಳದಲ್ಲಿರುವ ಸಿಂಡಿಕೇಟ್‌ಗಳ ಮೂಲಕ ದುಬೈನಿಂದ ಬರುತ್ತಿದ್ದ ಅಕ್ರಮ ಹಣವನ್ನು ಭಾರತದ ಪಿಎಫ್‌ಐ ಕೇಡರ್‌ಗಳಿಗೆ ಉಗ್ರ ಚಟುವಟಿಕೆಗಾಗಿ ವಿತರಿಸುತ್ತಿದ್ದ ಮೊಹಮ್ಮದ್ ಸಜ್ಜಾದ್ ಆಲಂ ಎಂಬಾತನನ್ನು ಎನ್‌ಐಎ ಅಧಿಕಾರಿಗಳು ಶನಿವಾರ ಬಂಧಿಸಿದ್ದಾರೆ.

ಬಿಹಾರದ ಚಂಪಾರಣ್ ಮೂಲದವನಾದ ಆಲಂ, ದುಬೈನಿಂದ ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿಯುತ್ತಿದ್ದಂತೆಯೇ ರಾಷ್ಟ್ರೀಯ ತನಿಖಾಧಿಕಾರಿಗಳ ತಂಡ ಬಂಧಿಸಿದೆ. ನಿಷೇಧಿತ ಪಿಎಫ್‌ಐ ಸಂಘಟನೆಗೆ ದುಬೈನಿಂದ ಹಣ ಸರಬರಾಜು ಮಾಡುತ್ತಿದ್ದ ಆಲಂ ಮೇಲೆ ಈ ಮೊದಲೇ ಅರೆಸ್ಟ್ ವಾರಂಟ್ ಹಾಗೂ ಲುಕ್ ಔಟ್ ನೋಟಿಸ್ ಜಾರಿ ಮಾಡಲಾಗಿತ್ತು.

ಪಿಎಫ್‌ಐನ ಈ ಕೇಡರ್ ಸಮಾಜದ ವಿವಿಧ ಧರ್ಮ ಹಾಗೂ ಗುಂಪುಗಳ ನಡುವೆ ದ್ವೇಷ ಹಾಗೂ ಭಯದ ವಾತಾವರಣ ಸೃಷ್ಟಿಸಿ ಶಾಂತಿ, ಸಾಮರಸ್ಯ ಕದಡುತ್ತಿತ್ತು. ಜೊತೆಗೆ, 2047ರ ಹೊತ್ತಿಗೆ ಭಾರತವನ್ನು ಇಸ್ಲಾಂ ದೇಶವನ್ನಾಗಿಸಲು ಕ್ರಿಮಿನಲ್ ಶಕ್ತಿಗಳನ್ನು ಬಳಸಿ ತನ್ನ ಸಿದ್ಧಾಂತಗಳನ್ನು ಹರಡುತ್ತಿತ್ತು. ಇದರ ಮೇಲೆ 2022ರ ಜುಲೈನಲ್ಲೇ ಬಿಹಾರದ ಫೂಲ್ವಾರಿ ಶರೀಫ್ ಪೊಲೀಸರು ಪ್ರಕರಣ ದಾಖಲಿಸಿದ್ದರು. ಪ್ರಕರಣವನ್ನು ತನ್ನ ಕೈಗೆತ್ತಿಕೊಂಡ ಎನ್‌ಐಎ 17 ಜನರ ವಿರುದ್ಧ ಚಾರ್ಜ್ ಶೀಟ್ ಸಿದ್ಧಪಡಿಸಿದ್ದು, ಬಂಧಿತ ಆಲಂ 18ನೇಯವನು.

**ಪಿಎಫ್‌ಐ ಕಾರ್ಯಕರ್ತನ ಹಣ ಬಿಡುಗಡೆಗೆ ಕೋರ್ಟ್ ನಕಾರ:** ಭಯೋತ್ಪಾದನೆ ಚಟುವಟಿಕೆಯಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿದ್ದ ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಕಾರ್ಯಕರ್ತ ಎನ್ನಲಾದ ವ್ಯಕ್ತಿಯ ಮನೆಯಿಂದ ನಗರದ ಕೆ.ಜಿ.ಹಳ್ಳಿ ಠಾಣಾ ಪೊಲೀಸರು ವಶಪಡಿಸಿಕೊಂಡಿರುವ ಒಟ್ಟು 1437600 ರೂ. ಬಿಡುಗಡೆ ಮಾಡಲು ಆದೇಶಿಸುವಂತೆ ಕೋರಿ ಆರೋಪಿಯ ತಂದೆ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದ್ದು, ಅರ್ಜಿದಾರರಿಗೆ 10 ಸಾವಿರ ರೂ. ದಂಡ ವಿಧಿಸಿದೆ. ಪ್ರಕರಣದಲ್ಲಿ ಮೂರನೇ ಆರೋಪಿಯಾಗಿರುವ ಶೇಕ್ ಇಜಾಜ್ ಅಲಿ ಅವರ ತಂದೆ ಕಲಬುರಗಿಯ ಶೇಕ್ ಸಾದಿಕ್ ಅಲಿ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್. ಮುದಗಲ್ ಮತ್ತು ನ್ಯಾಯಮೂರ್ತಿ ವಿಜಯಕುಮಾರ ಎ.ಪಾಟೀಲ ಅವರಿದ್ದ ವಿಭಾಗೀಯ ಪೀಠ ಈ ಆದೇಶ ಮಾಡಿದೆ.

# ಶಾಲಾ ಶಿಕ್ಷಣ ಇಲಾಖೆಯ 11 ಮಂದಿ ನೌಕರರಿಗೆ ಬಡ್ತಿ



ಶಾಲಾ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 11 ಮಂದಿಗೆ ಬಡ್ತಿ ನೀಡಿದ ಡಿಡಿಪಿಐ ಎಸ್.ಟಿ.ಜವರೇಗೌಡ ಅವರನ್ನು ನೌಕರರು ಅಭಿನಂದಿಸಿದರು.

ಮೈಸೂರು, ಜ.6(ಎಸ್‌ಪಿಎನ್)– ಮೈಸೂರು ಶಾಲಾ ಶಿಕ್ಷಣ ಇಲಾಖೆಯಲ್ಲಿ ಡಿ ದರ್ಜೆ, ಪ್ರಯೋಗಶಾಲಾ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ 11 ಮಂದಿಗೆ ಸೇವಾ ಹಿರಿತನ ಮೇರೆಗೆ ದ್ವಿತೀಯ ದರ್ಜೆ ಸಹಾಯಕರಾಗಿ ಬಡ್ತಿ ನೀಡಿ ಡಿಡಿಪಿಐ ಎಸ್.ಟಿ. ಜವರೇಗೌಡ ಆದೇಶಿಸಿದ್ದಾರೆ.

ಬಡ್ತಿ ಪಡೆದ ನೌಕರರಾದ ಅನಂತರಾಜು, ಪತ್ರಾಂಕಿತ ಸಹಾಯಕ ಕೆ.ಜಿ.ಜಯಕಾಂತು, ಎಂ.ಕೆ.ಗಣೇಶ್, ಎಫ್‌ಡಿಎ ಗುರುಪ್ರಸಾದ್, ಎಸ್‌ಡಿಎ ಮೇಘಶ್ರೀ ಅವರು ಬಡ್ತಿ ಪ್ರಮಾಣ ಪತ್ರ ಪಡೆದರು. ಈ ಹಿನ್ನಲೆಯಲ್ಲಿ ಡಿಡಿಪಿಐ (ಆಡಳಿತ) ಎಸ್.ಟಿ.ಜವರೇಗೌಡ ರನ್ನು ಮೈಸೂರು ಜಿಲ್ಲಾ ಬೋಧಕೇತರ ಸಂಘದ ಅಧ್ಯಕ್ಷ, ಡಿಡಿಪಿಐ ಕಚೇರಿ ಅಧೀಕ್ಷಕ ಕೆ.ಬಿ. ಆನಂದ, ಉಪಾಧ್ಯಕ್ಷ ಹೆಚ್.ಎಂ. ಶ್ರೀನಿವಾಸ ಪ್ರಸಾದ್, ಖಜಾಂಚಿ ಸಿ.ಎನ್. ಸುಬ್ರಹ್ಮಣ್ಯಬಾಬು ಅಭಿನಂದಿಸಿದರು.

# ಫೆ.10 ರಿಂದ ಬೆಂಗಳೂರಿನಲ್ಲಿ ಏಷ್ಯಾದ ಅತಿದೊಡ್ಡ ಏರ್ ಶೋ



ಸಂಗ್ರಹ ಚಿತ್ರ

ಬೆಂಗಳೂರು, ಜ.6– ಏಷ್ಯಾದ ಅತಿದೊಡ್ಡ ವೈಮಾನಿಕ ಪ್ರದರ್ಶನದ 15ನೇ ಆವೃತ್ತಿಯ ಏರೋ ಇಂಡಿಯಾ–2025ಕ್ಕೆ ದಿನಾಂಕ ನಿಗದಿಯಾಗಿದೆ. ಫೆಬ್ರವರಿ 10 ರಿಂದ 14ರವರೆಗೆ ಬೆಂಗಳೂರಿನ ಯಲಹಂಕದ ವಾಯು ನೆಲೆಯಲ್ಲಿ ನಡೆಯಲಿದೆ.

'ರನ್‌ವೇ ಟು ಎ ಬಿಲಿಯನ್ ಆಪರ್ಚುನಿಟೀಸ್' (ಬಿಲಿಯನ್ ಅವಕಾಶಗಳಿಗೆ ರನ್ ವೇ) ಎಂಬ ವಿಶಾಲ ಧ್ಯೇಯದೊಂದಿಗೆ ನಡೆಯಲಿರುವ ಈ ಕಾರ್ಯಕ್ರಮ ವಿದೇಶಿ ಮತ್ತು ಭಾರತೀಯ ಸಂಸ್ಥೆಗಳ ನಡುವಿನ ಪಾಲುದಾರಿಕೆಯನ್ನು ರೂಪಿಸಲು ಮತ್ತು ಜಾಗತಿಕ ಮೌಲ್ಯ ಸರಣಿಯಲ್ಲಿ ದೇಶೀಕರಣ ಪ್ರಕ್ರಿಯೆಯನ್ನು ಮತ್ತಷ್ಟು ವೇಗಗೊಳಿಸಲು ಹೊಸ ಮಾರ್ಗಗಳ ಅನ್ವೇಷಣೆಗೆ ವೇದಿಕೆಯನ್ನು ಒದಗಿಸುತ್ತದೆ.

ಕಾರ್ಯಕ್ರಮದ ಮೊದಲ ಮೂರು ದಿನಗಳು (ಫೆಬ್ರವರಿ 10, 11 ಮತ್ತು 12) ವ್ಯವಹಾರದ ದಿನಗಳಾಗಿರುತ್ತವೆ. ಆದರೆ 13 ಮತ್ತು 14ರಂದು ಸಾರ್ವಜನಿಕ ವೀಕ್ಷಣೆಗೆ ಅವಕಾಶ ನೀಡಲಾಗಿದೆ. ಈ ಕಾರ್ಯಕ್ರಮ ಏರೋಸ್ಪೇಸ್ ವಲಯದಿಂದ ದೊಡ್ಡ ಶ್ರೇಣಿಯ ಮಿಲಿಟರಿ ವೇದಿಕೆಗಳ ವಾಯು ಪ್ರದರ್ಶನ ಮತ್ತು ಸ್ಥಿರ ಪ್ರದರ್ಶನಗಳನ್ನು ಒಳಗೊಂಡಿದೆ.

ಇದರಲ್ಲಿ ಪೂರ್ವಭಾವಿ ಕಾರ್ಯಕ್ರಮ (ಕರ್ಟನ್ ರೈಸರ್ ಈವೆಂಟ್), ಉದ್ಘಾಟನಾ ಕಾರ್ಯಕ್ರಮ, ರಕ್ಷಣಾ ಸಚಿವರ ಸಮಾವೇಶ, ಸಿಇಓಗಳ ದುಂಡು ಮೇಜಿನ ಸಭೆ, ಮಂಥನ್ ಸ್ಟಾರ್ಟ್–ಅಪ್ ಕಾರ್ಯಕ್ರಮ, ಉಸಿರು ಬಿಗಿಹಿಡಿದು ನೋಡುವ ಮೈನವಿರೇಳಿಸುವ ಏರ್ ಶೋಗಳಿವೆ, ಜೊತೆಗೆ ಇಂಡಿಯಾ ಪೆವಿಲಿಯನ್ ಅನ್ನು ಒಳಗೊಂಡಿರುವ ದೊಡ್ಡ ಪ್ರದರ್ಶನ ಪ್ರದೇಶ ಮತ್ತು ಏರೋಸ್ಪೇಸ್ ಕಂಪನಿಗಳ ವ್ಯಾಪಾರ ಮೇಳವನ್ನು ಒಳಗೊಂಡಿದೆ.

ಇಂಡಿಯಾ ಪೆವಿಲಿಯನ್ ತನ್ನ ಮೇಕ್–ಇನ್–ಇಂಡಿಯಾ ಉಪಕ್ರಮಕ್ಕೆ ಸ್ಥಳೀಯ ರಕ್ಷಣಾ ಉತ್ಪಾದನಾ ಸಾಮರ್ಥ್ಯಗಳ ವೃದ್ಧಿ ಮತ್ತು ಭವಿಷ್ಯದ ಸಂಭನೀಯಗಳು ಸೇರಿದಂತೆ ಜಾಗತಿಕ ಹಂತಕ್ಕೆ ಸಿದ್ಧವಾಗಿರುವ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಪ್ರದರ್ಶಿಸುವ ಮೂಲಕ ಭಾರತದ ಬದ್ಧತೆಯನ್ನು ಬಿಂಬಿಸುತ್ತದೆ. ಭಾರತೀಯ ನವೋದ್ಯಮಗಳ ಪ್ರಚಾರಕ್ಕಾಗಿ ಏರೋ ಇಂಡಿಯಾ 2025ರಲ್ಲಿ ಫೋಕಸ್ ಏರಿಯಾ (ಕೇಂದ್ರೀಕೃತ ಪ್ರದೇಶ)ವನ್ನು ಹೊಂದಿರಲಿದೆ ಮತ್ತು ನವೋದ್ಯಮಗಳನ್ನು ಅಭಿವೃದ್ಧಿಪಡಿಸಿರುವ ಅತ್ಯಾಧುನಿಕ ತಂತ್ರಜ್ಞಾನಗಳು/ಉತ್ಪನ್ನಗಳ ವ್ಯಾಪಕ ಶ್ರೇಣಿಯನ್ನು ವಿಶೇಷ ಐಡೆಕ್ಸ್ ಪೆವಿಲಿಯನ್‌ನಲ್ಲಿ ಪ್ರದರ್ಶಿಸಲಾಗುವುದು.

ಇದಲ್ಲದೆ, ಡೈನಾಮಿಕ್ ಏರೋಬ್ಯಾಟಿಕ್ ಪ್ರದರ್ಶನಗಳು ಮತ್ತು ಲೈವ್ ತಂತ್ರಜ್ಞಾನ ಪ್ರದರ್ಶನಗಳು ವಿಶಿಷ್ಟ ಅನುಭವವನ್ನು ಒದಗಿಸುತ್ತವೆ, ಆಧುನಿಕ ಏರೋಸ್ಪೇಸ್ ಪ್ಲಾಟ್‌ಫಾರ್ಮ್‌ಗಳು ಮತ್ತು ತಂತ್ರಜ್ಞಾನಗಳ ಸಾಮರ್ಥ್ಯವನ್ನು ಪ್ರದರ್ಶಿಸುತ್ತವೆ. ಕಾರ್ಯಕ್ರಮದ ಭಾಗವಾಗಿ ವಿವಿಧ ಪ್ರಮುಖ ವಿಷಯಗಳ ಕುರಿತು ಹಲವು ವಿಚಾರ ಸಂಕಿರಣಗಳನ್ನೂ ಸಹ ಆಯೋಜಿಸಲಾಗಿದೆ.



## ಸಾರ್ವಜನಿಕ ಪ್ರಕಟಣೆ

ಮೈಸೂರು ಸಿಟಿ, (ನಜರಬಾದ್ ಮೊಹಲ್ಲಾ) ದೊಡ್ಡರಾಮಮಂದಿರದ ಮುಂಭಾಗದ ಬೀದಿ, ಕಾರ್ಪೊರೇಷನ್ ಖಾಲಿ ನಿವೇಶನ ಸಂಖ್ಯೆ: 139 ಹೊಸ ಎನ್ 29 ಒಟ್ಟು (1240 ಚದರಡಿ / 115.2002 ಚದರ ಮೀಟರು) ನಿವೇಶನ ಸುಶೀಲ, ಶಾಲಿನಿ ಜೆ. ಜೆ. ದೀಪು, ಪಲ್ಲವಿ. ಜೆ.ಜೆ. ಜಯಪ್ರದ ರವರುಗಳಿಂದ ಇಂದಿನ ಮಾರುಕಟ್ಟೆ ಬೆಲೆಯಲ್ಲಿ ಮೈಸೂರು ನಗರ, (ಚಾಮರಾಜ ಮೊಹಲ್ಲಾ) ಸೋನಾರ್ ಬೀದಿ, ನೇ ನಂಬರ್ ಮನೆಯಲ್ಲಿ ವಾಸವಾಗಿರುವ ಶ್ರೀ ಬಗದಾಜಿ ಮಾಲೀ ರವರ ಮಗ ಸುಮಾರು 42 ವರ್ಷ ವಯಸ್ಸಿನ ಶ್ರೀ ರಮೇಶ್ ಕುಮಾರ್ ಮಾಲಿರವರು ಕ್ರಯಕ್ಕೆ ಪಡೆಯಲು ಇಷ್ಟ ಪಟ್ಟಿರುತ್ತಾರೆ.

ಈ ಸ್ವತ್ತು ಇತರೆ ವಾರಸು ಹಕ್ಕುದಾರರು ಹಿತಾಸಕ್ತಿ ಇರುವವರು ಇದ್ದಲ್ಲಿ 7 ದಿನಗಳೊಳ ಗಾಗಿ ದಾಖಲೆ ಸಹಿತ ವಿ.ವಿ. ರೇಣುಕಾಸ್ವಾಮಿ ವಿಳಾಸಕ್ಕೆ ಲಿಖಿತ ರೂಪದಲ್ಲಿ ಖುದ್ದಾಗಿ ತಕ ರಾರು ಸಲ್ಲಿಸುವುದು. ನಂತರ ಬಂದ ಅರ್ಜಿಗಳಿಗೆ ಮಾನ್ಯತೆ ಇರುವುದಿಲ್ಲ.

Sd/- C.R. Seetharam, B.Sc., LL.B., Advocate & Notary, Room No. 2, Halal Memon Mosque, Upstairs, Shivarampet, Mysore-570 001. Mob: 6362949332

ಮೈಸೂರು
ದಿನಾಂಕ: 4–1–2025

## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಹಾಲಿ ಮಾಲೀಕರಾದ ಶ್ರೀ. ಸತ್ಯನಾರಾಯಣ ಕೆ.ಎಚ್, ಬಿನ್. ಲೇಟ್. ಹರಿಹರರಾವ್ ಕೆ ಮತ್ತು ಇವರ ಕುಟುಂಬದವರು, ಇವರ ವಾಸ: ನಂಬರ್ 271, 2ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಬೃಂದಾವನ ಬಡಾವಣೆ 1ನೇ ಹಂತ, ಯಾದವಗಿರಿ ಅಂಚೆ, ಮೈಸೂರು ಸಿಟಿ – 570020 ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾಧ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ವಿಳಾಸಕ್ಕೆ ಈ ಪ್ರಕಟಣೆಯ ದಿನಾಂಕದಿಂದ ಏಳು (7) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

**ಷೆಡ್ಯೂಲ್ ಸ್ವತ್ತಿನ ವಿವರ**

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಗೋಕುಲಂ 1ನೇ ಹಂತ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ 43/2, ಇದರ ವಿಸ್ತೀರ್ಣ ಪೂರ್ವ–ಪಶ್ಚಿಮ 13.71 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ (13.83 + 14.02)/2 ಮೀಟರ್‌ಗಳು, ಒಟ್ಟು 190.91 ಚದರ ಮೀಟರ್‌ಗಳು (ಹಳೆ ನಂಬರ್ 43 ರ ಒಟ್ಟು ವಿಸ್ತೀರ್ಣ 316.76 ಚದರ ಮೀಟರ್‌ನಿಂದ ಉಪ ವಿಭಾಗವಾಗಿದೆ), ಸದರಿ ಸ್ವತ್ತು ಮೈಸೂರು ಮಹಾನಗರ ಪಾಲಿಕೆ, ಮೈಸೂರು ವ್ಯಾಪ್ತಿಯಲ್ಲಿದ್ದು, ನಮೂನೆ–2 ರಂತೆ ಸ್ವತ್ತಿನ ಸಂಖ್ಯೆ 36–1–53–16/43/2 ಹಾಗೂ ಇದರ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ – 43/1; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ – 42; ಉತ್ತರಕ್ಕೆ: ರಸ್ತೆ; ದಕ್ಷಿಣಕ್ಕೆ: ನಿವೇಶನ ಸಂಖ್ಯೆ 34.

**Rohith K.C,** Advocate,
Office: 1st Floor, K.G. Koppal, Mysuru.
Residence: Door No. 450, SVP Nagar, Nadanahallli, Mysuru - 570028.
Mobile : 9945748684
e-mail: kcrohithlaw@gmail.com

ಸ್ಥಳ: ಮೈಸೂರು
ದಿನಾಂಕ: 07–01–2025

## ನಿಧನ



**ಚಿರಂಜೀವಿಗೌಡ.ಎಸ್**

(ಯ॥ ರಾಮಣ್ಣ ಎನ್.ಆರ್.ಮೊಹಲ್ಲಾ, ಮೈಸೂರು ಇವರ ಮೊಮ್ಮಗ)

ಇವರು ದಿ: 06.01.2025 ರಂದು ದೈವಾಧೀನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ದಿ: 07.01.2025 ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಎನ್.ಆರ್.ಮೊಹಲ್ಲಾ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು

ದುಃಖತಪ್ತರು: ಕುಟುಂಬವರ್ಗ

9986573489 | 9986856496



## ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು



## State Bank of India

Administrative Office, Sahukar Channaiah Road, Saraswathipuram, Mysuru - 570 009

**Notice Inviting Expression of Interest (EOI)**

State Bank of India, Administrative Office, Mysuru invites EOI from residential property owners who intend to offer the property on **rent / lease basis.** Bank wishes to establish it's executive guest house in one of the reputed residential localities.

The house should be in a single ground floor with an area of approximately **4000 to 5000 sq feet.** The house should have 4-5 bed rooms and have a separate drawing room, dining hall, kitchen, servant quarters, small garden, etc., Should have adequate parking place for the vehicles.

The owners of properties with above facilities may contact the **Chief Manager-HR, State Bank of India**, Administrative Office, Sahukar Channaiah Road, Maruthi Temple Circle, Saraswathipuram, Mysuru during office hours before 20.01.2025 for obtaining format of Offer Letter and any clarification. The Offer Letter / EOI shall be submitted in a sealed cover to the above address on or before **31.01.2025, 3.00 pm.**

State Bank of India reserves the right to accept or reject any or all offers without giving any reasons. Mediators are not entertained.

Sd/-
**Deputy General Manager**
SBI AO Mysuru